

ದುಡಿವ ಜನರ ಪ್ರಾಣಮಿತ್ರ
ಸಂಪುಟ 2 ಸಂಚಿಕೆ 23
ಜೂನ್ 08, 2008

ಜನಶಕ್ತಿ

ಕನ್ನಡ ವಾರಪತ್ರಿಕೆ
ರೂ. 5/-

ಬಿಜೆಪಿ ಗೆಲುವಿಗೆ ಯಾರು ಹೊಣೆ?







ಸಂಪುಟ ರಚನೆ
ಗಣಿ-ಭೂ ಮಾಫಿಯಾ ಮೇಲುಗೈ



ಡೀಸೆಲ್-ಪೆಟ್ರೋಲ್ ಬೆಲೆ ಏರಿಕೆ
ಖಾಸಗಿ ಕಂಪನಿಗಳಿಗೆ ಲಾಭದ ತೊರೆ
ಜನಸಾಮಾನ್ಯರ ಬೆನ್ನಿಗೆ ಬರೆ



ನೇಪಾಳದಲ್ಲಿ ರಾಜ ಪ್ರಭುತ್ವ ಅಂತ್ಯ

ಜನ ಬೆಲೆ ಏರಿಕೆಯ ಬಿಸಿಯಲ್ಲಿ ಸುಟ್ಟು ಕರಕಲಾಗಬೇಕೆ?

ಇದೊಂದು 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ, ಅಂತಾರಲ್ಲ ಹಾಗೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದ ಬೆಲೆ ಜೇರೆ ಏರುತ್ತಿದೆ. ಅದನ್ನು ನೋಡುತ್ತಾ, ನೋಡುತ್ತಲೂ ಜನ ಬೆವರುತ್ತಿದ್ದಾರೆ. ಆದರೆ ಈ ತೈಲ ಬೆಲೆ ಏರಿದಂತೆಲ್ಲಾ ನಮ್ಮ ಸರ್ಕಾರಕ್ಕೆ ಮತ್ತು ಖಾಸಗಿ ತೈಲ ಕಂಪನಿಗಳಿಗೆ ಒಳಗಿಂದೊಳಗೇ ಭಾರಿ ಉತ್ಪಾದಕ ಖುಷಿಯಾಗುತ್ತಿದೆ. ಏಕೆಂದರೆ ತೈಲ ಬೆಲೆ ಏರಿದಂತೆಲ್ಲಾ ತೈಲ ಕಂಪನಿಗಳ ಆದಾಯವೂ ಸಿಕ್ಕಾಪಟ್ಟೆ ಏರಿ ಏರಿ ಹೋಗುತ್ತಿದೆ.

ನಮ್ಮ ದೇಶದಲ್ಲಿ ರಿಲೆಯನ್ಸ್, ಎಸ್ಸಾರ್ ಮತ್ತು ಮೆಸರ್ಸ್ ಕೈರ್ನ್ಸ್ ನಂತಹ ಖಾಸಗಿ ಕಂಪನಿಗಳು ತೈಲ ಉತ್ಪಾದಿಸುತ್ತಿವೆ. ಸರ್ಕಾರವು ಕಚ್ಚಾ ತೈಲ ಹೊರತೆಗೆಯಲು ಈ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಾಗ ಕಚ್ಚಾ ತೈಲದ ಬೆಲೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ಯಾರೇಲ್‌ಗೆ 30 ಡಾಲರ್ ಆಗಬಹುದು ಎಂದು ಮಾನದಂಡವನ್ನಿಟ್ಟು ಕೊಳ್ಳಲಾಗಿತ್ತು. ಈಗ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಬ್ಯಾರೆಲ್‌ಗೆ 130 ಡಾಲರ್ ತಲುಪಿದೆ. ಅಂದರೆ ಭಾರತದಲ್ಲಿ ತೈಲ ಉತ್ಪಾದಿಸುತ್ತಿರುವ ಖಾಸಗಿ ಕಂಪನಿಗಳು ಯಾವುದೇ ಹೆಚ್ಚು ಖರ್ಚು ಮಾಡದೇ ಕಚ್ಚಾ ತೈಲ ತೆಗೆಯುವುದರಿಂದ ಲಾಭವೋ ಲಾಭ. ಬ್ಯಾರೆಲ್‌ಗೆ 90 ರಿಂದ 100 ಡಾಲರ್ ಅನಿರೀಕ್ಷಿತ ಲಾಭ. ಆ ಖಾಸಗಿ ಕಂಪನಿಗಳು ತೈಲ ತೆಗೆಯುತ್ತಿರುವ ಭೂಮಿ ಅವರ ಖಾಸಗಿ ಭೂಮಿಯಲ್ಲ. ಅದು ಇಡೀ ದೇಶಕ್ಕೆ ಸೇರಿದ್ದು. ಅಂದರೆ ದೇಶದ ಜನತೆಗೆ ಸೇರಿದ್ದು. ಆದರೆ ಕಚ್ಚಾ ತೈಲದ ಬೆಲೆ ಹೆಚ್ಚಳವಾದಾಗ ಲಾಭ ಈ ಖಾಸಗಿ ಕಂಪನಿಗಳಿಗೆ. ಏಕೆಂದರೆ ಪೆಟ್ರೋಲ್, ಡೀಸೆಲ್ ಬೆಲೆ ಏರಿದೆ ಎಂದರೂ ಜನರು ಅವುಗಳ ಬಳಕೆ ಕಡಿಮೆ ಮಾಡುವಂತೇನೂ ಇಲ್ಲ. ಬಳಸುವಷ್ಟು ಬಳಸಿಯೇ ಬಳಸಬೇಕು, ಬಳಸುತ್ತಾರೆ. ಹೆಚ್ಚು ಬೆಲೆಗೆ ಮಾರುವುದರಿಂದ ಕಂಪನಿಗಳಿಗೆ ಅನಿರೀಕ್ಷಿತ ಲಾಭ. ಯಾವುದೇ ಹೆಚ್ಚಿನ ಶ್ರಮವಿಲ್ಲದೆ ಲಾಭದ ಸುಗ್ಗಿ.

ಇಂತಹ ಸಂದರ್ಭದಲ್ಲಿ ಸರ್ಕಾರ ಏನು ಮಾಡಬಹುದು? ಕಂಪನಿಗಳ ಅನಿರೀಕ್ಷಿತ ಲಾಭದ ಮೇಲೆ 'ಅನಿರೀಕ್ಷಿತ ಲಾಭ (Windfall tax) ವಿಧಿಸಿ ಜನ ಸಾಮಾನ್ಯರಿಗೆ ತೈಲ ಬೆಲೆ ಏರಿಕೆಯ ಬಿಸಿ ಹೆಚ್ಚು ತಾಗದಂತೆ ಮಾಡಲು ಆ ಹಣವನ್ನು ಬಳಸಬಹುದು. ಇದನ್ನೇ ಮಾಡಬೇಕೆಂದು ಎಡಪಕ್ಷಗಳು ಎಷ್ಟು ಒತ್ತಾಯಿಸುತ್ತಿದ್ದರೂ ಕೇಂದ್ರದ ಯುಪಿಎ ಸರ್ಕಾರ ಅದಕ್ಕೆ ಕಿವಿಗೊಡುತ್ತಿಲ್ಲ. ಪೆಟ್ರೋಲ್, ಡೀಸೆಲ್ ಬೆಲೆ ಏರಿಸುವುದರ ಕಡೆಗೆ ಅದರ ತುಡಿತ.

ಪೆಟ್ರೋಲ್‌ಗೆ ಲೀಟರ್ 10ರೂ ಹಾಗೂ ಡೀಸೆಲ್‌ಗೆ 5 ರೂ ಏರಿಸಬೇಕೆಂಬ ಪ್ರಸ್ತಾಪಗಳು ಹರಿದಾಡುತ್ತಿವೆ. ಇದರ ನಡುವೆ ಬಂದಿರುವ ಮತ್ತೊಂದು ಪ್ರಸ್ತಾಪ ಎಂದರೆ ಪೆಟ್ರೋಲ್, ಡೀಸೆಲ್ ಬೆಲೆಗಳ ಮೇಲಿನ ಸಂಪೂರ್ಣ ನಿಯಂತ್ರಣ ಕಳಚಿ ಹಾಕಿ ಮಾರುಕಟ್ಟೆ ಏರಿಳಿತಗಳಿಗೆ ಅದನ್ನು ತೆರೆದಿಡುವುದು. ಹಾಗೆ ಮಾಡಿದರೆ ಪೆಟ್ರೋಲ್ ಬೆಲೆ ಒಮ್ಮೆಲೆ 16-17 ರೂಪಾಯಿಯಷ್ಟು ಹೆಚ್ಚಾಗಲಿದೆ ಎಂಬ ಅಂದಾಜಿನ ಪ್ರಚಾರ ನಡೆಸಲಾಗುತ್ತಿದೆ.

ಸರ್ಕಾರ ಪೆಟ್ರೋಲ್ ಬೆಲೆ ಏರಿಸಲಿ ಆಮೇಲೆ ಅದರ ರಾಜಕೀಯ ಲಾಭ ಪಡೆಯಲು ರಂಗ ಪ್ರವೇಶ ಮಾಡಿದರಾಯ್ತು ಎಂಬಂತೆ ದೇಶದ 'ಮುಖ್ಯ ವಿರೋಧ ಪಕ್ಷ' ಬಿಜೆಪಿ ತಣ್ಣಗೆ ಕುಳಿತಿದೆ. ಎಂದಿನಂತೆ ಎಡಪಕ್ಷಗಳು ಮಾತ್ರ ಈ ಪ್ರಸ್ತಾಪನೆಗೆ ಕಡು ವಿರೋಧ ವ್ಯಕ್ತಪಡಿಸಿವೆ.

ಇದರಲ್ಲಿ ಇನ್ನೂ ಒಂದು ಗಮನಿಸಬೇಕಾದ ಅಂಶವಿದೆ. ಖಾಸಗಿ ತೈಲ ಸಂಸ್ಕರಣಾ ಘಟಕಗಳು ಬ್ಯಾರೆಲ್ ಒಂದಕ್ಕೆ 15 ಡಾಲರ್‌ಗಳಿಗಿಂತ ಹೆಚ್ಚು ಶುಲ್ಕ ವಿಧಿಸಲು ಅವಕಾಶ ನೀಡಲಾಗಿದೆ. ಆದರೆ ಸರ್ಕಾರಿ ಸ್ವಾಮ್ಯದ ಕಂಪನಿಗಳಿಗೆ ಇಂತಹ ಅವಕಾಶವಿಲ್ಲ. ಇದರಿಂದಾಗಿ ತನ್ನ ಬಹುತೇಕ ಉತ್ಪನ್ನಗಳನ್ನು ಹೊರದೇಶಗಳಿಗೆ ರಫ್ತು ಮಾಡುವ ರಿಲೆಯನ್ಸ್ ಕಂಪನಿಯ ಆದಾಯವು ಅಕ್ಟೋಬರ್-ಡಿಸೆಂಬರ್, 2007 ರ ನಡುವಿನ ಅವಧಿಯಲ್ಲಿ ಶೇ.26 ಹೆಚ್ಚಾಗಿದ್ದರೆ, ಜನವರಿ-ಮಾರ್ಚ್ 2008ರ ನಡುವೆ ಶೇ.35 ರಷ್ಟು ಹೆಚ್ಚಳವಾಗಿದೆ.

ಖಾಸಗೀ ಕಂಪನಿಗಳ ಲಾಭದ ಪ್ರಮಾಣ ಬಣ್ಣದ ಬಲೂನಿನಂತೆ ಊದುತ್ತಲೇ ಇದೆ. ಆದರೆ ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಸರ್ಕಾರವೇ ಇಂತಹ ಲಾಭಗಳಿಂದ ವಂಚಿಸುತ್ತಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳು ಸಬ್ಸಿಡಿ ದರದಲ್ಲಿ ಡೀಸೆಲ್, ಅಡುಗೆ ಅನಿಲ, ಸೀಮೆ ಎಣ್ಣೆ ಇತ್ಯಾದಿ ಉತ್ಪನ್ನಗಳನ್ನು ನೀಡಬೇಕಾಗುತ್ತದೆ. ಆದರೆ ಖಾಸಗಿ ಕಂಪನಿಗಳಿಗೆ ಸಬ್ಸಿಡಿ ದರದಲ್ಲಿ ಉತ್ಪನ್ನಗಳನ್ನು ನೀಡಬೇಕಾಗಿಲ್ಲ. ಆದ್ದರಿಂದ ಖಾಸಗಿ ಕಂಪನಿಗಳ ಲಾಭ ನಾಗಲೋಟದಲ್ಲಿ ಹೆಚ್ಚುತ್ತಿರುವಾಗ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಹಣಕಾಸಿನ ಕೊರತೆಯಿಂದ ಬಳಲುತ್ತಿವೆ.

ಈ ದೃಷ್ಟಿಯಿಂದಲೂ ಕೂಡ ಅನಿರೀಕ್ಷಿತ ಲಾಭದ ಮೇಲೆ ತೆರಿಗೆ ಹಾಕುವುದು ಅಗತ್ಯ. ಅಮೇರಿಕಾ ದೇಶದಲ್ಲಿಯೂ ಇಂತಹ ತೆರಿಗೆ ಹಾಕಲಾಗಿದೆ. ಕೆಲವು ದೇಶಗಳಲ್ಲಂತೂ ತೈಲ ಉತ್ಪಾದಕ ಕಂಪನಿಗಳೊಂದಿಗೆ ಸರ್ಕಾರಗಳು ಪುನರ್ ಮಾತುಕತೆ ನಡೆಸಿ ಹೊಸ ಒಪ್ಪಂದವನ್ನೇ ಮಾಡಿಕೊಂಡಿವೆ. ಅನಿರೀಕ್ಷಿತ ಲಾಭದ ತೆರಿಗೆ ಬೀಳುತ್ತದೆ ಎಂದರೆ ಅವರೂ ಕೂಡ ಬಗ್ಗೆಯೇ ಬಗ್ಗುತ್ತಾರೆ. ಸರ್ಕಾರ ಖಾಸಗಿ ಕಂಪನಿಗಳಿಗೆ ತಲೆಬಾಗಬಾರದು ಅಷ್ಟೇ.

ತೆರಿಗೆ, ಆಮದು ಸುಂಕ- ಕಡಿತಗೊಳಿಸಿ: ಕಚ್ಚಾ ವಸ್ತುಗಳ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸುವ ಮೂಲಕ ತೈಲ ಬೆಲೆ ಏರಿಕೆಯ ಬಿಸಿಯಲ್ಲಿ ಜನರು ಕರಕಲಾಗುವುದನ್ನು ತಪ್ಪಿಸುವುದು ಸಾಧ್ಯವಿದೆ.ಇದೀಗ ಈ ಮೂಲದಿಂದ ಸರ್ಕಾರ 15000 ಕೋಟಿ ರೂ.ಗಳನ್ನು ವರ್ಷಕ್ಕೆ ಸಂಗ್ರಹಿಸುತ್ತಿದೆ. ಇದನ್ನು ಸಂಪೂರ್ಣವಾಗಿ ತೆಗೆದು ಹಾಕಬಹುದು. ತೆಗೆದು ಹಾಕಬೇಕು.

ಸರ್ಕಾರಿ ಸ್ವಾಮ್ಯದ ಓಎನ್‌ಜಿಸಿ ಮತ್ತು 'ಆಯಿಲ್ ಇಂಡಿಯಾ' ಗಳು ಉತ್ಪಾದಿಸುವ ತೈಲದ ಮೇಲೆ 'ಸೆಸ್' ಮೂಲಕ ವಾರ್ಷಿಕ ಸುಮಾರು 7500 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ಬೆಲೆ ಸ್ಥಿರೀಕರಣ ನಿಧಿ ಸ್ಥಾಪಿಸಬೇಕು. ಹಾಗೂ ಇದನ್ನು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಆದಾಗ ಆಗಬಹುದಾದ ನಷ್ಟವನ್ನು ಭರಿಸಲು ಉಪಯೋಗಿಸಬೇಕು ಎಂದು ಹಲವು ವರ್ಷಗಳಿಂದ ಎಡಪಕ್ಷಗಳು ಒತ್ತಾಯ ಮಾಡುತ್ತಾ ಬಂದಿವೆ. ಆದರೆ ಹಿಂದಿನ ಬಿಜೆಪಿ ಸರ್ಕಾರವಾಗಲೀ, ಇಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರವಾಗಲೀ ಇದನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಅದು ಆಗಬೇಕಾಗಿದೆ.

ಒಟ್ಟಾರೆಯಾಗಿ ಸರ್ಕಾರ ತೈಲ ಬೆಲೆ ಏರಿಕೆ ತಡೆಯಲು ಸರ್ವ ವಿಧದಲ್ಲೂ ಪ್ರಯತ್ನಿಸಬೇಕಿದೆ. ಆ ಮೂಲಕ ಜನರ ದುಡಿಯುವ, ಬಡಜನರ ಜೀವ ಹಿಂಡುವ ಬೆಲೆ ಏರಿಕೆಯ ಸುರುಳಿ ಸುತ್ತಿ ಸುತ್ತಿ ಮೇಲೆ ಹೋಗುವುದನ್ನು ತಪ್ಪಿಸಬೇಕಿದೆ.

ಈ ಕೆಲಸ ಆಗದೇ ಹೋದಲ್ಲಿ ಹಿಂದೆ ಎನ್.ಡಿ.ಎ. ಸರ್ಕಾರಕ್ಕೆ ಬಂದ ಗತಿಯೇ ಯುಪಿಎ ಸರ್ಕಾರಕ್ಕೂ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ.

ಇದ್ದದ್ದು ಇದ್ದಾಂಗ....

ಒಡೆಯಲು ಯತ್ನಿಸಿದರು

"ಪಕ್ಷವನ್ನು ಒಡೆಯಲು ಯತ್ನಿಸಿದ ಕಾಂಗ್ರೆಸ್ ಮುಖಂಡರ ಸಣ್ಣತನದಿಂದಲೇ ಜೆ.ಡಿ (ಎಸ್)ಗೆ ಹಿನ್ನಡೆಯಾಯಿತು. ಕೋಮುವಾದಿ ಶಕ್ತಿ ರಾಜ್ಯದಲ್ಲಿ ಬೆಳೆಯಲು ತಪ್ಪಿಸಿದ ಅವಕಾಶವನ್ನು ಕಾಂಗ್ರೆಸ್ ಬಳಸಿಕೊಳ್ಳಲಿಲ್ಲ. ಅಧಿಕಾರ ಹಸ್ತಾಂತರದ ಗೊಂದಲದ ಸಮಯದಲ್ಲಿ ಕಾಂಗ್ರೆಸ್ ಜಾತ್ಯಾತೀತ ಶಕ್ತಿಯ ಜೊತೆ ಕೈ ಜೋಡಿಸುವ ದೊಡ್ಡ ಮನಸ್ಸು ಮಾಡಲಿಲ್ಲ. ಇದರ ಬದಲು ಪರ್ಯಾಯ ಸರ್ಕಾರ ರಚಿಸುವ ಬಗ್ಗೆ ಮಾತುಕತೆ ನಡೆಸುತ್ತಿದ್ದ ಮಾಜಿ ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ್ ಅವರ ಗುಂಪಿಗೆ ಷರತ್ತುಗಳನ್ನು ಹಾಕಿತು. ನಿಮ್ಮ ಪಕ್ಷದಲ್ಲಿ ಇಂತಹವರನ್ನು ಹೊರಗಿಟ್ಟು ಬನ್ನಿ ಎನ್ನುವ ಆಹ್ವಾನ ನೀಡಿತು. ನಂತರ ನಡೆದ ಘಟನಾವಳಿಗಳಿಗೆ ಕಾಂಗ್ರೆಸ್ ಹೊಣೆ ಹೊರಬೇಕು."

ವೈ.ಎಸ್.ವಿ.ದತ್ತ
ಜೆ.ಡಿ(ಎಸ್) ವಕ್ತಾರ

"ಕೈಗಾರಿಕೆ - ಜನರ ವಿಶ್ವಾಸ ಎರಡೂ ಬೇಕು."

"ಪಶ್ಚಿಮ ಬಂಗಾಳಕ್ಕೆ ಕೈಗಾರಿಕೆಗಳು ಬೇಕು ಎಂದೂ ಕೈಗಾರೀಕರಣ ಪ್ರಕ್ರಿಯೆ ಮುಂದುವರೆಯಬೇಕು ಎಂದೂ ಎಡರಂಗ ಭಾವಿಸುತ್ತದೆ. ಆದರೆ ಈ ವಿಷಯದಲ್ಲಿ ಎಚ್ಚರಿಕೆಯಿಂದ ಮುಂದುವರಿಯಬೇಕಿದೆ ಮತ್ತು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯ ಬೇಕಿದೆ."

- ಭಿಮನ್ ಬಸು, ಪಶ್ಚಿಮ ಬಂಗಾಳ ಎಡರಂಗದ ಅಧ್ಯಕ್ಷರು
ಇತ್ತೀಚಿನ ಎಡರಂಗ ಸಭೆಯ ತೀರ್ಮಾನ ವಿವರಿಸುತ್ತಾ

"ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾವು ನೋಡುತ್ತಲೇ ಇದ್ದೇವೆ ಮತ್ತು ರಾಜಕೀಯ ಬೆಳವಣಿಗೆಗಳತ್ತ ಗಮನಹರಿಸುವಂತೆ ನಾವು ಒತ್ತಾಯಿಸುತ್ತೇವೆ"

- ಟಾಮ್ ಕೇಸಿ
ಅಮೇರಿಕಾದ ವಿದೇಶಾಂಗ ಇಲಾಖೆ ವಕ್ತಾರ
ನೇಪಾಳ ಗಣತಂತ್ರ ಎಂದು ಘೋಷಣೆಯಾದ ಕುರಿತು

"ತಾವು ಕನ್ನಡ ನಾಡಿನ ಮುಖ್ಯಮಂತ್ರಿಯಾಗಿ ಮಾಡುವ ಜನೋಪಯೋಗಿಯಾದ ಎಲ್ಲ ಕೆಲಸಗಳಿಗೂ ನಾನು ಬೆಂಬಲವಾಗಿ ನಿಲ್ಲುವೆನು.... ಗಣಿಗಾರಿಕೆ ನಮ್ಮ ರಾಜಕೀಯ ಪಕ್ಷಗಳನ್ನು ಭ್ರಷ್ಟಗೊಳಿಸಿದೆ. ತಮ್ಮ ಆಡಳಿತ ಕಾಲದಲ್ಲಿ ಇಡೀ ಪರಿಸರವನ್ನೇ ನಾಶ ಮಾಡುವ ಆದಿರು ಮಾರುವ ಗಣಿಗಾರಿಕೆಯನ್ನು ನಿಲ್ಲಿಸಬೇಕು"

- ಡಾ: ಯು.ಆರ್.ಅನಂತಮೂರ್ತಿ
ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳು

ದುಡಿವ ಜನರ ಸಮರ ಘೋಷಣೆ

ಆಗಸ್ಟ್ 20 ಸಾರ್ವತ್ರಿಕ ಮುಷ್ಕರ

ದೇಶದ ದುಡಿಯುವ ಜನರು, ಕಾರ್ಮಿಕರು, ನೌಕರರು, ಶಿಕ್ಷಕರು, ಮತ್ತೊಂದು ಮಹಾ ಹೋರಾಟಕ್ಕೆ ಮಹಾ ಮುಷ್ಕರಕ್ಕೆ ಸಿದ್ಧವಾಗುತ್ತಿದ್ದಾರೆ.

ದೇಶದ ಕೃಷಿ, ಕೈಗಾರಿಕೆ, ಒಟ್ಟಾರೆ ಜನರ ಬದುಕಿಗೆ ದುಡಿಯುವ ಜನರ ಬದುಕಿಗೆ ಸಂಬಂಧಿಸಿದ ನ್ಯಾಯಬದ್ಧ ಬೇಡಿಕೆಗಳ ಆಧಾರದಲ್ಲಿ ಅವರು ಆಗಸ್ಟ್ 20 ರಂದು ಮಹಾ ಮುಷ್ಕರ ನಡೆಸಲು ನಿರ್ಣಯಿಸಿದ್ದಾರೆ.

ಬೇಡಿಕೆಗಳು :

1. ಬೆಲೆ ಏರಿಕೆ ತಡೆಗೆ ಕಟ್ಟುನಿಟ್ಟಿನ ತ್ವರಿತ ಕ್ರಮ ಜಾರಿಗೆ
2. ಸಾರ್ವತ್ರಿಕ ವಿತರಣಾ ವ್ಯವಸ್ಥೆ ಬಲಪಡಿಸಬೇಕು.
3. ಎಲ್ಲಾ ಅಗತ್ಯ ವಸ್ತುಗಳ ಮುಂಗಡ ವ್ಯಾಪಾರದ ಮೇಲೆ ನಿಷೇಧ ಹೇರಬೇಕು.
4. ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕನಿಷ್ಟ ವೇತನ ಜಾರಿಗೊಳಿಸಬೇಕು.
5. ರೈತರ ಸಾಲ ಯೋಜನೆಯಲ್ಲಿ ಖಾಸಗಿ ಲೇವಾದೇವಿ ವಿಸ್ತರಿಸಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿದರದ ಸಾಲ ವಿತರಿಸಬೇಕು.
6. ಸರ್ಕಾರಿ ನೌಕರರಿಗೆ 6ನೇ ವೇತನ ಆಯೋಗ ಜಾರಿಯಾಗಬೇಕು.

ಪೂರ್ವಭಾವಿ ತಯಾರಿ

(ಸಾರ್ವತ್ರಿಕ ಮುಷ್ಕರ ಆಗಸ್ಟ್ 20, 2008)

1. ಜುಲೈ 15 ರ ಒಳಗೆ ರಾಜ್ಯ/ಜಿಲ್ಲಾ ಹಾಗೂ ಕಾರ್ಖಾನೆ ಮಟ್ಟದ ಸಮಾವೇಶಗಳು.
2. ಮತ ಪ್ರದರ್ಶನ/ಧರಣಿ/ಕಾರ್ಯಕ್ರಮ ರಾಜ್ಯದ ಎಲ್ಲಾ ಭಾಗಗಳಲ್ಲಿ ಹಾಗೂ ಕೈಗಾರಿಕಾ ಕೇಂದ್ರ ಬಳಿ 30 ಜುಲೈ 2008 ರಂದು ನಡೆಸುವುದು.
3. ಆಗಸ್ಟ್ 4 ರಂದು ಮುಷ್ಕರದ ನೋಟೀಸ್ ಕೊಡುವುದು.
4. ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಆಗಸ್ಟ್ 20, 2008

ವಿವಿಧ ಕೇಂದ್ರ ಕಾರ್ಮಿಕಸಂಘಟನೆಗಳು, ನೌಕರ,ಶಿಕ್ಷಕ, ವಿಮಾ, ಬ್ಯಾಂಕ್, ರೈಲ್ವೆ, ಟೆಲಿಕಾಂ, ವಿಮಾನ ಯಾನ ಮುಂತಾದ ವಲಯಗಳ ನೌಕರರು ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಂಪಾದಕೀಯ

ಕಾಂಗ್ರೆಸ್‌ನ ಆತ್ಮಾವಲೋಕನದ ವೈಖರಿ

ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಹಿಡಿಯಲಾಗದ ಸ್ಥಿತಿ ಅಥವಾ ಸೋಲಿನ ಕುರಿತು ಒಂದು ಆಳವಾದ ಅಧ್ಯಯನ ನಡೆಸಲಾಗಲೀ ಅಥವಾ ವಿಮರ್ಶೆಗೆ ತನ್ನನ್ನು ಒಡ್ಡಿಕೊಳ್ಳಲಾಗಲೀ, ಸಿದ್ಧವಿಲ್ಲದಿರುವುದನ್ನು ಪ್ರಕಟಿಸುತ್ತಿದೆ. ಇನ್ನು ಈ ಫಲಿತಾಂಶದಿಂದ ಪಾಠ ಕಲಿತು ಸರಿಪಡಿಸಿಕೊಳ್ಳುವುದು ದೂರದ ಮಾತಾದೀತು.

ಕೇಂದ್ರದಲ್ಲಿ ತಮ್ಮದೇ ಸರ್ಕಾರವಿದೆ, ರಾಜ್ಯದಲ್ಲಿ ಜನಹಿತ ಮರೆತಿದ್ದ ಬಿಜೆಪಿ-ಜೆಡಿ(ಎಸ್)ನ ಸರ್ಕಾರವಿದ್ದ ಹಿನ್ನಲೆಯಲ್ಲಿ ನಡೆದ ಈ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಸೋಲಿನ ಬಗ್ಗೆ ರಾಷ್ಟ್ರ-ರಾಜ್ಯ ನಾಯಕತ್ವ ವಿಮರ್ಶೆಗೊಳಪಡಬೇಕಾದ್ದು ಅತೀ ಅಗತ್ಯವಾಗಿದೆ. ಆದರೆ ಕೆಲ ರಾಜ್ಯ ಮುಖಂಡರು ಈ ಸೋಲಿಗೆ ಖರ್ಗೆ ಕಾರಣವೆಂದೂ, ಬಹಿರಂಗ ಹೇಳುತ್ತಿದ್ದರೆ, ಕೃಷ್ಣನಂತಹವರು ತಮ್ಮನ್ನು ಸ್ಪರ್ಧೆಗೆ ಬಿಡದೇ ಇರುವುದು ಕಾರಣವೆನ್ನುತ್ತಿದ್ದಾರೆ. ಆ ಪಕ್ಷದೊಳಗಿನ ಮುಖ್ಯಮಂತ್ರಿ ಆಕಾಂಕ್ಷಿಗಳು ಇತರರು ಗೆಲ್ಲದಂತೆ ತಂತ್ರ ಹೂಡಿದರು ಎಂದು ಎಐಸಿಸಿ ಸದಸ್ಯರೊಬ್ಬರು ಆರೋಪಿಸುತ್ತಿದ್ದಾರೆ. ತಾವು ಸೂಚಿಸಿದ ಸೂತ್ರ, ಅಭ್ಯರ್ಥಿಗಳನ್ನೂ ಆರಿಸದೇ ಹೋಗಿದ್ದು ಸೋಲಿಗೆ ಕಾರಣವೆಂದು ಕೆಲವರು ವಾದಿಸುತ್ತಿದ್ದಾರೆ. ಹೀಗಾಗಿ ವಸ್ತು ನಿಷ್ಠ ಕಾರಣಗಳನ್ನು ಅರಸುವುದಕ್ಕಿಂತ ವ್ಯಕ್ತಿ ನಿಷ್ಠ ಅಂಶಗಳ ಸುತ್ತಲೇ ಗಮನ ಕೇಂದ್ರೀಕರಿಸಲಾಗುತ್ತಿದೆ.


ಹಾಗೆಯೇ ಚುನಾವಣೆಯ ಉಸ್ತುವಾರಿ ವಹಿಸಿದ್ದ ಪೃಥ್ವಿರಾಜ್ ಚವ್ಹಾಣ್ ರವರು ಸೆಕ್ಯುಲರ್ ಮತ ವಿಭಜನೆಯಿಂದ ತಮಗೆ ಸೋಲಾಯಿತೆಂದು ಹೇಳಿರುವುದು ಸಹ ಹೈಕಮಾಂಡ್‌ಗೆ ಕಾರಣ ಹುಡುಕುವ ಗಂಭೀರತೆ ಇದೆಯೇ ಎಂದು ಪ್ರಶ್ನಿಸುವಂತಾಗುತ್ತದೆ. ಸೆಕ್ಯುಲರ್ ಮತ ವಿಭಜನೆಯೆಂದರೆ ಜಾತ್ಯಾತೀತ ಜನತಾದಳ, ಎಡಪಕ್ಷಗಳು ಸ್ಪರ್ಧಿಸದೇ ಕಾಂಗ್ರೆಸ್‌ನ ಹಿಂದೆ ಓಡಬೇಕಿತ್ತೇ ಎಂಬ ಪ್ರಶ್ನೆಯೂ ಏಳುತ್ತದೆ. ಜೊತೆಗೆ ಈ ಸಂದರ್ಭವನ್ನೇ ಬಳಸಿ ಮೂರನೆಯ ಶಕ್ತಿಯ ಅಸ್ತಿತ್ವವನ್ನು ನಿರಾಕರಿಸುತ್ತಾ ಬಿಜೆಪಿಯೊಂದಿಗೆ ನೇರ ಸ್ಪರ್ಧೆಯು, ಎರಡೇ ಪಕ್ಷಗಳ ನಡುವೆ ಧೃವೀಕರಣಗೊಳ್ಳಬೇಕೆಂದು ಕಾಂಗ್ರೆಸ್ ವಾದಿಸುತ್ತಿದೆ. ಸೆಕ್ಯುಲರ್ ಮತಗಳು ಒಡೆಯದಂತೆ ತಡೆಯುವ ಯಾವ ಪ್ರಯತ್ನವನ್ನು ಕಾಂಗ್ರೆಸ್ ಮಾಡಿತು ಎಂದೂ ಪ್ರಶ್ನಿಸಬೇಕಾಗುತ್ತದೆ. ಚುನಾವಣಾ ಪೂರ್ವದಲ್ಲಾಗಲೀ, ಆ ಸಂದರ್ಭದಲ್ಲೇ ಆಗಲಿ ಅಂತಹ ಯಾವ ಪ್ರಯತ್ನವನ್ನೂ ಮಾಡದೇ ಚುನಾವಣಾ ಟಿಕೆಟ್‌ನ ಹರಾಜಿನ ವಹಿವಾಟಿನಲ್ಲೇ ಮಗ್ನವಾಗಿದ್ದನ್ನು ಕಾಂಗ್ರೆಸ್ ನಾಯಕರು ಮರೆಸಲು ಸಾಧ್ಯವೇ? ಹಿಂದೆ ಕಾಂಗ್ರೆಸ್ ಜೊತೆಗೆ ಅಧಿಕಾರ ಹಂಚಿಕೊಂಡಿದ್ದ ಜೆಡಿ(ಎಸ್) ಪಕ್ಷವನ್ನು ಜೊತೆಗೊಯ್ಯದೇ, ಅವನ್ನೇ ನುಂಗಲು ಹಾತೊರೆದದ್ದು, ಅದನ್ನು ಒಡೆಯಲು ಸತತವಾಗಿ ಯತ್ನಿಸಿದ್ದು ಯಾಕೆ ಎಂಬುದನ್ನು ಕಾಂಗ್ರೆಸ್ ಮರೆತು ಬಿಟ್ಟಿದೆಯೂ ಎಂದೂ ಕೇಳಬೇಕಾಗುತ್ತದೆ.

ಇನ್ನೂ ಒಂದು ಗಂಭೀರ ಪ್ರಶ್ನೆಯೆಂದರೆ ರಾಜ್ಯದಲ್ಲಿ ಬೆಳೆದುಬರುತ್ತಿದ್ದ ಫ್ಯಾಶಿಸ್ಟ್ ಮನೋಭಾವದ ಕೋಮುವಾದಿ ಸಂಘ ಪರಿವಾರ-ಬಿಜೆಪಿಯ ಅಪಾಯವನ್ನು ಕಾಂಗ್ರೆಸ್ ಎಷ್ಟರಮಟ್ಟಿಗೆ ಗಂಭೀರವಾಗಿ ತೆಗೆದುಕೊಂಡಿತ್ತು? ಅದನ್ನು ಎದುರಿಸಲು ಅಧಿಕಾರ ಇರುವಾಗಲೂ ವಿರೋಧ ಪಕ್ಷದ ಸ್ಥಾನ ಅನುಭವಿಸುತ್ತಿರುವಾಗಲೂ ಎಂತಹ ಕಾಳಜಿ, ಕ್ರಮಗಳನ್ನು ಕೈಗೊಂಡಿತ್ತು? ಹಾಗೆ ನೋಡಿದರೆ ಕೋಮುವಾದವನ್ನು ಒಂದು ಗಂಭೀರವಾದ ಅಪಾಯವೆಂದೂ ರಾಜಕೀಯ-ಸಾಮಾಜಿಕ ಸಂಘಟನಾತ್ಮಕ ಸವಾಲು ಎಂದು ಪರಿಗಣಿಸಿ ಅದಕ್ಕೆ ತಕ್ಕ ಉತ್ತರ ಹೇಳುವುದು ಈ ಅವಧಿಯುದ್ದಕ್ಕೂ ಕಾಣಲಿಲ್ಲ. ಬದಲಾಗಿ ಹಲವಾರು ಕಡೆ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಿ ಕೋಮು ದ್ವೇಷ ಹಬ್ಬಿಸುತ್ತಿರುವಾಗ ಭಜರಂಗದಳ, ವಿಹಿಂಪ ನಂತಹ ಸಂಘ ಪರಿವಾರವನ್ನು ಎದುರಿಸದೇ ರಾಜೀ ಮನೋಭಾವ ತೋರಿಸಿದ ಉದಾಹರಣೆಗಳು ಜೀವಂತವಿದೆ. ಆತಂಕದ ಸನ್ನಿವೇಶದ ರಾಜಕೀಯ ಲಾಭ ಹೊಡೆಯುವುದನ್ನೇ ಸೆಕ್ಯುಲರ್ ರಾಜಕಾರಣವೆಂಬ ಕಾಂಗ್ರೆಸ್ ವ್ಯಾಖ್ಯಾನವನ್ನು ಸಹಜವಾಗಿ ಚಿಂತಿಸುವ ಯಾರೂ ಒಪ್ಪಲು ಸಾಧ್ಯವಿಲ್ಲ. ಒಂದೊಮ್ಮೆ ಕಾಂಗ್ರೆಸ್ ನಾಯಕತ್ವ ಕೋಮುವಾದದ ವಿರುದ್ಧ ತನ್ನ ಇಡೀ ಬೆಂಬಲಿಗರನ್ನು ಅಣಿ ನೆರೆಸಿದ್ದರೆ ಸಂದರ್ಭವೇ ಬೇರೆ ಇರುತ್ತಿತ್ತು. ಜಾತಿ ಸೆಳೆತಕ್ಕೊಳಗಾಗಿ ಬಿಜೆಪಿಗೆ ಮತ ನೀಡುವುದೂ ತಡೆಯಬಹುದಿತ್ತು. ಚೆಡ್ಡಿ ಪಡೆಗಳ ರಾಜಕೀಯ ತಂತ್ರವಾದ ಹಿಂದೂ ಸಮಾಜೋತ್ಸವಕ್ಕೆ ಹಣ ನೀಡಿ, ವೇದಿಕೆಗಳಲ್ಲಿ ರಾರಾಜಿಸುವುದನ್ನು ತಪ್ಪಿಸಬಹುದಿತ್ತು. ಆದರೆ ಕಾಂಗ್ರೆಸ್‌ನ ನಾಯಕರು ಇಂತಹ ವಿಮರ್ಶೆಗಳಿಗೆ ಮುಖ ಕೊಡಲು ಸಿದ್ದವಿಲ್ಲ.

ಗುಜರಾತ್ ಫಲಿತಾಂಶ ಇವರ ಕಣ್ಣು ತೆರೆಸಲಿಲ್ಲ!

ಅಂತೂ, ಕಾಂಗ್ರೆಸ್ ಸೋಲಿನ ಬಗ್ಗೆ ಎದ್ದು ಬಂದ ಹತ್ತಾರು ಪ್ರಶ್ನೆಗಳಿಂದಾಗಿ ಸಮಾಧಾನಪಡಿಸಲೋ ಎಂಬಂತೆ ಎಐಸಿಸಿಯು ತನ್ನ ಸಭೆಯಲ್ಲಿ ಸೋಲಿನ ಕಾರಣ ವಿಮರ್ಶಿಸಲಾಗುವುದೆಂದು ಹೇಳಿದೆ. ಅಲ್ಲಿ ಒಂದು ಸಕಾರಾತ್ಮಕ ನಿರ್ಧಾರ ಹೊರಬರಲೆಂದು ಆಶಿಸಬಹುದಾದರೂ ಹಿಂದಿನ ಅನುಭವಗಳಿಂದ ಅಂತಹದ್ದನ್ನು ನಿರೀಕ್ಷಿಸುವುದು ಕಷ್ಟವಾಗುತ್ತದೆ. ಕೇಂದ್ರದಲ್ಲಿ ಸೋಲಾದಾಗ, ನಂತರ ರಾಜ್ಯಗಳಲ್ಲಿನ ಸೋಲುಗಳನ್ನು ಅದು ವಿಶ್ಲೇಷಿಸಿದ ರೀತಿ ಕೇವಲ ಔಪಚಾರಿಕವಾಗಿತ್ತು. ಮತ್ತು ಅದು ಹೇಳಿದ ಅಂಶಗಳನ್ನಾದರೂ ಸರಿಪಡಿಸಿಕೊಳ್ಳಲು ಯತ್ನಿಸಲಿಲ್ಲ. ಹಿಂದೆ ರಾಜ್ಯದಲ್ಲಿ ಎಸ್.ಎಂ.ಕೃಷ್ಣರ ಸರ್ಕಾರ ಅನುಭವಿಸಿದ ಸೋಲಿನ ಬಗ್ಗೆ ತೀವ್ರವಾಗಿ ವಿಮರ್ಶಿಸಿ, ಮುಂದಿನ ಕ್ರಮ ವಹಿಸಲಾಗುವುದೆಂದು ಸಾರಿತಾದರೂ ಅಂತಹ ಒಂದು ಸಭೆಯೂ ಸೇರಲಿಲ್ಲ. ರಾಷ್ಟ್ರ ಮಟ್ಟದಲ್ಲಿಯೂ, ಹಲವಾರು ರಾಜ್ಯಗಳಲ್ಲಿಯೂ ಅದರ ಸೋಲಿಗೆ ಅದು ಜಾರಿಗೊಳಿಸುತ್ತಿರುವ ದಿವಾಳಿಖೋರ ಉದಾರೀಕರಣದ ಆರ್ಥಿಕ ನೀತಿಗಳು ಕಾರಣವೆಂಬ ಅಂಶವನ್ನು ಅದೂ ಒಪ್ಪುತ್ತಿಲ್ಲ. ಬದಲಾಗಿ ಜನರ ಬದುಕಿಗೆ ಕಂಟಕವಾಗಿರುವ ಆ ನೀತಿಗಳನ್ನೇ ಇನ್ನೂ ಹೆಚ್ಚಾಗಿ ಅನುಸರಿಸಬಯಸುತ್ತದೆ. ಆದ್ದರಿಂದಲೇ ಕರ್ನಾಟಕದಲ್ಲಿನ ಅದರ ಸೋಲಿಗೆ ಕೇಂದ್ರದ ಯು.ಪಿ.ಎ. ಸರ್ಕಾರದ ಆರ್ಥಿಕ ನೀತಿಗಳು ವಿಶೇಷವಾಗಿ ಬೆಲೆ ಏರಿಕೆ, ಕೃಷಿ ಬಿಕ್ಕಟ್ಟು, ಮತ್ತು ಕೋಮುವಾದಿಗಳನ್ನು ಎದುರಿಸದೇ ಇರುವ ಅಂಶಗಳನ್ನು ಅದು ಒಪ್ಪಲೂ ತಯಾರಿಲ್ಲ. ಹಾಗಿದ್ದರೆ ಮುಂದಿನ ದಿನಗಳಲ್ಲಿ ದೇಶದ ಜನತೆಯನ್ನು ಉಳಿಸಲು ಕಾಂಗ್ರೆಸ್ ಸಿದ್ಧವಿಲ್ಲದಿರುವಾಗ ಕಾಂಗ್ರೆಸ್‌ನ್ನು ಬೇರಿನ್ಯಾರು ಉಳಿಸಬಲ್ಲರು. ಸ್ವತಃ ಕಾಂಗ್ರೆಸ್ ಪ್ರಯತ್ನಗಳನ್ನು ಮಾಡದೇ ಬಿಟ್ಟರೆ?

ಸಂಪುಟ ರಚನೆ ಮಾಫಿಯಾ ಮೇಲುಗೈ



ಬಹುಮತದ ಕೊರತೆಯಿಂದಾಗಿ ಅಧಿಕಾರದ ಹೊಸ್ತಿಲಿನಲ್ಲೇ ನಿಂತಿದ್ದ ಬಿಜೆಪಿಯು ಆರು ಜನ ಪಕ್ಷೇತರ ಶಾಸಕರೊಂದಿಗೆ ವ್ಯವಹಾರ ಕುದುರಿಸಿಕೊಂಡಿದೆ. ಇದೀಗ 30 ರಂದು ಸಚಿವ ಸಂಪುಟವು ಅಸ್ತಿತ್ವಕ್ಕೆ ಬಂದಿದೆ. ಎಂತಹದ್ದೋ ಲೆಕ್ಕಾಚಾರ ಹಾಕಿ ಆ ಮೂಲಕ ತನ್ನ ಶಕ್ತಿಯನ್ನು ಕ್ರೋಢೀಕರಿಸಿಕೊಳ್ಳಲು ಯತ್ನಿಸಿದೆ. ಮುಖ್ಯಮಂತ್ರಿಯಾಗಿ ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಈ ಘಟನೆಯನ್ನು ಬಿಜೆಪಿಯ ಯುಗಾರಂಭ, ಪರ್ವ, ಶಕೆ ಎಂತಲೂ ಮಾಧ್ಯಮಗಳು ಬಣ್ಣಿಸುತ್ತಿವೆ. ಆರ್.ಎಸ್.ಎಸ್. ನ ಕಛೇರಿಯಲ್ಲಿನ ಉತ್ಸಾಹ, ಉದ್ವೇಗ, ಸಂತೋಷಗಳು ಕೆಲವು ಮಾದ್ಯಮಗಳ ಕಚೇರಿಯಲ್ಲಿಯೂ ಹೊಳೆಯಾಗಿ ಹರಿದಿದ್ದು ವಿಶೇಷ. ಮಾಧ್ಯಮರಂಗದಲ್ಲಿ ಅಡಗಿ ಕುಳಿತಿರುವ 'ಕರಸೇವಕರು' ಬಿಜೆಪಿಯನ್ನೇ ಶಾಶ್ವತವಾಗಿ ಸ್ಥಾಪಿಸಿಬಿಡಲು ಸಂಕಲ್ಪಿಸಿದಂತೆ ಕಾಣುತ್ತಿದೆ.

ಈಗಲೂ ಆರೆಸ್ಸೆಸ್ಸೇ....

ಯಡಿಯೂರಪ್ಪನವರು ಸಿ.ಎಂ. ಆಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವುದು ಎರಡನೆಯ ಬಾರಿ. ಆಗ ಜೆಡಿ(ಎಸ್)-ಬಿಜೆಪಿಯ ಕೆ.ಡಿ.ಎಫ್. ನ ಭಾಗವಾಗಿ ಯಡಿಯೂರಪ್ಪ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭವನ್ನೇ ಸ್ವಲ್ಪ ನೆನಪಿಸಿಕೊಳ್ಳುವುದು ಅಗತ್ಯ... ಜೆಡಿ(ಎಸ್) ಬೆಂಬಲ ನೀಡುವ ವಿಷಯದಲ್ಲಿ ಎಷ್ಟೆಲ್ಲಾ ಗೊಂದಲ ಡೋಲಾಯಮಾನದ ಸ್ಥಿತಿ ಇದ್ದರೂ ಬಿಜೆಪಿ ಸರ್ಕಾರ ರಚಿಸಿತು. ತಾನೂ ಸರ್ಕಾರ ರಚಿಸಬಲ್ಲೇ ಎಂದು ಬಿಂಬಿಸಲು ಅಂದು ಸಂಘ ಪರಿವಾರವೂ ಅಹೋರತ ಕಸರತ್ತು ನಡೆಸಿತ್ತು. ಮಾತ್ರವಲ್ಲ ಸರ್ಕಾರವೇ ವ್ಯವಸ್ಥೆಗೊಳಿಸಬೇಕಿದ್ದ ಪ್ರಮಾಣ ವಚನ ಸಮಾರಂಭವನ್ನು ಇಡಿಯಾಗಿ ಆರ್.ಎಸ್.ಎಸ್. ಉಸ್ತುವಾರಿ ವಹಿಸಿಕೊಂಡಿತ್ತು. ಸಮ್ಮಿಶ್ರ ಸರ್ಕಾರ ಎನ್ನುವುದೇ ಮರೆಮಾಚುವಂತೆ ನಗರದ ತುಂಬಾ ಕಟೌಟ್‌ಗಳು, ಬ್ಯಾನರ್, ಭಿತ್ತಿಪತ್ರಗಳು ರಾರಾಜಿಸಿದವಲ್ಲದೇ ಇನ್ನೊಂದು ಭಾಗಿದಾರ ಪಕ್ಷವಾದ ಜೆಡಿ(ಎಸ್) ಮುಖಂಡರು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಕಣ್ಣೆದುರಿದ್ದರೂ ಪ್ರೇಕ್ಷಕರ ಗ್ಯಾಲರಿಯಲ್ಲಿ ಜಾಗ ಕಂಡುಕೊಳ್ಳಬೇಕಾಯ್ತು. ಆದರೆ ಅಡ್ವಾಣಿ, ಮೋದಿಗಳು ವೇದಿಕೆಯಲ್ಲೇ ವಿರಾಜಿಸುತ್ತಿದ್ದರು. ಅಂದರೆ ಇಡೀ ಸರ್ಕಾರದ ಸೂತ್ರಧಾರಿತ್ವ 'ಸಂಘ'ದ ಕೈಯಲ್ಲೇ ಎಂಬುದು ಮತ್ತೆ ಸಾಬೀತಾಗಿತ್ತು. ಮಾತ್ರವಲ್ಲ ಮುಂಬರುವ ದಿನಗಳಲ್ಲಿ ನೀತಿ- ನಿರ್ದೇಶನಗಳ ನಿಯಂತ್ರಣದ ದಿಕ್ಕನ್ನು ತೋರಿಸಿತ್ತು. ಈಗಲೂ ಅದೇ ಆರ್.ಎಸ್‌ಎಸ್. ಕ್ರಿಯಾಶೀಲವಾಗಿದೆ, ಸರ್ವ ಸನ್ನದ್ಧವೂ ಆಗಿ ಧುಮುಕಿದೆ.



ಈ ಆರ್.ಎಸ್.ಎಸ್. ಎನ್ನುವುದು ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಳ್ಳುವುದಿಲ್ಲ, ಸಾರ್ವಜನಿಕ ರಿಗಾಗಲೀ, ನಾಗರಿಕ ಸರ್ಕಾರಕ್ಕಾಗಲೀ ಉತ್ತರದಾಯಿಯೂ ಆಗಿಲ್ಲ. ಇದರ ಕಾರ್ಯಾಚರಣೆಗಳೋ ಒಂದು ರೀತಿಯ ಭೂಗತ ಸ್ವರೂಪದಲ್ಲೇ ಇರುತ್ತವೆ. ಇಂತಹ 'ಸಂಘ'ವನ್ನು ರಾಜ್ಯದಲ್ಲಿ ಜನಸಾಮಾನ್ಯರು ದೂರವಿಟ್ಟಿದ್ದಾರೆ. ಆರ್.ಎಸ್.ಎಸ್. ಎಂದರೆ ಅನೇಕರಿಗೆ ಭಯ ಸೃಷ್ಟಿಸುತ್ತದೆ. ಕೋಮುಗಲಭೆಗಳನ್ನು ಎಬ್ಬಿಸುವಲ್ಲಿ, ಇದರದ್ದೇ ಪ್ರಧಾನ ಪಾತ್ರ. ಬಿಜೆಪಿಯನ್ನು ಜನ ತಿರಸ್ಕರಿಸಿ ದೂರ ಸರಿಸುತ್ತಿರುವಾಗ ಅದು ಕಳಾಹೀನವಾಗಿರುವಾಗ ಪುನಃ ವರ್ಚಸ್ಸು, ನೆಲೆ ಒದಗಿಸಿಕೊಡಲು ಆರ್‌ಎಸ್‌ಎಸ್ ಕಾರ್ಯರಂಗಕ್ಕೆ ಇಳಿದಿದ್ದಿದೆ. ಗಲಭೆ ತನಿಖೆ ನಡೆಸಿರುವ ಎಲ್ಲಾ ಆಯೋಗಗಳೂ ಸಂಘ ಪರಿವಾರದ ಪಾತ್ರ ಗುರುತಿಸಿವೆ. ಇಂತಹ ಕುಖ್ಯಾತ ಸಂಘಟನೆಯನ್ನು ಜನಪ್ರಿಯಗೊಳಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಗಳು ನಡೆದಿವೆ. ಸ್ವತಃ ಮುಖ್ಯಮಂತ್ರಿಗಳಿಂದಲೇ ಮೊದಲ್ಗೊಂಡು....

ಈ ವಿಳಂಬ ಯಾಕೆ?

ಈಗಲೂ ಸಚಿವ ಸಂಪುಟ ರಚನೆಯಾದರೂ ಮಂತ್ರಿಗಳಿಗೆ ಖಾತೆಗಳನ್ನೂ ಹಂಚಲಾಗಿಲ್ಲ. ವಿಶ್ವಾಸಮತ (ಜೂನ್ 4 ರ ಬಳಿಕ)ದ ಬಳಿಕ ಹಂಚಲಾಗುವುದು ಎಂಬ ಸಿ.ಎಂ. ಹೇಳಿಕೆ ಹಲವು ಅನುಮಾನಗಳಿಗೆ ಕಾರಣವಾಗಿದೆ. ಖಾತೆ ಹಂಚಿಕೆ ಸರ್ವಸಾಧಾರಣವಾಗಿ ಸಂಪುಟ ಪ್ರಮಾಣ ವಚನದ ಬಳಿಕ ಅಂದೇ ಅಥವಾ ಮರುದಿನವೇ ಮಾಡುವ ಪ್ರತೀತಿ ಇದೆ. ಆದರೆ ಬಿಜೆಪಿಗೆ ಇಷ್ಟು ದಿನಗಳು ಯಾಕೆ?

ಕೆಲವು 'ಪ್ರಮುಖ' ಖಾತೆಗಳನ್ನು ಕೆಲವು ಪ್ರಮುಖರು ಬಯಸುತ್ತಿದ್ದು ಅದನ್ನು ಬಗೆಹರಿಸಿಕೊಳ್ಳಬೇಕು ಎನ್ನುತ್ತಾರೆ ಸಿ.ಎಂ. ಕಾರಣ ಇದೊಂದೇ ಇರಲಿಕ್ಕೆ ಸಾಧ್ಯವಿಲ್ಲ. ಹಿಂದೆ ಇದೇ ಸಿ.ಎಂ. 'ಖಾತೆಗಳ ಹಂಚಿಕೆ ವಿಷಯದಲ್ಲಿ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಅದೇನಿದ್ದರೂ 'ಸಂಘ' ನೋಡಿಕೊಳ್ಳುತ್ತದೆ' ಎಂದು ಹೇಳಿದ್ದರು. ಈಗಲೂ ಅಷ್ಟೇ! ಒಟ್ಟು 30 ಜನರಲ್ಲಿ ಕನಿಷ್ಟ ಹತ್ತು ಸಚಿವರು ಆರ್.ಎಸ್.ಎಸ್. ಮೂಲದವರು. ಮುಸ್ಲಿಂ ಸಚಿವ ಎಂದೆಲ್ಲಾ ಹೇಳುವ ಮಮ್ತಾಜ್ ಅಲಿಖಾನ್ ಚೆಡ್ಡಿ ಪಡೆಗಿಂತ ಕಮ್ಮಿಯಿಲ್ಲ. ಈಗಿನ ಯಥಾಪ್ರಕಾರ ಗೃಹ, ಶಿಕ್ಷಣ, ಹಣಕಾಸು, ಸಂಸ್ಕೃತಿ, ಕಂದಾಯ, ಯುವಜನ ಸೇವೆಯಂತಹ ಖಾತೆಗಳನ್ನು 'ಚೆಡ್ಡಿ ಪಡೆ'ಗೆ ಮೀಸಲು. ಯಾಕೆಂದರೆ ಸಂಘ ಪರಿವಾರದ 'ಹಿಂದುತ್ವ'ದ ಹಿಡನ್ ಅಜೆಂಡಾ ಜಾರಿಗೆ ಇವು ಅತೀ ಅವಶ್ಯಕವಾದವು. ಅದು ಕೇಂದ್ರ ಸರ್ಕಾರವೇ ಇರಲಿ, ರಾಜ್ಯ ಸರ್ಕಾರಗಳೇ ಆಗಲಿ. ಅದರ ಆಯ್ಕೆ ಅದೇ.

ಗಣಿ-ಭೂ ಮಾಫಿಯಾಗಳದ್ದೇ ಮೇಲುಗೈ ಸಚಿವ ಸಂಪುಟದ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯಗಳಿವೆ. ಒಂದನೆಯದಾಗಿ ಜಿಲ್ಲಾವಾರು ಪ್ರಾತಿನಿಧ್ಯ ಬಹಳಷ್ಟು ಕಡೆ ದೊರೆತಿಲ್ಲ ಎಂಬುದು. ಈಗಲೂ 11 ಜಿಲ್ಲೆಗಳಿಗೆ ಪ್ರಾತಿನಿಧ್ಯವಿಲ್ಲ. ಆರು ಪಕ್ಷೇತರ ಶಾಸಕರಲ್ಲಿ ಐದು ಜನರನ್ನು ಮಂತ್ರಿಗಳನ್ನಾಗಿ ಮಾಡಿರುವಲ್ಲಿ, ಸಾಮರ್ಥ್ಯಕ್ಕಿಂತ ಬೆಂಬಲಿಸಲು ಒಪ್ಪಿದ ಅವರನ್ನು ತೃಪ್ತಿಗೊಳಿಸುವುದಾಗಿದೆ. ವಿಶೇಷವಾಗಿ ಗಣಿ ಮಾಫಿಯಾದ ಜನಾರ್ಧನ ರೆಡ್ಡಿ, ಕರುಣಾಕರ ರೆಡ್ಡಿ, ಶ್ರೀರಾಮುಲು ಇವರನ್ನು ವಿವಿಧ ಕೋಟಾಗಳ ಹೆಸರಿನಲ್ಲಿ ಸಚಿವರನ್ನಾಗಿಸಲಾಗಿದೆ. ಅವರು ಹೇಳಿದ ಕೆಲವರಿಗೂ ಸಚಿವ ಸ್ಥಾನ ಸಿಕ್ಕಿದೆ.

ಒಟ್ಟಾರೆಯಾಗಿ ಇಡೀ ಸಚಿವ ಸಂಪುಟದಲ್ಲಿ ಭೂಮಾಫಿಯಾ-ಗಣಿ ಮಾಫಿಯಾಗಳು ಗಣನೀಯ ಪಾಲು ಪಡೆದಿವೆ. ಹೀಗಾಗಿ ಬಿಜೆಪಿ ತಾನು ಅವರಿಗೆ ಮಣಿದಿಲ್ಲವೆಂದು ಅದೆಷ್ಟೇ ಹೇಳಿಕೊಂಡರೂ ಈ ಮಾಫಿಯಾ ನಿಯಂತ್ರಣಕ್ಕೆ ಒಳಪಟ್ಟಿದೆ ಮತ್ತು

ಪುಟ 6 ಕ್ಕೆ

ಇದು ರಾಜ್ಯದ ಪತ್ರಿಕೆಗಳಲ್ಲಿ 'ವಾಚಕರ ವಾಣಿ'ಯಲ್ಲಿ ಕಂಡ ಜನಮತ.

ರಾಜ್ಯದ ಪ್ರಾತಿನಿಧಿಕ ಅಭಿಪ್ರಾಯ ಬೇಕು

........ಇದೀಗ ಬೆಂಗಳೂರು ಬಳಿ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆಗಿದೆ. ಆ ವಿಮಾನ ನಿಲ್ದಾಣದ ಬಗೆಗೆ ಯಾವ ಹೆಸರಿ ಇರಬೇಕೆನ್ನುವ ಬಗೆಗೆ, ಕೇವಲ ಬೆಂಗಳೂರಿಗೆ ಸಂಬಂಧಿಸಿದ ಜನರ ಅಭಿಪ್ರಾಯವೇ ಮುಖ್ಯವಲ್ಲ. ಅದು ರಾಜ್ಯದ ಪ್ರತಿಷ್ಠೆಗೆ ದ್ಯೋತಕವೆನಿಸುವ ವಿಮಾನ ನಿಲ್ದಾಣವಾದುದರಿಂದ ಅದರ ಬಗೆಗೆ ರಾಜ್ಯದ ಒಟ್ಟಾಭಿಪ್ರಾಯ ಇರಬೇಕಾದುದು ಮುಖ್ಯ.

ಇದರ ಬಗೆಗೆ ಜನರ ಪ್ರಾತಿನಿಧಿಕ ಅಭಿಪ್ರಾಯ ಬೇಕು. ಅಂಥ ಅಭಿಪ್ರಾಯ ಪಡೆಯಲು ಯಾರು ಯಾವ ಬಗೆಯ ಪ್ರಯತ್ನ ಕೈಕೊಂಡಿದ್ದಾರೆ? ರಾಜ್ಯದ ಜನರ ಪ್ರಾತಿನಿಧಿಕ ಅಭಿಪ್ರಾಯ ನಾಡಪ್ರಭು ಕೆಂಪೇಗೌಡರ ಹೆಸರೇ ಇರಬೇಕು ಎನ್ನುವುದಾದರೆ ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಇದು ರಾಜಭವನಕ್ಕೆ ಮೆರವಣಿಗೆ ತೆಗೆದುಕೊಂಡು ರಾಜ್ಯಪಾಲರ ಮೇಲೆ ಒತ್ತಡ ತರುವುದರಿಂದಾಗಲಿ, ಬಸ್ಸಿಗೆ ಬೆಂಕಿ ಹಚ್ಚುವುದರಿಂದಾಗಲಿ, ಸಾರ್ವಜನಿಕ ಆಸ್ತಿ ಹಾಳು ಮಾಡುವುದರಿಂದಾಗಲಿ, ಸಾರ್ವಜನಿಕ ವಾಹನಗಳಿಗೆ ಕೊಳ್ಳೀ ಇಡುವುದರಿಂದಾಗಲಿ ನಿರ್ಣಯವಾಗುವಂಥ ವಿಷಯವಲ್ಲ. ಕರ್ನಾಟಕ ರಕ್ಷಣಾ ವೇದಿಕೆ, ಕರ್ನಾಟಕವನ್ನು ರಕ್ಷಿಸುವ ವೇದಿಕೆ ಎನಿಸಬೇಕಲ್ಲದೆ, ಕರ್ನಾಟಕವನ್ನು ಹಾಳು ಮಾಡುವ ವೇದಿಕೆ ಎನಿಸಬಾರದು.

ರಕ್ಷಣಾ ವೇದಿಕೆಯವರು ತಮ್ಮ ಮಾತಿನಲ್ಲಿ, ಕೃತಿಯಲ್ಲಿ ನಿಗ್ರಹ ಇರಿಸಿಕೊಳ್ಳುವುದು ಅಗತ್ಯವಿದೆ. ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರನ್ನು ಇಡದಿದ್ದರೆ ಕರವೇ ಜನರು ಆ ವಿಮಾನ ನಿಲ್ದಾಣವನ್ನು ಧ್ವಂಸ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಕಾನೂನನ್ನೇ ತಮ್ಮ ಕೈಗೆ ತೆಗೆದುಕೊಳ್ಳುವ ಅಧಿಕಾರವನ್ನು ಅವರ ಕೈಗೆ ಯಾರು ಕೊಟ್ಟರು? 'ದಂಡಿಗೆ ಹೋಗುತ್ತೇನೆ ಎಂದು ಹೇಳಿದ ಮಗ ಎಂಟು ಕೋಳಿ ತಿಂದು ಮನೆ ಮುದುಕಿಯ ಸೊಂಟ ಮುರಿದ' ಎಂಬಂತೆ ಮಾಡಬಾರದು.

ಕೆಂಪೇಗೌಡರಂಥ ನಾಡಪ್ರಭುಗಳು ಈ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಆಗಿಹೋಗಿದ್ದಾರೆ. ಕೊಡಗಿನಲ್ಲಿ ದೊಡ್ಡ ವೀರರಾಜೇಂದ್ರ ಇದ್ದರು. 49 ವರ್ಷ ಆಳಿದ ಅವರನ್ನು ಫ್ರೆಂಚರು, ಬ್ರಿಟಿಷರು, ಮರಾಠರು, ನಿಜಾಮರು, ಹೈದರಾಲಿ ಯಾರೊಬ್ಬರಿಂದಲೂ ಸೋಲಿಸಲು ಆಗಲಿಲ್ಲ. ಚಿತ್ರದುರ್ಗದಲ್ಲಿ ಪಾಳೆಯಗಾರರಿದ್ದರು. ಸುರಪುರದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಸುರಪುರದ ನಾಯಕರಿದ್ದರು. ಕೆಳದಿಯ ರಾಣಿ ಚೆನ್ನಮ್ಮ ಇದ್ದಳು.

ಇಂಥ ಪಾಳೆಯಗಾರರು ಅನೇಕರಿದ್ದರು. ಅವರಿಗಿಂತ ದೊಡ್ಡವರಾದ ಕದಂಬರಿದ್ದರು. ಚಾಲುಕ್ಯರಿದ್ದರು. ಕನ್ನಡ ನಾಡಿನ ವಿಸ್ತಾರ ಕಾವೇರಿಯಿಂದ ಗೋದಾವರಿಯವರೆಗೆ ಎಂದು ಹೇಳಿದ ರಾಷ್ಟ್ರಕೂಟರಿದ್ದರು. ವಿಜಯನಗರದ ಸಾಮ್ರಾಟರಿದ್ದರು. ಟಿಪ್ಪು ಸುಲ್ತಾನರಲ್ಲದೆ ಮೈಸೂರಿನ ಒಡೆಯರು ಇದ್ದರು. ಇವರ ಬಗೆಗೆ ಕರವೇಯವರು ಆಲೋಚಿಸುವ ತೊಂದರೆಯನ್ನು ತೆಗೆದುಕೊಂಡಿರುವರೇ?

ಮಾನವ ಸರಿಸಮಾನತೆಯನ್ನು ಮಾತಿನಲ್ಲಿ, ಕೃತಿಯಲ್ಲಿ ಯಾರೂ ತೋರಿಸದ ರೀತಿಯಲ್ಲಿ ತೋರಿಸಿದ ಬಸವೇಶ್ವರರು ಅವರಿಗೆ ಕಾಣಲಿಲ್ಲವೇ? ಬೆಂಗಳೂರು ಮೈಸೂರುಗಳಷ್ಟೇ ಕರ್ನಾಟಕವಲ್ಲ. ಅವುಗಳಾಚೆಗೆ ಕರ್ನಾಟಕ ವಿಶಾಲವಾಗಿದೆ ಎನ್ನುವ ಅರಿವು ರಕ್ಷಣಾ ವೇದಿಕೆಯವರಿಗೆ ಇರಬೇಕು. ತಾವು ಮಾಡುವುದು ಏನೇ ಇದ್ದರೂ ಅದರ ಬಗೆಗೆ ಕರ್ನಾಟಕದ ಜನರನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕು. ಬಲಾತ್ಕಾರದ ಹಿಂಸೆಯ ಮಾರ್ಗವನ್ನು ಬಿಡಬೇಕು.

ಪಾಟೀಲ ಪುಟ್ಟಪ್ಪ, ಹುಬ್ಬಳ್ಳಿ
'ಪ್ರಜಾವಾಣಿ'ಯಲ್ಲಿ

ಹೆಸರಿನ ಒತ್ತಡದ ಹಿಂದೆ ಜಾತಿ ವಾಸನೆ

ನಮ್ಮ ಬೆಂಗಳೂರು ಕೆಂಪೇಗೌಡರಿಗಿಂತ ಮುನ್ನ ಬೆಂಗಳೂರು ಇರಲಿಲ್ಲವೇ? ಖಂಡಿತಾ ಇತ್ತು. ಕ್ರಿಸ್ತಶಕ 9ನೇ ಶತಮಾನದ ಬೇಗೂರು ಶಾಸನದಲ್ಲಿ ಬೆಂಗಳೂರು ಎಂಬ ಹೆಸರಿ ಮೊತ್ತಮೊದಲ ಸಲ ಕಾಣಿಸಿಕೊಳ್ಳುತ್ತದೆ. ಕೆಂಪೇಗೌಡರು ಬೆಂಗಳೂರು ಪಟ್ಟಣವನ್ನು ಕಟ್ಟಿದರೆಂಬುದೇನೋ ನಿಜ. ಆದರೆ ಬೆಂಗಳೂರು ನಗರ ನಿರ್ಮಾಣವಾದುದರ ಹಿಂದೆ ಅಸಂಖ್ಯಾತ ಕಾಣದ ಕೈಗಳ ದುಡಿಮೆ ಇದೆ.

ಬೆಂಗಳೂರನ್ನು ಸುಂದರಗೊಳಿಸಿದ ಹೈದರ್ ಮತ್ತು ಟಿಪ್ಪು, ಮರಾಠರಿಗೆ ಹಣ ತೆತ್ತು ಬೆಂಗಳೂರನ್ನು ಹಿಂದಕ್ಕೆ ಪಡೆದ ಚಿಕ್ಕದೇವರಾಜ ಒಡೆಯರ್, ಬೆಂಗಳೂರನ್ನು ಉದ್ಯಮಗಳ ನಗರವಾಗಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಮಿರ್ಜಾ ಇಸ್ಮಾಯಿಲ್ ಮತ್ತು ವಿಶ್ವೇಶ್ವರಯ್ಯ, ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಶಾಸನ ಪಿತಾಮಹ ಬಿಎಲ್‌ರೈಸ್, ಆಧುನಿಕ ಬೆಂಗಳೂರನ್ನು ಕಟ್ಟಿದ ಕಬ್ಬನ್ ಮತ್ತು ಬೌರಿಂಗ್ ಮುಂತಾದವರ ಜೀವನದಲ್ಲಿ ಬೆಂಗಳೂರು ಹಾಸುಹೊಕ್ಕಾಗಿದೆ.

ಇನ್ನು ಕೆಂಪೇಗೌಡರಿಗೆ ನಾವು ಈಗಾಗಲೇ ಸಾಕಷ್ಟು ಗೌರವ ನೀಡಿಯಾಗಿದೆ. ಕೆಂಪೇಗೌಡ ರಸ್ತೆ, ಕೆಂಪೇಗೌಡ ಸರ್ಕಲ್, ಕೆಂಪೇಗೌಡನಗರ, ಕೆಂಪೇಗೌಡ ಬಸ್ ನಿಲ್ದಾಣ ಇನ್ನೂ ಏನೇನೋ ಇವೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವರ ಹೆಸರು ಇಡದಿದ್ದರೆ ಅವರ ಗೌರವವೇನೂ ಕಡಿಮೆಯಾಗುವುದಿಲ್ಲ. ನಾರಾಯಣ ಗೌಡರು ಅದಕ್ಕೆ ಕೆಂಪೇಗೌಡರ ಹೆಸರು ಇಡಬೇಕೆನ್ನುವುದರ ಒತ್ತಾಯದ ಮುಂದುಗಡೆಯೇ ನಮಗೆ ಗೌಡ ಎಂಬ ಕಾಮನ್ ಫ್ಯಾಕ್ಟರ್ ಕಾಣುತ್ತದೆ.


ಇನ್ನು ಸ್ವಾಮಿಗಳು ವಿಶ್ವಮಾನವ ತತ್ವದಿಂದ ಲೋಕಕಲ್ಯಾಣ ಹಾರೈಸುವ ಬದಲು ಜಾತಿಪರವಾದ ಒತ್ತಾಯ ಮಾಡುವುದು ಒಳ್ಳೆಯದಲ್ಲ. ಅವರ ಬಗ್ಗೆ ನಮಗೊಂದು ರೀತಿಯ ಗೌರವವಿತ್ತು. ಹಾಗೆಯೇ ನಾರಾಯಣಗೌಡರು ಮಾಡಿದ್ದ ಇತರ ಒಳ್ಳೆ ಕೆಲಸಗಳಿಗೆ ನಮ್ಮ ಪರೋಕ್ಷ ಬೆಂಬಲವಿತ್ತು.

ಇದೀಗ ಜಾತಿ ಮನೋಭಾವ ತೋರುತ್ತಾ ಅವರಿಬ್ಬರೂ ತಮ್ಮ ಗೌರವಕ್ಕೆ ಧಕ್ಕೆ ತಂದುಕೊಂಡಿದ್ದಾರಲ್ಲದೆ ಕೆಂಪೇಗೌಡರ ನಿಜ ವರ್ಚಸ್ಸಿಗೂ ಅಪಚಾರ ಉಂಟು ಮಾಡುತ್ತಿದ್ದಾರೆ.

– ಸಿ.ಮರಿ ಜೋಸೆಫ್ ಬೆಂಗಳೂರು
'ಪ್ರಜಾವಾಣಿ'ಯಲ್ಲಿ

ಕ್ರಿಕೆಟ್ - ಪಾಲಿ ಟ್ರಿಕ್ಸ್

ಕ್ರಿಕೆಟ್ಟಿಗೂ ಪಾಲಿಟಿಕ್ಸ್‌ಗೂ ಎಷ್ಟೊಂದು ಸಾಮ್ಯತೆ ಇದೆ ನೋಡಿ. ವಿಜಯ ಮಲ್ಯ ಬೆಂಗಳೂರು ಕ್ರಿಕೆಟ್ ತಂಡ ಕೊಂಡುಕೊಂಡಾಗ ಇದು ಒಳ್ಳೆ ಟೆಸ್ಟ್ ತಂಡ ಅಂತ ಎಲ್ಲರೂ ಹೇಳಿದರು. ಹಾಗೆ ರಾಯಲ್ ಚಾಲೆಂಜರ್ಸ್ ತಂಡ ಅದನ್ನು ಸಾಬೀತು ಮಾಡಿತು. ಅದು ಮುಗಿದ ವಿಚಾರ ಬಿಡಿ. ಐ ಪಿ ಎಲ್ ಕ್ರಿಕೆಟ್ ತಂಡಗಳು ಹರಾಜಾಗುವ ಮುಂಚೆಯೇ ಕರಿನಾಟಕ 20-20 ಕಪ್‌ಗಾಗಿ ಬಳ್ಳಾರಿ ಗಣಿಕಾರಣಿಗಳು ಕೊಂಡುಕೊಂಡಿದ್ದರು. ಆದರೆ 20-20 ಕರಿನಾಟಕ ಕಪ್ ಸರಿಯಾಗಿ ನಡೆಯಲಿಲ್ಲ. ಐದು ವರ್ಷದ ಟೆಸ್ಟ್ ಮ್ಯಾಚಾದರೂ ಸರಿಯಾಗಿ ನಡೆಯಲಿ ಅಂತ ಜನಗಳು ಆ ತಂಡಕ್ಕೆ ಟೆಸ್ಟ್ ತಂಡದ ಸ್ಥಾನ ನೀಡಿದರು. 20-20 ಮ್ಯಾಚಿನಲ್ಲಿ ಈ 'ಮೈನ್ಸ್ ಕಿಂಗ್ಸ್' ತಂಡದ ಸಹ ತಂಡವಾದ 'ದೇವ್ ಡೆವಿಲ್ಸ್' ನೀಡಿದ ಒಳ್ಳೆ ಅಭ್ಯಾಸದಿಂದ ಟೆಸ್ಟ್ ತಂಡವಾಗಿ ಬೆಳೆಯಿತು. ಜೊತೆಗೆ ಫೀಲ್ಡಿಂಗ್ ಮಾಡುತ್ತಿದ್ದ 'ಹೈಕಮಾಂಡ್ ಹೋಪ್ ಲೆಸ್ ಫೆಲೋಸ್' ತಂಡ ಸಿಕ್ಕಿದ ಕ್ಯಾಚುಗಳನ್ನೆಲ್ಲ ಬಿಟ್ಟು, ಹೊಡೆದ ಬಾಲುಗಳನ್ನೆಲ್ಲ ಬೌಂಡರಿಗೆ ಬಿಟ್ಟು 'ಮೈನ್ಸ್ ಕಿಂಗ್ಸ್' ತಂಡದ ಸ್ಕೋರು ಹೆಚ್ಚಿತು. 'ಮೈನ್ಸ್ ಕಿಂಗ್ಸ್' ತಂಡ ಇಷ್ಟು ದೊಡ್ಡ ಕ್ರಿಕೆಟ್ ತಂಡವಾಗಿ ಬೆಳೆಯಲು 'ಬಂ' ಎನ್ನುವ ಕೋಚ್ ಕೂಡ ಕಾರಣ ಎನ್ನುವುದನ್ನು ಮರೆಯಲಾಗದು. ಕ್ರಿಕೆಟ್ ಆಡಕ್ಕೆ ಆಗುತ್ತದೋ ಇಲ್ಲವೋ ಅಂತ ಇದ್ದ ಈ 'ಬೀ' ತಂಡವನ್ನು ಈ 'ಬಂ' ಎನ್ನುವ ಕೋಚ್ ಸೇರಿ, ಅದರ ಶಕ್ತಿ, ಆತ್ಮವಿಶ್ವಾಸ ಎಲ್ಲವನ್ನೂ ಹೆಚ್ಚಿಸಿದರು.



ಶ್ರೀ

ಒಟ್ಟಿನಲ್ಲಿ 'ಮೈನ್ಸ್ ಕಿಂಗ್ಸ್' ತಂಡದ ಬೆಳವಣಿಗೆಯಲ್ಲಿ ಈ ಕೋಚ್, ಸಹ ತಂಡವಾಗಿದ್ದ 'ದೇವ್ ಡೆವಿಲ್ಸ್' ಹಾಗೂ 'ಹೈಕಮಾಂಡ್ ಹೋಪ್ ಲೆಸ್ ಫೆಲೋಸ್' ತಂಡ ಎಲ್ಲರ ಸಹಕಾರ ಇದೆ. ಇಷ್ಟು ಮಾತ್ರ ಅಲ್ಲ, 'ಮೈನ್ಸ್ ಕಿಂಗ್ಸ್' ತಂಡದ ಮಾಲೀಕರಾದ ...ಳ್ಳಾರಿ ಗಣಿಕಾರಣಿಗಳು ಕೂಡಾ ಬಹಳ ಬಂಡವಾಳ ಹೂಡಿ ತಮ್ಮ ತಂಡಕ್ಕೆ ಎಲ್ಲ ರೀತಿಯ ನೆರವನ್ನು ನೀಡಿದ್ದಾರೆ. ಈ ತಂಡಕ್ಕೆ ಕೆಲ ಆಟಗಾರರ ಕೊರತೆಯಾದಾಗ ಹಿಂದೆ ಮುಂದೆ ನೋಡದೆ 'ಪರದೇಶಿ' ಆಟಗಾರರನ್ನು ಅವರು ಕೇಳಿದ ಬೆಲೆ 'ಬಿಸಾಕಿ' ಕೊಂಡು ಕೊಂಡಿದ್ದಾರೆ. ಜನಗಳ ಬದಲಾದ ಟೇಸ್ಟ್ ನಿಂದಾಗಿ ಟೆಸ್ಟ್ ಮ್ಯಾಚ್ ಶುರುವಾಗಿದೆ. ಕ್ರಿಕೆಟಿನಲ್ಲಿ 20-20 ಇಷ್ಟ ಪಡುವ ಜನ ಪಾಲಿಟಿಕ್ಸಿನಲ್ಲಿ ಟೆಸ್ಟ್ ಇಷ್ಟ ಪಟ್ಟಿದ್ದಾರೆ. 20-20 ಒಳ್ಳೆ ಕ್ರಿಕೆಟ್ ಅಲ್ಲ, ಅಲ್ಲಿ ಆಟಗಾರರ ಪ್ರತಿಭೆ ಪ್ರದರ್ಶನಕ್ಕೆ ಅವಕಾಶ ಇಲ್ಲ, ಸುಮ್ಮನೆ ಬೀಸುವುದೇ ಆಟ ಅಂತ ಹಲವರ ಅಭಿಪ್ರಾಯ. ಹಾಗೆ ಈಗ ಪಾಲಿಟಿಕ್ಸಿನ ಟೆಸ್ಟ್ ನಲ್ಲಿ ಮೈನ್ಸ್ ಕಿಂಗ್ಸ್ ತಂಡದ ಆಟಗಾರರು ತಮ್ಮ 'ಪ್ರತಿಭೆ','ಕಲೆ' ಪ್ರದರ್ಶಿಸಲು ಅವಕಾಶ ಸಿಕ್ಕಿದೆ . ಮುಂದಿನ 'ಆಟ'ವನ್ನು ಜನಗಳು ತೆರೆಯ ಮೇಲೆ ನೋಡಲಿದ್ದಾರೆ!

ಕ್ರಿಕೆಟ್‌ಗೂ ಪಾಲಿಟಿಕ್ಸ್‌ಗೂ ಇಷ್ಟೊಂದು ಸಾಮ್ಯತೆ ಕಂಡುಬಂದರೂ, ಕೆಲವು ವ್ಯತ್ಯಾಸಗಳೂ ಇವೆ. ಕ್ರಿಕೆಟ್ ತಂಡವನ್ನು ಇಷ್ಟು ಕೋಟಿಗೆ ಹರಾಜಿನಲ್ಲಿ ಕೊಂಡರು. ಇಷ್ಟು ಕೋಟಿಗೆ ಇಂಥ ಆಟಗಾರರನ್ನು ಕೊಂಡರು ಎಂದು ಬಹಿರಂಗವಾಗಿ ಹೇಳಿಕೊಂಡು ಹೆಮ್ಮೆ ಪಡುತ್ತಾರೆ. ಆದರೆ ಪಾಲಿಟಿಕ್ಸ್‌ನಲ್ಲಿ ತಂಡವನ್ನು ಕೊಂಡವರು ಎಷ್ಟು ಕೋಟಿಗೆ ಕೊಂಡರು ಯಾವ ಯಾವ ಆಟಗಾರರನ್ನು ಎಷ್ಟು ಕೋಟಿಗೆ ಕೊಂಡರು , ಏನೇನು ಹಂಚಿಕೆ ಮಾಡಿ ಪ್ರೇಕ್ಷಕರನ್ನು ಕೊಂಡರು ಎಂದು ಬಹಿರಂಗವಾಗಿ ಹೇಳುವಂತಿಲ್ಲ. ಎಂಥ ಅನ್ಯಾಯ ಅಲ್ವೇ?!.

ಈ 20-20 ಮತ್ತು ಟೆಸ್ಟ್ ಮ್ಯಾಚ್ ನಡುವೆ ಒನ್ ಡೇ ಮ್ಯಾಚ್ ಥರ ಎಲೆಕ್ಷನ್ ಕಮಿಷನ್ಸ್ ತಂಡ ಒಳ್ಳೆ ಆಟ ಆಡಿತು. ಟೈಟ್ ಫೀಲ್ಡಿಂಗು, ಟೈಟ್ ಬೌಲಿಂಗು, ಒಳ್ಳೊಳ್ಳೆ 'ಕ್ಯಾಚು', ಎಲ್ಲಾ ಮೇಡನ್ ಓವರ್ರು. ಅಬ್ಬಬ್ಬ ಏನು ಆಟ! ಒಂದು ಸಣ್ಣ ಮೀನೂ ಬಲೆಯಿಂದ ತಪ್ಪಿಸಿಕೊಳ್ಳಬಾರದು (ತಿಮಿಂಗಲಗಳು ಹೋದರೆ ಪರವಾಗಿಲ್ಲ?!.) ಎನ್ನುವಂಥ ಆಟ. ಆದರೆ ಈ ಎಲೆಕ್ಷನ್ ಕಮಿಷನ್ಸ್ ತಂಡದ ಒನ್ ಡೇ ಮ್ಯಾಚ್ ಮುಗಿಯುತ್ತಿದ್ದ ಹಾಗೆ, ಬೌಂಡರಿಗಳು ಸಿಕ್ಸರುಗಳೂ ಸಿಡಿಯುತ್ತಿವೆ. ಅರ್ಥವಾಗಲಿಲ್ಲವೇ? ಎಲೆಕ್ಷನ್ ಕಮೀಷನ್ನು ಬ್ಯಾನರ್ರು, ಕಟೌಟು, ಪೋಸ್ಟರುಗಳನ್ನು ನಿಯಂತ್ರಿಸಿದ್ದನ್ನು ಅಣಕಿಸುವ ರೀತಿಯಲ್ಲಿ, 'ಮೈನ್ಸ್ ಕಿಂಗ್ಸ್' ತಂಡದ ನಾಯಕ ಕಿವಿಯಲ್ಲಿ ಬಾವುಟ ಸಿಕ್ಕಿಸಿಕೊಂಡ ಕಟೌಟುಗಳು, ಬ್ಯಾನರುಗಳು, ಬಾವುಟಗಳು ......, ರಾಜ್ಯದಾದ್ಯಂತ ರಾರಾಜಿಸುತ್ತಿವೆ. ಈಗೇನು ಮಾಡ್ತೀರ? ಪಾಲಿಟಿಕ್ಸ್ ಸ್ವಾಮಿ ಇದು ಪಾಲಿ ಟ್ರಿಕ್ಸ್.

○

ಸುದ್ದಿಬಿಂಬ

ಅಧಿಕಾರಕಾಂಡ

ಭಿನ್ನಮತ ಸ್ಫೋಟ

ಪ್ರಜಾವಾಣಿ, ಬೆಂಗಳೂರು, ಶನಿವಾರ ಮೇ 31,2008

ಬೆಂಗಳೂರು: ಪಕ್ಷದ ಹಿರಿಯ ಮುಖಂಡ ಜಗದೀಶ್ ಶೆಟ್ಟರ್, ಡಿ.ಎಚ್.ಶಂಕರಮೂರ್ತಿ, ಶಂಕರ ಲಿಂಗೇಗೌಡ, ನಾರಾಯಣಸ್ವಾಮಿ, ಅಪ್ಪಚ್ಚು ರಂಜನ್ ಮೊದಲಾದವರಿಗೆ ಯಡಿಯೂರಪ್ಪನವರ ಸಂಪುಟದಲ್ಲಿ ಸ್ಥಾನ ಸಿಗದೆ ಇರುವುದರಿಂದ ಬಿಜೆಪಿಯಲ್ಲಿ ಭಿನ್ನಮತ ಸ್ಫೋಟಗೊಂಡಿದೆ.

ಸಚಿವ ಸ್ಥಾನ ವಂಚಿತ ಶೆಟ್ಟರ್ ಅವರ ಬೆಂಬಲಿಗರು ಮುಖ್ಯಮಂತ್ರಿಗಳ ಗೃಹಕಚೇರಿ 'ಕೃಷ್ಣಾ'ದ ಮುಂದೆ ಶುಕ್ರವಾರ ಸಂಜೆ ಪ್ರತಿಭಟನೆ ನಡೆಸಿದ್ದಾರೆ. ಹುಬ್ಬಳ್ಳಿಯಲ್ಲಿ ಶೆಟ್ಟರ್ ಬೆಂಬಲಿಗರು ಹೋರಾಟ ಆರಂಭಿಸಿದ್ದಾರೆ. ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಚಾಮರಾಜ ಕ್ಷೇತ್ರದ ಶಂಕರಲಿಂಗೇಗೌಡ, ಆನೇಕಲ್‌ನ ನಾರಾಯಣಸ್ವಾಮಿ ಅಸಮಾಧಾನ ಗೊಂಡಿದ್ದಾರೆ.

ಮಡಿಕೇರಿ ಶಾಸಕ ಅಪ್ಪಚ್ಚು ರಂಜನ್, ಚಿಕ್ಕಮಗಳೂರಿನ ಸಿ.ಟಿ.ರವಿ. ಶೃಂಗೇರಿಯ ಡಿ.ಎನ್.ಜೀವರಾಜ್ ಅವರೂ ಬೇಸರಗೊಂಡಿದ್ದಾರೆ. ಅಪ್ಪಚ್ಚು ರಂಜನ್ ಪರಪತ್ರಿಕಾ ಹೇಳಿಕೆ ನೀಡಿರುವ ಕೊಡವ ಸಮಾಜದ ಅಧ್ಯಕ್ಷ ಬಿ.ಎಂ.ಅಯ್ಯಣ್ಣ, ರಂಜನ್‌ಗೆ ಮಂತ್ರಿ ಪದವಿ ಕೊಡುವುದಾಗಿ ಭರವಸೆ ನೀಡಿದ್ದರು.

ಆ ಭರವಸೆ ಈಡೇರಿಲ್ಲ. ಸಂಪುಟ ವಿಸ್ತರಣೆ ಸಂದರ್ಭದಲ್ಲಾದರೂ ರಂಜನ್‌ಗೆ ಸಚಿವ ಸ್ಥಾನ ಸಿಗದೆ ಇದ್ದರೆ ಕೊಡಗಿನ ಜನತೆ ತೀವ್ರ ಹೋರಾಟ ನಡೆಸಲಿದೆ' ಎಂದು ಎಚ್ಚರಿಕೆ ನೀಡಿದರು.

ಶೆಟ್ಟರ್ ಸಮಸ್ಯೆ: ಬಿಜೆಪಿಗೆ ಪೂರ್ಣ ಬಹುಮತ ಇಲ್ಲದೆ ಇರುವುದರಿಂದ ವಿಧಾನಸಭೆಯನ್ನು ನಿಭಾಯಿಸಲು ವಿಧಾನಸಭಾಧ್ಯಕ್ಷ (ಸ್ಪೀಕರ್) ಹುದ್ದೆಗೆ ಜಗದೀಶ್ ಶೆಟ್ಟರ್ ಅವರೇ ಸಮರ್ಥರು ; ವಕೀಲರಾಗಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವ ಶೆಟ್ಟರ್ ಅವರು ಮಾತ್ರ ಸ್ಪೀಕರ್ ಹುದ್ದೆ ನಿರ್ವಹಿಸುವುದು ಸಾಧ್ಯ ಎಂಬುದು ಪಕ್ಷದ ವರಿಷ್ಠರ ಅಭಿಮತ. ಸ್ಪೀಕರ್ ಸ್ಥಾನ ಒಪ್ಪಿಕೊಳ್ಳುವಂತೆ ಸ್ವತ: ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ರಾಜನಾಥ್‌ಸಿಂಗ್, ಅವರು ಶೆಟ್ಟರ್ ಅವರ ಮನವೊಲಿಸುವ ಪ್ರಯತ್ನ ಮಾಡಿದರು.

ಆದರೆ ಸ್ಪೀಕರ್ ಸ್ಥಾನ ಬೇಡವೇ ಬೇಡ ಎಂದು ಸ್ಪಷ್ಟವಾಗಿ ಹೇಳಿರುವ ಶೆಟ್ಟರ್ ಅವರು, 'ಸಚಿವ ಸ್ಥಾನ ಕೊಡುವಂತೆ ನಾನು ಯಾರನ್ನೂ ಕೇಳಿಲ್ಲ. ಸಚಿವ ಸ್ಥಾನ ಕೊಡದೆ ಇದ್ದರೆ ಶಾಸಕನಾಗಿಯೇ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತೇನೆ' ಎಂದಿದ್ದಾರೆ.

'ಉತ್ತರ ಕರ್ನಾಟಕದ ಅಭಿವೃದ್ಧಿ ಮಾಡಬೇಕೆಂಬುದು ನನ್ನ ಅಭಿಲಾಷೆ. ಸ್ಪೀಕರ್ ಆದರೆ ಸಾರ್ವಜನಿಕ ಸಂಪರ್ಕ ಕಡಿಮೆ ಆಗುತ್ತದೆ; ಸಾರ್ವಜನಿಕ ಸೇವೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ತೊಂದರೆ ಆಗುತ್ತದೆ' ಎಂದು ಅವರು ಹೇಳಿದ್ದಾರೆ.

ಹೀಗೆ ಶೆಟ್ಟರ್ ಪಟ್ಟು ಹಿಡಿದಿರುವುದು ಬಿಜೆಪಿ ವರಿಷ್ಠರಿಗೆ ದೊಡ್ಡ ತಲೆ ನೋವಾಗಿದೆ.

* * *

ಹೆಲಿಕಾಪ್ಟರ್‌ನಲ್ಲಿ ಬಳ್ಳಾರಿಗೆ ಹಾರಿದ ಪಕ್ಷೇತರರು

ಬೆಂಗಳೂರು : ಸರ್ಕಾರಕ್ಕೆ ಬೆಂಬಲ ಸೂಚಿಸಿರುವ ಆರು ಮಂದಿ ಪಕ್ಷೇತರ ಶಾಸಕರನ್ನು ಹೆಲಿಕಾಪ್ಟರ್‌ನಲ್ಲಿ ಬಳ್ಳಾರಿಗೆ ಸ್ಥಳಾಂತರ ಮಾಡಿದ್ದು, ಎಲ್ಲರೂ ಪ್ರಮಾಣವಚನ ಸ್ವೀಕರಿಸುವ ದಿನದಂದೇ ನಗರಕ್ಕೆ ವಾಪಸಾಗುವುದು.

ಬಿಜೆಪಿಗೆ ಬೆಂಬಲ ನೀಡುವ ನಿರ್ಧಾರದ ನಂತರ ಎಲ್ಲ ಪ್ಷೇತರರಿಗೂ ಪಂಚತಾರಾ ಹೋಟೆಲ್‌ನಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಿದ್ದ ರೆಡ್ಡಿ ಸಹೋದರರು ಅವರನ್ನು ಬಳ್ಳಾರಿಗೆ ಸ್ಥಳಾಂತರಿಸಿದ್ದಾರೆ.

ಶಾಸಕರಾದ ನರೇಂದ್ರಸ್ವಾಮಿ, ಶಿವರಾಜ್, ಶೇಖರ್, ವೆಂಕಟರಮಣಪ್ಪ, ಡಿ.ಸುಧಾಕರ್, ವರ್ತೂರು ಪ್ರಕಾಶ್ ಅವರನ್ನು ಪ್ರತ್ಯೇಕವಾಗಿ ಎರಡು ಹೆಲಿಕಾಪ್ಟರ್‌ಗಳಲ್ಲಿ ಬಳ್ಳಾರಿಗೆ ಕರೆದೊಯ್ಯಲಾಗಿದೆ. ನರೇಂದ್ರಸ್ವಾಮಿ, ಶಿವರಾಜ್ ಮತ್ತು ಶೇಖರ್ ಅವರನ್ನು ಒಂದೇ ಅತಿಥಿ ಗೃಹದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಪ್ರಕಾಶ್ ಸೇರಿದಂತೆ ಇತರ ಮೂವರನ್ನು ಪ್ರತ್ಯೇಕ ಅತಿಥಿ ಗೃಹದಲ್ಲಿ ಉಳಿಯಲು ವ್ಯವಸ್ಥೆ ಮಾಡಿದ್ದು, ಎರಡೂ ಗುಂಪುಗಳು ಒಂದು ಕಡೆ ಸೇರದಂತೆ ನೋಡಿಕೊಂಡಿದ್ದಾರೆ.

* * *

ಬಳ್ಳಾರಿ ಪಾತ್ರ

ಜೆಡಿ(ಎಸ್)-ಬಿಜೆಪಿ ಸಮ್ಮಿಶ್ರ ಸರಕಾರದ ಏಳು-ಬೀಳಿನಲ್ಲಿ ಮಹತ್ವದ ಪಾತ್ರ ವಹಿಸಿದ್ದ ಬಳ್ಳಾರಿ ರಾಜಕೀಯದ ಪ್ರಭಾವ ಈಗ ಬಿಜೆಪಿಯೇ ಪೂರ್ಣ ಪ್ರಮಾಣದಲ್ಲಿ ಸರ್ಕಾರ ರಚನೆಯ ಕಸರತ್ತಿನಲ್ಲಿ ತೊಡಗಿರುವಾಗಲೂ ದಟ್ಟವಾಗಿದೆ. 'ಪಕ್ಷಕ್ಕೆ ಏನು ಬೇಕೋ ಅದನ್ನು ಮಾಡಿದ್ದೇವೆ, ಈಗ ನಮ್ಮ ಸರದಿ' ಎಂದು ಬಿಜೆಪಿ ಸರ್ಕಾರದಲ್ಲಿ ಮಹತ್ವದ ಸ್ಥಾನಮಾನಗಳನ್ನು ಗಿಟ್ಟಿಸಿಕೊಳ್ಳುವ ಪ್ರಯತ್ನ ತೆರೆಯ ಮರೆಯಲ್ಲಿ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

-26.5.08

* * *

ಡಿಸಿಎಂ ಪಟ್ಟಕ್ಕೆ ಪಟ್ಟು

ಕರುಣಾಕರ ರೆಡ್ಡಿ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ಕೊಡುವಂತೆ ಬಂದ ಬೇಡಿಕೆಯನ್ನು ನಯವಾಗಿ ನಿರಾಕರಿಸಿರುವ ಯಡಿಯೂರಪ್ಪನವರು ಅರಣ್ಯ ಮತ್ತು ಗಣಿಖಾತೆ ನೀಡುವ ಭರವಸೆ ಕೊಟ್ಟಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ. ಕರುಣಾಕರ ರೆಡ್ಡಿ ಅರಣ್ಯ, ಬಿ.ಶ್ರೀರಾಮುಲು ಗಣಿ ಸಚಿವರಾಗುವ ಸಂಭವವಿದೆ. ಒಂದು ವೇಳೆ ಬಳ್ಳಾರಿ ಗಣಿ ಧಣಿಗಳ ಒತ್ತಡ ಹೆಚ್ಚಾದರೆ ಉಪಮುಖ್ಯಮಂತ್ರಿ ಹುದ್ದೆ ಸೃಷಿಯಾದರೂ ಅಚ್ಚರಿಯಿಲ್ಲ ಎನ್ನಲಾಗಿದೆ.

-28.5.2008

* * *

ಕ್ರಿಮಿನಲ್ ಆಪಾದನೆಯಿರುವ ಶಾಸಕರು

ಬಿಜೆಪಿ ಮಂತ್ರಿ ಮಂಡಲದಲ್ಲಿ ಕ್ರಿಮಿನಲ್ ದಾಖಲೆಗಳಿರುವ ಶಾಸಕರನ್ನು ಸೇರಿಸಿಕೊಳ್ಳದಂತೆ ನಾಗರಿಕರು ಒತ್ತಡ ಹಾಕಬೇಕು ಎಂದು 'ಕರ್ನಾಟಕ ಎಲೆಕ್ಷನ್ ವಾಚ್'ನ ತ್ರಿಲೋಚನ ಶಾಸ್ತ್ರಿ ಹೇಳಿದ್ದಾರೆ. ಈ ಸಂಘಟನೆಯ ಪ್ರಕಾರ ಈಗ ಚುನಾಯಿತರಾಗಿರುವ ಮೂವರು ಶಾಸಕರ ಮೇಲೆ ಕೊಲೆ ಪ್ರಯತ್ನದ ಆಪಾದನೆಗಳಿವೆ. ಅವರೆಂದರೆ- ಬಿ. ಶ್ರೀರಾಮುಲು (ಬಳ್ಳಾರಿ), ಬಿ.ನಾಗೇಂದ್ರ(ಕೂಡ್ಲಿಗಿ) ಮತ್ತು ಆನಂದ ಸಿಂಗ್ (ವಿಜಯನಗರ).

-29.5.2008

* * *

ಜನ ಏನಂತಾರೆ?

ಗಣಿ ರೆಡ್ಡಿಗಳನ್ನು ನಿಯಂತ್ರಣದಲ್ಲಿಡಿ

ಬಿಜೆಪಿಯ ಸರ್ಕಾರ ಬಂತೆಂದು ಬೀಗುವವರು ಕೊಂಚ ಯೋಚಿಸಬೇಕು. ಈಗ ಅಳಲಿಕ್ಕೆ ಹೊರಟಿರುವುದು ಬಿಜೆಪಿಯ ಸರ್ಕಾರವಲ್ಲ, ಬಳ್ಳಾರಿ ಗಣಿರೆಡ್ಡಿಗಳ ಸರ್ಕಾರ. ಅವರು ಗೆದ್ದಿರುವುದು, ತಮ್ಮವರನ್ನು ಗೆಲ್ಲಿಸಿರುವುದು ಮತ್ತು ಆರು ಮಂದಿ ಪಕ್ಷೇತರರನ್ನು ಗಳಿಸಿಕೊಟ್ಟಿರುವುದು ರಾಜ್ಯದ ಖನಿಜ ಸಂಪತ್ತಿನಿಂದ ಗಳಿಸಿದ ಹಣದಿಂದ. ಲಾಭವಿಲ್ಲದೆ ಕೋಟಿಗಟ್ಟಲೆ ಹಣ ಚೆಲ್ಲಲು ಈ ರೆಡ್ಡಿಗಳೇನು ದಡ್ಡರಲ್ಲ.

ಆಂಧ್ರ ಮೂಲದ ಈ ರೆಡ್ಡಿಗಳೀಗ ಕರ್ನಾಟಕದ ರಾಜಕಾರಣದಲ್ಲಿ ಯಶಸ್ವಿಯಾಗಿ ಬಂಡವಾಳ ಹೂಡಿದ್ದಾರೆ. ಮುಂದೆ ಅಪರಿಮಿತ ಲಾಭ ಗಿಟ್ಟಿಸಿಕೊಳ್ಳುತ್ತಾರಲ್ಲದೆ ಅಧಿಕಾರದ ಪ್ರತಿಷ್ಠೆಯನ್ನೂ ಮೆರೆಯುತ್ತಾರೆ. ಅರಣ್ಯ ಖಾತೆ, ಗಣಿ ಖಾತೆ ಮತ್ತು ಉಪ ಮುಖ್ಯಮಂತ್ರಿ ಹುದ್ದೆಗಳಿಗೆ ಇವರು ಏಟು ಹಾಕಿರುವುದೇ ಇದಕ್ಕೆ ಸಾಕ್ಷಿ. ಇವರೊಡನೆ ಇದೇ ಬಿಜೆಪಿಯ ಭೂಮಾಫಿಯಾ ರಾಜಕಾರಣಿಗಳೂ ಸೇರಿಕೊಂಡು ರಾಜ್ಯವನ್ನು ಮುಗಿಸಿಬಿಡುತ್ತಾರೆ.

ಸ್ವಸುಖ ಮತ್ತು ಸ್ವಪ್ರತಿಷ್ಠೆಗಳನ್ನು ಮಾತ್ರ ಗುರಿಯಾಗಿಟ್ಟುಕೊಳ್ಳುವ ಇಂಥ ದುಷ್ಟ ಬಂಡವಾಳಶಾಹಿಗಳಿಂದ ನಾಡಿಗೆ ಏನೇನೂ ಒಳಿತಾಗುವುದಿಲ್ಲ. ಬದಲಿಗೆ ನಾಡಿನ ಪ್ರಾಕೃತಿಕ ಸಂಪತ್ತೆಲ್ಲ ಇವರ ಖಜಾನೆ ಸೇರುತ್ತದೆ. ಬಡವರ ಗೋಳು ಉಲ್ಬಣಿಸುತ್ತದೆ. ಇಡೀ ನಾಡೇ ಒಂದು ವಿಧದಲ್ಲಿ ಇಂತಹವರ ಅಡಿಯಾಳಾಗಿ ಬಿಡುತ್ತದೆ. ಏಕೆಂದರೆ ಕಾನೂನೆ ಇವರ ಕೈಲಿರುತ್ತದಲ್ಲಾ.

ನಾಡಿನ ಜನತೆ ಎಚ್ಚೆತ್ತುಕೊಳ್ಳಬೇಕು. ಮುಂದಾಗಬಹುದಾದ ಅನಾಹುತವನ್ನು ಮನಗಂಡು ಈಗಲೇ ಯಡಿಯೂರಪ್ಪ ನವರನ್ನು ಸರಿದಾರಿಗೆ ಹಚ್ಚಬೇಕು. ಯಡಿಯೂರಪ್ಪ ಕೂಡ ಈ ಗಣಿ ರಾಕ್ಷಸರನ್ನೂ ಭೂ ರಾಕ್ಷಸರನ್ನೂ ಎಲ್ಲಿಟ್ಟರಬೇಕೋ ಅಲ್ಲಿಟ್ಟಿರಬೇಕು. ತಲೆಯ ಮೇಲೆ ಕೂರಿಸಿಕೊಳ್ಳಬಾರದು.

– ಎಚ್.ಆನಂದರಾಮ ಶಾಸ್ತ್ರಿ

ಬೆಂಗಳೂರ

ರೆಡ್ಡಿ ಕೈಯೊಳಗೆ ಬಿಜೆಪಿ.......!

ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಲ್ಲಿ ಬಳ್ಳಾರಿಯ ಗಣಿ ಧಣಿಗಳ (ರೆಡ್ಡಿ ಸೋದರರ) ಪಾತ್ರ ಮಹತ್ವದ್ದು ಎನ್ನುವ ಮಾತು ಎಲ್ಲೆಡೆ ಕೇಳಿಬರುತ್ತಿದೆ. ಮಾಧ್ಯಮಗಳಲ್ಲೂ ಅದು ವ್ಯಕ್ತವಾಗಿದೆ. ಬಿಜೆಪಿ ನಾಯಕರು ಅದನ್ನು ಅಲ್ಲಗಳೆದಿಲ್ಲ. ಫಲಿತಾಂಶ ಪ್ರಕಟವಾದ ಇಪ್ಪತ್ನಾಲ್ಕು ತಾಸುಗಳಲ್ಲಿ ಪಕ್ಷೇತರರ ಬೆಂಬಲ ಪಡೆಯುವಲ್ಲಿ ಅವರು ತಮ್ಮ 'ಕೈ ಚಳಕ' ತೋರಿಸಿದ್ದಾರೆ. ಅವರ ಕೈ ಬಳ್ಳಾರಿ ಸುತ್ತಮುತ್ತಲಿನ ಜಿಲ್ಲೆಗಳವರೆಗೆ ಚಾಚಿದೆ. ಬಿ.ಎಸ್.ಯಡಿಯೂರಪ್ಪ ಅವರನ್ನು ಅಭಿನಂದಿಸಲು (ಅವರ ಮನೆಗೆ) ಬರುವ ನೂರಾರು ಅಭಿಮಾನಿಗಳು, ಪಕ್ಷದ ಕಾರ್ಯಕರ್ತರಿಗೆ ಊಟೋಪಚಾರದ ವ್ಯವಸ್ಥೆಯನ್ನೂ ಅವರೇ ಮಾಡುತ್ತಿದ್ದಾರೆ ಎಂದು ವರದಿಯಾಗಿದೆ.

ರೆಡ್ಡಿ ಸೋದರರ ಧಾರಾಳತನ ಬಿಜೆಪಿಗೆ ಈಗ ಅಪ್ಯಾಯಮಾನವಾಗಿ ಕಾಣಬಹುದು. ರೆಡ್ಡಿ ಕುಟುಂಬದ ಮೂವರು ಸೋದರರಲ್ಲಿ ಇಬ್ಬರು ವಿಧಾನಸಭಾ ಸದಸ್ಯರು. ಒಬ್ಬರು ವಿಧಾನಪರಿಷತ್ ಸದಸ್ಯ. ಅವರ ಬಲಗೈ ಬಂಟ ಎನ್ನಲಾದ ಮಾಜಿ ಮಂತ್ರಿ ಹಾಗೂ ಅವರ ಸೋದರಳಿಯ ಶಾಸಕರು, ರೆಡ್ಡಿ, ರಾಮುಲು ಗುಂಪಿನ ಶಾಸಕ ಬಲ ಐದು. ಅವರಿಂದ ಹಣ ಸಹಾಯ ಪಡೆದು ಗೆದ್ದವರೂ ಇರಬಹುದು. ಬಿಜೆಪಿ ಸರ್ಕಾರಕ್ಕೆ ಬೆಂಬಲ ಘೋಷಿಸಿರುವ ಆರೂ ಮಂದಿ ಪಕ್ಷೇತರರು ಅವರ ಹಂಗಿನಲ್ಲಿ ಸಿಕ್ಕಿ ಹಾಕಿಕೊಳ್ಳುವ ಅಪಾಯವಿದೆ. ಈ ಬೆಳವಣಿಗೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ ಅಲ್ಲವೇ?

ರಾಜ್ಯದಲ್ಲಿ ಮಾಜಿ ಪ್ರಧಾನ ದೇವೇಗೌಡರ ಕುಟುಂಬದ ನಂತರ ಅತ್ಯಂತ ಪ್ರಭಾವಶಾಲಿ ಕುಟುಂಬವಾಗಿ 'ರೆಡ್ಡಿ ಬಳಗ' ಬೆಳೆಯುತ್ತಿದೆ. ರೆಡ್ಡಿ ಬಳಗದವರು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ಚುನಾವಣೆ ಎದುರಿಸಿ ಗೆದ್ದು ಬಂದಿದ್ದಾರೆ ಎಂದು ಯಾರಾದರೂ ವಾದಿಸಬಹುದು. ಆದರೆ ಅವರ ಬಳಿ ಇರುವ ಹಣವನ್ನು ನೆಚ್ಚಿಕೊಂಡು ಬಿಜೆಪಿ ರಾಜಕೀಯ ಮಾಡುತ್ತಿದೆ ಎನ್ನುವುದು ಸೂರ್ಯನ ಬೆಳಕಿನಷ್ಟು ಸ್ಪಷ್ಟ. ಒಂದು ರಾಷ್ಟ್ರೀಯ ಪಕ್ಷ ಒಂದು ಕುಟುಂಬದ ಮೇಲೆ ಹೆಚ್ಚು ಅವಲಂಬನೆ ಆಗುವುದು ಅಪಾಯಕಾರಿ ಅಲ್ಲವೇ?

ರೆಡ್ಡಿ ಬಳಗದ ಧಾರಾಳತನ ಮುಂದೊಂದು ದಿನ ಈ ರಾಜ್ಯಕ್ಕೆ ದುಬಾರಿ ಆಗಬಾರದಲ್ಲವೇ? ಬಿಜೆಪಿ ಮುಖಂಡರು ಈ ಕುರಿತು ಯೋಚಿಸುವರೇ?

ಸಂತೋಷ್‌ಕುಮಾರ್,

ಬೆಂಗಳೂರು

ಗೆದ್ದಿದ್ದು ಬಿಜೆಪಿಯಲ್ಲ

ರಾಜ್ಯದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿರುವುದು ನಿಜಕ್ಕೂ ಬಿಜೆಪಿಯಲ್ಲ; ಬದಲಾಗಿ ಬಿ.ಎಸ್.ಯಡಿಯೂರಪ್ಪ ಮತ್ತು 'ಗಣಿ ಸಂಸ್ಕೃತಿ'. ಮಾತ್ರ ಹಾಗೂ ಇಲ್ಲಿ ಅರಳಿರುವುದು ಕೇವಲ ಕಮಲವಲ್ಲ; ಯಡಿಯೂರಪ್ಪ ಅವರ ಮುಖ ಮಾತ್ರ. ಏಕೆಂದರೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯು ರಾಜ್ಯದ 'ಜನತೆ'ಗೆ 'ಪರಿಹಾರ'ವಾಗಿ ಬಿಜೆಪಿಗಿಂತಲೂ ದೊಡ್ಡದಾಗಿ ತೋರಿಸಿದ್ದು ಯಡಿಯೂರಪ್ಪ ಅವರ ಮುಖವನ್ನು ಮಾತ್ರ! ಹೀಗಾಗಿ ಪ್ರಸ್ತುತ ಫಲಿತಾಂಶವನ್ನು ಅರ್ಥ ಮಾಡಿಕೊಳ್ಳಲು ವಿಶೇಷ ಬುದ್ಧಿವಂತಿಕೆಯೇನೂ ಬೇಕಾಗುವುದಿಲ್ಲ.

ಈ ಚುನಾವಣೆಯಲ್ಲಿ ಶ್ಯಾಮಪ್ರಸಾದ್ ಮುಖರ್ಜಿ, ದೀನದಯಾಳ್ ಉಪಾಧ್ಯಾಯ, ಜಗನ್ನಾಥರಾವ್ ಜೋಷಿ ಮೊದಲಾದವರ ನೆನಪಿನ 'ಬಿಜೆಪಿ ಸಂಸ್ಕೃತಿ' ಹೇಳಹೆಸರಿಲ್ಲದಂತೆ ಕಣ್ಮರೆಯಾಗಿ, 'ಬಳ್ಳಾರಿ ಗಣಿ ಸಂಸ್ಕೃತಿ'ಯೇ ಕಣ್ಣಿಗೆ ರಾಚಿದ್ದು ಗಮನಾರ್ಹ. 'ಗಣಿ ಸಂಸ್ಕೃತಿ'ಗೆ ಈಗಾಗಲೇ ಹಳ್ಳಿಯಿಂದ ದಿಲ್ಲಿಯವರೆಗೆ ಬಿಜೆಪಿಯ ಧುರೀಣರು ಥ್ರಿಲ್ ಆಗಿರುವುದು ಗುಟ್ಟಿನ ವಿಚಾರವೇನಲ್ಲ.

ಇದು ಭವಿಷ್ಯದಲ್ಲಿ ಬಿಜೆಪಿಯು ಸಾಗಬಹುದಾದ ಹಾದಿಯ ಸಂಕೇತವೆಂದೂ ಹೇಳಬಹುದಾಗಿದೆ. ಇನ್ನು ಮುಂದೆ ಸಂಘ ಪರಿವಾರಕ್ಕೆ 'ಗಣಿ ಸಂಸ್ಕೃತಿ'ಯೇ ಆದರ್ಶವಾದರೂ, ಗಣಿಧಣಿಗಳೇ ಆರಾಧ್ಯ ದೈವವಾದರೂ ಅಚ್ಚರಿಪಡಬೇಕಾಗಿಲ್ಲ.

– ಆರ್.ಎಸ್.ಅಯ್ಯರ್

ತುಮಕೂರು


ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ - ಪ್ರತಿಭಟನೆ

14 ವರ್ಷದ ಅಪ್ರಾಪ್ತ ಬಾಲಕಿ ಆಯುಷಾಳ ಮೇಳೆ ಮುತ್ತು ರಾಜ್ ಎಂಬ ವ್ಯಕ್ತಿ ಅತ್ಯಾಚಾರ ಎಸಗಿ ಪರಾರಿಯಾದ ಘಟನೆ ಬೆಂಗಳೂರಿನ ಗಾರ್ವೆಭಾವಿ ಪಾಳ್ಯದ ಲಕ್ಷ್ಮೀ ಬಡಾವಣೆಯಲ್ಲಿ ನಡೆದಿದೆ.

ತಾಯಿ ಸಲ್ಮಾ ಮತ್ತು ಆಯುಷಾ ಇಬ್ಬರೇ. ಹೊಟ್ಟೆ ಪಾಡಿಗಾಗಿ ದೂರದ ಗುಲ್ಬರ್ಗಾದಿಂದ ಬೆಂಗಳೂರು ಸೇರಿದವರು. ಗಾರ್ಮೆಂಟ್ಸ್ ಕಾರ್ಖಾನೆ ಯೊಂದರಲ್ಲಿ 1,500 ರೂಪಾಯಿ ತಿಂಗಳ ಸಂಬಳಕ್ಕೆ ಜೀವನ ನಡೆಸುತ್ತಿದ್ದ ಕಡುಬಡತನದ ಮುಸ್ಲಿಂ ಅಲ್ಪಸಂಖ್ಯಾತ ಕುಟುಂಬ.

ಮಗಳನ್ನು ಓದಿಸಲಿಕ್ಕೆ ಆಗದ ಬಡ ಜೀವ ಅಲ್ಲೇ ಮನೆಯ ಪಕ್ಕದ ದಿನಸಿ ಅಂಗಡಿಯಲ್ಲಿ ತಿಂಗಳಿಗೆ 400 ರೂಪಾಯಿ ಸಂಬಳದ ಕೆಲಸಕ್ಕೆ ಸೇರಿಸಿದ್ದಳು. ತಾಯಿ ಸಲ್ಮಾ. 4-5 ತಿಂಗಳಿಂದ ಕೆಲಸ ಮಾಡುತ್ತಿದ್ದ ಆಯುಷಾಳ ಮೇಲೆ ಮೇ 8 ನೇ ತಾರೀಖು ಕೆಲಸದ ವೇಳೆಯಲ್ಲಿ ಅಂಗಡಿ ಮಾಲೀಕ ಮುತ್ತುರಾಜ್ ಬರ್ಬರವಾಗಿ ಅತ್ಯಾಚಾರ ನಡೆಸಿ ವಿಷಯ ಬಾಯಿ ಬಿಟ್ಟರೆ ನಿನ್ನನ್ನು ಮತ್ತು ನಿನ್ನ ತಾಯಿಯನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಮನೆಗೆ ಕಳುಹಿಸಿದ್ದಾನೆ. ಮಗಳ ಮೌನ ಕಂಡು ವಿಚಾರಿಸಿದ ಮೇಲೆ ವಿಷಯ ಬಯಲಾಯಿತು. ಕೊನೆಗೆ ಮೇ 14 ರಂದು ಹತ್ತಿರ 'ಎಲೆಕ್ಟ್ಯಾನಿಕ್ ಸಿಟಿ' ಪೋಲೀಸ್ ಠಾಣೆಯಲ್ಲಿ ಬಡಾವಣೆಯ


ಜನವಾದಿ ಮಹಿಳಾ ಸಂಘಟನೆಯ ಪ್ರತಿಭಟನೆ


ಅತ್ಯಾಚಾರಿ ಘುತ್ತುರಾಜ್

ಮಹಿಳೆಯರೊಂದಿಗೆ ದೂರು ದಾಖಲು ಮಾಡಿದ್ದಾರೆ. 15 ದಿನ ಕಳೆದರೂ ಕೂಡ ಚುನಾವಣೆಯ ನೆಪವೊಡ್ಡಿ ಆರೋಪಿಯನ್ನು ಬಂಧಿಸದೆ ಆರೋಪಿ ಪರ ಪುಡಾರಿಗಳು ಕೊಟ್ಟ ಪುಡಿಕಾಸಿಗೆ ನೆಪವೊಡ್ಡುತ್ತಿದ್ದುದು ಗೊತ್ತಾದಾಗ ಜನವಾದಿ ಮಹಿಳಾ ಸಂಘಟನೆ ಹಾಗೂ ಡಿವೈಎಫ್ಐ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆಗೆ ಕರೆ.

ಮೇ 24 ಎಲೆಕ್ಟ್ಯಾನಿಕ್ ಸಿಟಿ ಪೊಲೀಸ್ ಠಾಣೆಯ ಎದುರು ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಕಾರ್ಯಕರ್ತರು ಪ್ರತಿಭಟನೆ ನಡೆಸಲಾಗಿ, ಮಧ್ಯ ಪ್ರವೇಶಿಸಿದ ಪೊಲೀಸರು ಆರೋಪಿಯನ್ನು ಬಂಧಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಲಾಯಿತು. ಪ್ರತಿಭಟನೆಗೆ ಜನವಾದಿಯ ಮುಖಂಡರಾದ ಕೆ.ಎಸ್.ಲಕ್ಷ್ಮಿ, ಗೌರಮ್ಮ, ಶಾರದ, ಶ್ರೀಮತಿ, ರಜಿಯಾ, ಶ್ಯಾಮಲ ಡಿವೈಎಫ್ಐನ ಲಿಂಗರಾಜು, ಜಗದೀಶ್, ಐಯ್ಯರ್‌ದೊರೆ ಮುಂತಾದವರು ಭಾಗವಹಿಸಿದ್ದರು. ಪ್ರತಿಭಟನೆ ಮುಗಿದ 2 ದಿನಗಳ ಬಳಿಕ ಆರೋಪಿಯನ್ನು ಬಂಧಿಸಲಾಗಿದೆ. ಇದು ಪ್ರತಿಭಟನೆಗೆ ಸಂದ ಜಯವಾಗಿದೆ.

■ ಲಿಂಗರಾಜು

ಒಂಟಿ ಮಹಿಳೆಯರ ಕೊಲೆ ಖಂಡಿಸಿ ಪ್ರತಿಭಟನೆ

ಬೆಂಗಳೂರು ನಗರ ಬೆಳೆದಂತೆಲ್ಲಾ ಜನತೆಯ ಅಭದ್ರತೆಯು ಹೆಚ್ಚುತ್ತಿದೆ. ಇತ್ತೀಚೆಗೆ ನಡೆದ ಕೆ.ನಾರಾಯಣಪುರದ ನಿವಾಸಿ ಶ್ರೀಮತಿ ರೇಖಾರವರ ಕೊಲೆ ಪ್ರಕರಣ ರಾಜ್ಯದ ಜನತೆಯನ್ನು ಆತಂಕಕ್ಕೀ ಈಡು ಮಾಡಿದೆ.

ಕಳೆದ ಡಿಸೆಂಬರ್ 2 ರಿಂದೀಚೆಗೆ


ಕೆ.ಆರ್.ಪುರಂನಲ್ಲಿ ಪ್ರತಿಭಟನೆ

ಬೆಂಗಳೂರಿನಲ್ಲಿ 7ನೇ ಪ್ರಕರಣ ಇದಾಗಿದ್ದು ನಗರದಲ್ಲಿ ವ್ಯವಸ್ಥಿತ ಜಾಲವೊಂದು ಒಂಟಿ ಮಹಿಳೆಯರನ್ನು ಕೇಂದ್ರೀಕರಿಸಿ ದರೋಡೆ, ಹಲ್ಲೆ, ಅತ್ಯಾಚಾರ ಮತ್ತು ಕೊಲೆಗಳನ್ನು ನಡೆಸುತ್ತಿರುವುದು ಸಿಲಿಕಾನ್ ಸಿಟಿಯ ಅಭದ್ರತೆಗೆ ಹಿಡಿದ ಕೈಗನ್ನಡಿಯಂತಾಗಿದೆ.

ಇಳಿವಯಸ್ಸಿನ ವೃದ್ಧರು, ಒಂಟಿ ವಿಧವೆಯರು ಮತ್ತು ಒಂಟಿ ಮಹಿಳೆಯರ ಕೊಲೆಯಂತಹ ಪ್ರಕರಣಗಳು ಮೇಲಿಂದ ಮೇಲೆ ಮರುಕಳಿಸುತ್ತಿದ್ದರೂ, ಸರ್ಕಾರವಾಗಲಿ/ ಪೊಲೀಸ್ ಇಲಾಖೆಯಾಗಲಿ/ದೃಢ ಕ್ರಮಗಳನ್ನು ಕೈಗೊಳ್ಳದೆ, ಇರುವುದು ಅಪರಾಧೀಕರಣವನ್ನು ಮತ್ತಷ್ಟು ಬಲಪಡಿಸಿದೆ ಎಂದರೆ ತಪ್ಪಾಗಲಾರದು.

14ನೇ ಮೇ 08ರಂದು ಪತ್ರಿಕೆಗಳಲ್ಲಿ ಹೆಣ್ಣೂರು ಪೊಲೀಸ್ ಠಾಣೆ ವ್ಯಾಪ್ತಿಯ ಕೆ.ನಾರಾಯಣಪುರದ ನಿವಾಸಿ (ಶ್ರೀಮತಿ ರೇಖಾ, ವಯಸ್ಸು 28) ಕೊಲೆ ಪ್ರಕರಣ ಕಂಡು ದಿಗ್ಭ್ರಮೆಯಾಯಿತು. ಜನವಾದಿಯ ಮುಖಂಡರಾದ ಗೌರಮ್ಮ ಮತ್ತು ಸ್ಥಳೀಯ ಮುಖಂಡರಾದ ನಂಜೇಗೌಡ ಆ ಪ್ರದೇಶಕ್ಕೆ ಹೋದಾಗ, ಅವರ ಮನೆಯವರ ಹತ್ತಿರ ಮಾತನಾಡಿದಾಗ ಕಂಡುಬಂದ ವಿವರಗಳಿವು. 8 ವರ್ಷದ ಮಗ, ಗಂಡ, ಎಜಿಎಸ್ ಕಛೇರಿಯಲ್ಲಿ ಕಾರಿನ ಚಾಲಕ. ಸ್ವಂತ 3 ಅಂತಸ್ತಿನ ಕಟ್ಟಡ, ಧೈರ್ಯವಂತ, ಹೆಣ್ಣು ಮಗಳು. ಯಾವ ವಿಚಾರದಲ್ಲಿಯಾದರು ಧೃತಿಗೆಡದೆ ಎದುರಿಸುವ ಎದೆಗಾರಿಕೆಯಿರುವವಳು ಮತ್ತು ಯಾರು ಬಂದು ಬಾಗಿಲು ಬಡಿದರೂ ತೆಗೆಯದವಳು. 14 ರಂದು ಸುಮಾರು 12 ಗಂಟೆ ಸಮಯದಲ್ಲಿ ಆಕೆ ಭೀಕರವಾಗಿ ಕೊಲೆಯಾಗಿದ್ದಾಳೆ. ಈ ಕೊಲೆ ಪ್ರಕರಣ ಸುತ್ತಮುತ್ತಲಿನ ಹೆಣ್ಣು ಮಕ್ಕಳನ್ನು ಆತಂಕಕ್ಕೀಡು ಮಾಡಿತು. ತಕ್ಷಣ ಜನವಾದಿಯ ಪೂರ್ವ ವಲಯ ಸಮಿತಿಯಲ್ಲಿ ಚರ್ಚಿಸಿ ರೇಖಾ ಕೊಲೆಗೈದ ಆರೋಪಿಯನ್ನು ಬಂಧಿಸಬೇಕೆಂದು ಒತ್ತಾಯಿಸಿ ಕರಪತ್ರ ಮುದ್ರಿಸಿ, 17ನೇ ಮೇ 08 ರಂದು ಹೆಣ್ಣೂರು ಪೊಲೀಸ್ ಠಾಣೆಯ ಎದುರು ಪ್ರತಿಭಟನೆಗೆ ಕರೆ ಕೊಡಲಾಯಿತು. ಸಾಕಪ್ಪ ಹೆಣ್ಣು ಮಕ್ಕಳು ತಾವು ಕಟ್ಟಿಕೊಂಡಿರುವ ಸ್ವಂತ ಮನೆಯನ್ನು ಮಾರಿ ಬೇರೆ ಎಲ್ಲಾದರೂ ಹೋಗೋಣ ಅಂತ ರೇಖಾಳ ಆತ್ಮೀಯ ಗೆಳತಿ ಹೇಮಾ ನೊಂದು ನುಡಿಯುತ್ತಿದ್ದರು. 17ರಂದು ಸುಮಾರು 100 ಜನ ಮಹಿಳೆಯರು ಪೂರ್ವ ವಲಯ ಸಮಿತಿ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಪೊಲೀಸ್ ಆಯುಕ್ತರಿಗೆ ಮನವಿಯನ್ನು ಸಲ್ಲಿಸಲಾಯಿತು. ಪ್ರತಿಭಟನೆಯ ನಂತರ ಹೆದರಿದವರಿಗೆ ಸ್ವಲ್ಪ ಧೈರ್ಯ ಬಂದಂತಾಗಿದೆ.

ಈ ಕಾರ್ಯಕ್ರಮದ ನೇತೃತ್ವದ ಜಿಲ್ಲಾ ಮುಖಂಡರಾದ ಗೌರಮ್ಮ, ಕೆ.ಮಂಜುಳ ವಹಿಸಿದ್ದರು. ಜಿಲ್ಲಾ ಮುಖಂಡರಾದ ಶಾರದ, ಯಶೋಧ, ಸುನಂದ ಮತ್ತು ಕಾರ್ಮಿಕ ಮುಖಂಡರಾದ ಗೋಪಾಲಗೌಡ, ನಂಜೇಗೌಡ, ಮುನಿರಾಜ್, ಬೆಂಬಲ ಸೂಚಿಸಿ ಮಾತನಾಡಿದರು. ವಲಯ ಸಮಿತಿಯ ಗಾಯಿತ್ರಿ, ನಿರ್ಮಲ, ಜಯಲಕ್ಷ್ಮಿ, ಅನುಸೂಯ, ಮುಮ್ತಾಜ್ ಸಹ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಂಪುಟ ಮತ್ತು.....

ಪುಟ 3 ರಿಂದ

ರಾಜ್ಯದಲ್ಲಿ ಅವುಗಳ ಪಾತ್ರ ಮುಂದೆ ಏನಿರುತ್ತದೆ ಎಂಬುದನ್ನು ಸ್ಪಷ್ಟ ತೋರಿಸುತ್ತದೆ. ಸರ್ಕಾರಕ್ಕೂ, ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವುದರಿಂದ ಬೇರೇನು ನಿರೀಕ್ಷಿಸಲಾದೀತು? ಗಣಿ ಹಣದ ಜನಾರ್ಧನ ರೆಡ್ಡಿ ಉಪಮುಖ್ಯಮಂತ್ರಿ ಸ್ಥಾನ, ಗೃಹ ಖಾತೆ, ಅರಣ್ಯ ಖಾತೆಗೆ ಪಟ್ಟು ಹಿಡಿದಿದ್ದು ಇದರಲ್ಲಿ ಏನನ್ನಾದರೂ ಹೊಡೆದುಕೊಳ್ಳಬಹುದು ಎಂಬ ಲೆಕ್ಕಾಚಾರದಲ್ಲಿಯೇ!


ಬೀದಿಗಿಳಿದ ಅತೃಪ್ತಿ

ಇಂತಹ ಮಂತ್ರಿ ಮಂಡಳದಲ್ಲಿ ತಮಗೆ ಸ್ಥಾನ ಸಿಗಲಿಲ್ಲವೆಂದು ಹಿರಿಯ ಶಾಸಕ, ನಾಯಕರೆ ಸಿಡಿದೆದ್ದಿದ್ದಾರೆ. ಆಕ್ರೋಶ ಬೀದಿಗೆ ಬಿದ್ದಿದೆ. ಹಿಂದೆ ಕಂದಾಯ ಸಚಿವರಾಗಿದ್ದ ಜಗದೀಶ್ ಶೆಟ್ಟರ್ ನಾಲ್ಕನೇ ಬಾರಿಗೆ ಶಾಸಕನಾಗಿ, ಆರು ಜನರ ಗೆಲುವಿಗೆ ಕಾರಣವಾಗಿದ್ದರೂ ಸಚಿವನನ್ನು ಮಾಡಲಿಲ್ಲ ಎಂದು ಮುನಿದಿದ್ದಾರೆ. ಅವರ ಬೆಂಬಲಿಗರು ಸರ್ಕಾರಿ ಬಸ್‌ಗಳಿಗೆ ಕಲ್ಲು ಹೊಡೆದು, ಬೆಂಕಿ ಹಚ್ಚಿ ಪ್ರತಿಭಟಿಸಿದ್ದಾರೆ. ವಿವಿಧ ಸ್ಥಾನಗಳಿಗೆ ರಾಜಿನಾಮೆ ಸಲ್ಲಿಸುವುದಾಗಿ ಪ್ರಕಟಿಸಿದ್ದಾರೆ. ಯಾರೊಂದಿಗೂ ಸೇಡುತೀರಿಸಿಕೊಳ್ಳುವ ಮನೋಭಾವ ತಮ್ಮದಲ್ಲ ಎಂದು ಯಡಿಯೂರಪ್ಪ ಹೇಳಿದ್ದರೂ ಜಗದೀಶ್ ಶೆಟ್ಟರ್ ತಮಗೆ ಸ್ಪರ್ಧಿಯೆಂದೇ ಭಾವಿಸಿ ಅವರನ್ನು ಕಡೆಗಣಿಸಲಾಗುತ್ತಿದೆ ಎಂಬ ವರದಿಗಳು ಬಹಿರಂಗಗೊಂಡಿವೆ. ಶೆಟ್ಟರು ಅನಂತಕುಮಾರರ ಬೆಂಬಲಿಗರೆಂದೂ ಮೇಲಾಗಿ ಉತ್ತರ ಕರ್ನಾಟಕದ ಲಿಂಗಾಯತರೂ ಆಗಿರುವುದು ಅವರು ಸ್ಪರ್ಧಾಳುವಿನಂತೆ ಯಡಿಯೂರಪ್ಪನವರಿಗೆ ಕಂಡಿದೆ (ಏನಿದ್ದರೂ ಒಬ್ಬ ಲಿಂಗಾಯತ ಸಾಕಲ್ಲವೇ?) ಹೀಗಾಗಿ ಅವರನ್ನು ಸೋಲಿಸಲು ಕಾಂಗ್ರೆಸ್‌ನವರಿಗೆ ಹಣ ನೀಡಲಾಗಿತ್ತು ಎಂದೂ ದೂಷಿಸಿದ್ದಾರೆ ಶೆಟ್ಟರ ಬೆಂಬಲಿಗರು. ಇದು ಸಿ.ಎಂ.ರವರ ಉದಾರಗುಣವೆಂದು ಭಾವಿಸಬೇಕೆಂದು ಒತ್ತಾಯಿಸಿದ್ದಾರಷ್ಟೇ.

ಅದೇ ರೀತಿ ಇನ್ನೊಬ್ಬ ಹಿರಿಯ ಶಾಸಕ ಶಂಕರಲಿಂಗೇಗೌಡರು 'ತಾನು ಭೂಗಳ್ಳನಲ್ಲ, ಗಣಿ ಮಾಲೀಕನೂ ಅಲ್ಲ, ರಾಜ್ಯವನ್ನು ಲೂಟಿ ಹೊಡೆದಿಲ್ಲ, ಗಾಂಜಾ ಮಾಫಿಯಾ ಅಲ್ಲ, ಆದಕ್ಕೆ ಸಚಿವ ಸ್ಥಾನ ಸಿಕ್ಕಿಲ್ಲ' ಎಂದು ಅರ್ಭಟಿಸಿದ್ದಾರೆ. ಆನೇಕಲ್ ಶಾಸಕ ನಾರಾಯಣಸ್ವಾಮಿ ಬಂಡಾಯ ಹೂಡಿದ್ದು, ಬೆಂಬಲಿಗರು ಬಸ್ ದಹನಕಾಂಡ ನಡೆಸಿ ಪ್ರತಿಭಟಿಸಿದ್ದಾರೆ. ಇಂತಹ ಧ್ವನಿಗಳು ಅಲ್ಲಲ್ಲಿ ಮತ್ತೂ ಕೇಳಿಬರುತ್ತಿವೆ. ಆದರೆ ಕೆಲವು ಆಕಾಂಕ್ಷಿಗಳು ಇನ್ನುಳಿದ ಮೂರು ಸ್ಥಾನಗಳಲ್ಲಿ ತಮಗೆ ಸಿಗಬಹುದೇನೋ ಎಂದು ನಾಯಕರನ್ನು ಕೆರಳಿಸದೇ ನಿಂತಿದ್ದಾರೆ. ಇಂತಹ ಬೀದಿರಂಪಾಟ ಇತರೆ ಪಕ್ಷಗಳಿಗಿಂತ ಬಿಜೆಪಿಯಲ್ಲೇ ಅತಿ ಹೆಚ್ಚು ಎಂಬುದು ಮತ್ತು ಸುಡುವ, ಬಡಿವ ಹಾದಿ ಹಿಡಿದಿರುವುದು ಬಿಜೆಪಿಯೊಳಗೆ ಹೆಚ್ಚಿರುವ ಅಧಿಕಾರ ದಾಹದ ದ್ಯೋತಕವಾಗಿದೆ. ನೀತಿಬದ್ಧ ಪಕ್ಷವೆಂದು ಸಾರಿಕೊಳ್ಳುವ ಬಿಜೆಪಿಯ ನಿಜ ಮುಖವನ್ನು ಈ ಘಟನೆಗಳು ಮತ್ತೊಮ್ಮೆ ತೋರಿಸಿವೆ. ಇಂತಹ ಬಂಡಾಯಗಳು ಮುಂದಿನ ದಿನಗಳಲ್ಲಿ ಪುನರಾವರ್ತನೆಯಾಗದೇ ಹೋಗಲಿಕ್ಕಿಲ್ಲ.

ಪ್ರಮಾಣ ವಚನದ ಬಳಿಕ ಸೇರಿದ್ದ ಸಂಪುಟ ಸಭೆಯ ಚರ್ಚೆಗಳನ್ನು ಹೊರಗೆಡಹಿದ ಯಡಿಯೂರಪ್ಪನವರು ಬಿಜೆಪಿ ಪ್ರಣಾಳಿಕೆ 'ಸಂಕಲ್ಪ' ಜಾರಿಗೊಳಿಸುವುದಾಗಿ ಹೇಳಿದ್ದಾರೆ. ರೈತರನ್ನು ಉದ್ಧರಿಸುವ ಮಾತೂ ಆಡಿದ್ದಾರೆ. ಆದರೆ ಬರಿ ಮಾತಾಗಲಿ, ಹಸಿರು ಶಾಲು ಹೊದ್ದಾಗಲೀ ಅಥವಾ ರೈತರ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದರಿಂದಾಗಲೀ ಸದ್ಯದ ಸನ್ನಿವೇಶವನ್ನು ಎದುರಿಸಲು ಸಾಕಾಗದು. ಮುಂದಿನ ಬೆಳವಣಿಗೆಗಳು ಬಿಜೆಪಿಯು ಸೃಷ್ಟಿಸಿರುವ ಬಣ್ಣದ ಬಲೂನನ್ನು ಹರಿದೊಗೆಯುವುದರಲ್ಲಿ ಅನುಮಾನವಿಲ್ಲ.

ಆಂಧ್ರ ನೆರೆಹೊರೆ:



ಸಿಪಿಐ(ಎಂ) ಅಭ್ಯರ್ಥಿಯ ಮೇಲೆ ಪೊಲೀಸ್‌ರ ಹಲ್ಲೆ

: ಮೇ 29 ರಂದು ಆಂಧ್ರ ಪ್ರದೇಶದಲ್ಲಿ ಹದಿನಾರು ವಿಧಾನಸಭಾ ಸ್ಥಾನಗಳಿಗೆ ನಾಲ್ಕು ಲೋಕಸಭಾ ಸ್ಥಾನಗಳಿಗೆ ಉಪಚುನಾವಣೆ ನಡೆಯಿತು. ಇದರಲ್ಲಿ ಮುಷೀರಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತದಾರರಿಗೆ ಹಣ ಹಂಚುತ್ತಿದ್ದನ್ನು ತಡೆಯಲು ಒತ್ತಾಯಿಸಿದ ಸಿಪಿಐ(ಎಂ) ಅಭ್ಯರ್ಥಿ, ಸಂಸದರು ಹಾಗೂ ಮುಖಂಡರ ಮೇಲೆ ನೇರವಾಗಿ ಕಾಂಗ್ರೆಸ್ ಪಕ್ಷದ ಮುಖಂಡರು, ಮಂತ್ರಿಯೇ ದೈಹಿಕ ಹಲ್ಲೆ ಮಾಡುತ್ತಾರೆಂದರೆ..... ಕಾಂಗ್ರೆಸ್ ಪಕ್ಷದ ಸಂಸ್ಕೃತಿ ಏನೆಂದು ಅರ್ಥಮಾಡಿಕೊಳ್ಳಬಹುದು.

ಹಣ ಹಂಚಿದ್ದಲ್ಲದೇ ಹಲ್ಲೆಯನ್ನೂ ಮಾಡಿದರು

ಸಿಪಿಎಂ ಪಕ್ಷದ ಕಾರ್ಯಕರ್ತರು ಮಾಡಿದ ತಪ್ಪೇನು ಗೊತ್ತೆ? ಉಪ ಚುನಾವಣೆಯಲ್ಲಿ ಮತದಾರರಿಗೆ ಹಣ ಹಂಚುವುದನ್ನು ತಡೆದಿದ್ದು, ಇದಕ್ಕೆ ಪ್ರತೀಕಾರ ಕಾಂಗ್ರೆಸ್ ಮಂತ್ರಿ ಮುಖೇಶ್ ಗೌಡ ಸಿಪಿಐ(ಎಂ) ಸಂಸದ ಮಧು ಅವರನ್ನು ಹಿಗ್ಗಾಮುಗ್ಗ ತಳಿಸಿದ್ದಾನೆ. ಕಾಂಗ್ರೆಸ್ ಕಾರ್ಯಕರ್ತರು ಸಿಪಿಎಂ ಕಾರ್ಯಕರ್ತರಿಗೆ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಈ ಘಟನೆ ನಡೆದದ್ದು ಪೋಲಿಸರ ಸಮಕ್ಷಮದಲ್ಲಿ, ಗುರುವಾರ ನಡೆದ ಆಂಧ್ರಪ್ರದೇಶದ ಮುಷೀರಾಬಾದ್ ಉಪಚುನಾವಣೆಯಲ್ಲಿ.

ಆಂಧ್ರಪ್ರದೇಶದಲ್ಲಿ ಸಿಪಿಎಂ ಪಕ್ಷ ದಿನೇ ದಿನೇ ಬಲಿಷ್ಠವಾಗುತ್ತಿರುವುದನ್ನು ತಡೆಯಲು ಅಲ್ಲಿನ ಎಲ್ಲ ಬಂಡವಾಳಶಾಹಿ ಪಕ್ಷಗಳು ನಿರ್ಧರಿಸಿವೆ. ಇದೊಂದು ಅಘೋಷಿತ ಕಾರ್ಯಸೂಚಿ. ಅಲ್ಲಿನ ಅಧಿಕಾರಿಗಳು, ರಾಜಕಾರಣಿಗಳು, ಭೂ ಮಾಲೀಕರು ಮತ್ತು ಬಂಡವಾಳಶಾಹಿಗಳು ಬೆಂಬಲವಾಗಿ ನಿಂತಿದ್ದಾರೆ. ಈ ಉಪ ಚುನಾವಣೆ ಕಾಂಗ್ರೆಸ್ ಮಂತ್ರಿ ಮುಖೇಶ್‌ಗೆ ಪ್ರತಿಷ್ಠೆಯ ಕಣವಾಗಿದೆ. ಕಾಂಗ್ರೆಸ್ ಪಕ್ಷ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಎಂತಹದೇ ಕೃತ್ಯಗಳಿಗೆ ಪಣತೊಟ್ಟು ನಿಂತಿದೆ. ಇಲ್ಲಿನ ವಸತಿ ಸಮುಚ್ಚಯದಲ್ಲಿ ಮತ ಹಾಕಲು ಮನವೊಲಿಸಲು ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹಣ ನೀಡುತ್ತಿದ್ದರು ಎಂಬ ಸುದ್ದಿ ತೆಲುಗು ದೇಶಂ ಪಕ್ಷದ ಮುಖಂಡರು ಸಿಪಿಎಂ ಅಭ್ಯರ್ಥಿ ವೀರಯ್ಯರವರಿಗೆ ತಿಳಿಸಿದರು. ಅವರು ವಿಡಿಯೋ ಕ್ಯಾಮೆರಾದೊಂದಿಗೆ ಅಲ್ಲಿಗೆ ತೆರಳಿದರು. ಹಣ ಪಡೆದಿದ್ದ ಮಹಿಳೆಯರನ್ನು ಮಾತನಾಡಿಸುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಟಿಡಿಪಿ ಮುಖಂಡ ಜಯಂದರ್ ಬಾಬು ಮೇಲೆ ದಾಳಿ ನಡೆಸಿದರು. ಹಣ ಹಂಚಿದವರನ್ನು ಕೂಡಲೇ ಬಂಧಿಸಬೇಕೆಂದು ಟಿಡಿಪಿ ಮತ್ತು ಸಿಪಿಎಂ ಕಾರ್ಯಕರ್ತರು ಅಲ್ಲೇ ಪ್ರತಿಭಟನೆ ಆರಂಭಿಸಿದರು.

ಈ ಎಲ್ಲ ಬೆಳವಣಿಗೆಗಳು ಟಿವಿಗಳಲ್ಲಿ ಸೆರೆಹಿಡಿಯುತ್ತಿದ್ದಂತೆ ಸಿಪಿಎಂ ಕಾರ್ಯಕರ್ತರನ್ನು ಚದುರಿಸಲು ಪೋಲೀಸರು ಲಾಠಿ ಚಾರ್ಜ್ ಮಾಡಿದರು. ಅಭ್ಯರ್ಥಿ ವೀರಯ್ಯ ಮತ್ತು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವೆಂಕಟ್ ಸಹ ಈ ಲಾಠಿ ಚಾರ್ಜ್‌ನಲ್ಲಿ ಗಾಯಗೊಂಡರು. ಅದೇ ಸಂದರ್ಭಕ್ಕೆ ಅಲ್ಲಿಗೆ ಪಕ್ಷದ ಸಂಸದರಾದ ಮಧು ಆಗಮಿಸಿದರು. ಹಣ ಹಂಚಿದ ಕಾಂಗ್ರೆಸ್ ನಾಯಕರನ್ನು ಬಂಧಿಸಬೇಕೆಂದು ಒತ್ತಾಯಿಸಿದರು. ಇದೇ ಸಂದರ್ಭಕ್ಕೆ ಕಾಂಗ್ರೆಸ್ ನಾಯಕ ದಾನಂ ನಾಗೇಂದರ್ ಅಲ್ಲಿಗೆ ಆಗಮಿಸುತ್ತಿದ್ದಂತೆ ಪರಿಸ್ಥಿತಿಯೇ ಬದಲಾಯಿತು.




ಹಣ ಹಂಚಿದ್ದಕ್ಕೆ ಸಾಕ್ಷಿ

ಪೋಲೀಸರು ಸಿಪಿಎಂ ಮತ್ತು ಟಿಡಿಪಿ ನಾಯಕರ ಮೇಲೆ ಹಲ್ಲೆಗೆ ಮುಂದಾದರು. ಅದೇ ಸಂದರ್ಭಕ್ಕೆ ಕಾಂಗ್ರೆಸ್ ಸಚಿವ ಮುಖೇಶ್ ಗೌಡ ಅಲ್ಲಿಗೆ ಆಗಮಿಸುತ್ತಿದ್ದಂತೆ ಪರಿಸ್ಥಿತಿ ಕೈ ಮೀರಿತು.

ಮಂತ್ರಿ ಗೂಂಡಾಗಿರಿ: ಮಧು ಅವರನ್ನು ಕೆಂಗಣ್ಣಿನಿಂದ ನೋಡಿದ ಮುಖೇಶ್ ತನ್ನ ಸಹಚರರೊಂದಿಗೆ ಹಲ್ಲೆ ಮಾಡಿದರು. ಸಿಪಿಎಂ ಕಾರ್ಯಕರ್ತರನ್ನು ಹೊಡೆದರು. ತಾನು ಸಂಸದ ಎಂಬುದನ್ನೇ ಮರೆತ ಸಿಕಂದ್ರಬಾದ್ ಕಾಂಗ್ರೆಸ್ ಸಂಸದ ಅಂಜನ್‌ಕುಮಾರ್-ಮಧು ಅವರು ಸಹ ಒಬ್ಬ ಸಂಸದ ಎಂಬುದನ್ನು ಮರೆತು ದಾಳಿ ನಡೆಸಿದರು. ಈ ಘಟನೆಯಲ್ಲಿ ಆಂಧ್ರ ಪೋಲೀಸರು ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣ ಬೆಂಬಲವಾಗಿ ನಿಂತಿದ್ದರು. ಹಣ ಹಂಚುತ್ತಿದ್ದ ವಸತಿ ಸಮುಚ್ಚಯದ ಬಳಿಯೇ ಪೋಲೀಸರು ಸೂಕ್ತ ಕ್ರಮ ಕೈಗೊಂಡಿದ್ದರೆ ಈ ಎಲ್ಲ ಘಟನೆಗಳನ್ನು ನಿಯಂತ್ರಿಸಬಹುದಾಗಿತ್ತು. ಆದರೆ ಅವರ ಬೇಜವಾಬ್ದಾರಿತನವೇ ಇದಕ್ಕೆ ಪ್ರಮುಖ ಕಾರಣವಾಗಿದೆ. ○



ಸಿಪಿಐ(ಎಂ) ಸಂಸದ ಮಧು ಅವರ ಮೇಲೆ ಹಲ್ಲೆ ಮಾಡಿದ ಕಾಂಗ್ರೆಸ್ ಮಂತ್ರಿ ಮುಖೇಷ್ ಗೌಡ



ಕಾರ್ಮೋಡಗಳ ನಡುವೆ ಇಲ್ಲೊಂದು ಬೆಳಕಿನ ಕಿರಣ


ಕರ್ನಾಟಕದಲ್ಲಿ ಹೊಸತೊಂದು ಸರಕಾರ ಅಸ್ತಿತ್ವಕ್ಕೆ ಬಂದಿದೆ. ಹೊಸದೆಂದರೆ ಹೊಸದೆ. ಇಂಥ ಸರ್ಕಾರವನ್ನು ಹಿಂದೆ ಎಂದೂ ಕರ್ನಾಟಕ ಕಂಡಿಲ್ಲ. ಇತ್ತೀಚೆಗೆ ಇಪ್ಪತ್ತು ತಿಂಗಳು ಇವರು ಸರ್ಕಾರದಲ್ಲಿ ಇದ್ದರೂ ಕೂಡ ಅದು ಮತ್ತೊಬ್ಬರೊಂದಿಗೆ ಕೂಡಿ ಮಾಡಿದ ಸರ್ಕಾರವಾಗಿತ್ತು. ಈಗ ಬಹುತೇಕ ಒಂದೇ ಪಕ್ಷದ ಸರ್ಕಾರ.

ದಕ್ಷಿಣ ಭಾರತದಲ್ಲೇ ಮೊತ್ತಮೊದಲ ಬಾರಿಗೆ ನಮ್ಮ ಸರ್ಕಾರ ಬಂದಿದೆ ಅಂತ ಹಿಗ್ಗೋ ಹಿಗ್ಗು ಹಲವರಿಗೆ. ಬರಿ ಸರ್ಕಾರ ಬಂತು ಅಂತ ಹಿಗ್ಗಿದರೆ ಆಯ್ತೆ. ಜನತೆಗೆ ಏನು ಲಾಭ ಅದರಿಂದ ಅನ್ನೋದಲ್ಲವೇ ಮುಖ್ಯವಾದ ಮಾತು.

ದಕ್ಷಿಣ ಭಾರತದಲ್ಲಿ ಇನ್ನೊಂದು ಸರಕಾರ ಇದೆ. ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ಅದು. ಅಧಿಕಾರಕ್ಕೆ ಬಂದು, ಮೇ 29ಕ್ಕೆ ಎರಡು ವರ್ಷ ತುಂಬಿತು. ಇಂತಹ ಹೊತ್ತಲ್ಲಿ ಆ ಸರಕಾರ ಒಂದು ತೀರ್ಮಾನ ಘೋಷಿಸಿದೆ. ಅದೇನಪ್ಪ ಅಂದರೆ ಇನ್ನು ಮೂರು ವರ್ಷಗಳ ಒಳಗೆ ಕೇರಳದಲ್ಲಿ ಸ್ವಂತ ನಿವೇಶನವಿಲ್ಲದ ಎಲ್ಲ ಕುಟುಂಬಗಳಿಗೆ ಉಚಿತ ನಿವೇಶನ ನೀಡಲು ಸರಕಾರ ನಿರ್ಧರಿಸಿದೆ. ಈ ತತ್‌ಕ್ಷಣದಲ್ಲಿಯೇ 10 ಸಾವಿರ ಕುಟುಂಬಗಳಿಗೆ ನಿವೇಶನ ನೀಡಲು ಸರ್ಕಾರ ಕ್ರಮ ಕೈಗೊಂಡಿದೆ. ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆ ತೀವ್ರಗೊಳಿಸಲು ಸರ್ಕಾರ ಉದ್ದೇಶಿಸಿದೆ. ಆ ಮೂಲಕ ನಿವೇಶನರಹಿತರೇ ಇಲ್ಲದ ಮೊದಲ ರಾಜ್ಯವನ್ನಾಗಿ ಕೇರಳವನ್ನು ರೂಪಿಸಬೇಕೆಂಬುದು ಸರ್ಕಾರದ ಗುರಿ.

ಇದು 1970ರಲ್ಲೇ ಚಾಲನೆ ಕೊಡಲಾಗಿದ್ದ, ಭೂಸುಧಾರಣೆಯ ಮುಂದುವರಿಕೆ ಇದು, ತಾಲ್ಲೂಕು ಭೂನ್ಯಾಯ ಮಂಡಳಿಯಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಭೂ ವಿವಾದಗಳನ್ನು ಆದಷ್ಟು ಬೇಗ ಇತ್ಯರ್ಥಗೊಳಿಸಲು ಸರ್ಕಾರ ಉದ್ದೇಶಿಸಿದೆ. ಈಗಾಗಲೇ ಭೂಗಳ್ಳರಿಂದ ಭಾರಿ ಪ್ರಮಾಣದ ಭೂಮಿಯನ್ನು ಸರ್ಕಾರ ವಶಕ್ಕೆ ತೆಗೆದುಕೊಂಡಿದೆ.

ಕೇರಳದ ಭೂ ಸುಧಾರಣಾ ಕಾನೂನಿನ ಅನ್ವಯ ಭೂಮಿತಿಗಿಂತ ಹೆಚ್ಚು ಭೂಮಿ ಇರುವವರಿಂದ ಹೆಚ್ಚುವರಿ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಭೂಹೀನರಿಗೆ ಹಂಚುವ ಕಾರ್ಯಯೋಜನೆಯೂ ಸರ್ಕಾರದ ಮುಂದಿದೆ.



ಕರ್ನಾಟಕದಲ್ಲಿ ಅಧಿಕಾರ ಹಿಡಿಯುತ್ತೇವೆಂದು ಸ್ಪರ್ದಿಸಿದ -ಜನತೆಗೆ ಬಾರಿ ಭರವಸೆಗಳನ್ನು ನೀಡಿದ ಯಾವ ಪಕ್ಷವೂ, ಯಾವ ಪಕ್ಷದ ಪ್ರಣಾಳಿಕೆಯೂ ಭೂಸುಧಾರಣೆಯ ಬಗೆಗೆ ಮಾತನಾಡಿಲ್ಲ. ಅದು ಅವರ ಅಜೆಂಡಾಗಳಲ್ಲಿ ಇಲ್ಲ.

ರಾಜ್ಯದಲ್ಲಿ ಈಗ ಅಧಿಕಾರಕ್ಕೆ ಬಂದಿರುವ ಸರ್ಕಾರದ ಆದ್ಯತೆ ಏನು. ಭೂಮಿ ಇಲ್ಲದ ಬಡವರಿಗೆ ಭೂಮಿ ಹಂಚುವ ಯೋಜನೆಯೇನಾದರೂ ಸರ್ಕಾರಕ್ಕೆ ಇದೆಯೇ?

ಸದ್ಯ ಭೂಗಳ್ಳರು, ಗಣಿ ಲೂಟಿಕೋರರ ಭೂಮಾಲಿಕರ ಹಿಡಿತದಲ್ಲಿರುವ ಸರ್ಕಾರ ಯಾಕಾರದೂ ಇಂಥ ಹೆಜ್ಜೆ ಇಟ್ಟೀತು. ತನ್ನ ಬುಡವನ್ನು ಸರ್ಕಾರ ತಾನೇ ಕಡಿದುಕೊಂಡಿತೇ? ○

ಮತ್ತೆ ನಮ್ಮ ಮುಂದೆ ಬರುವುದು ಅದೇ ಮೂಲಭೂತ ಆಯ್ಕೆ - ಕಾರ್ಪೊರೇಟ್ ಹಿತವೇ ಅಥವಾ ಜನಗಳ ಕಲ್ಯಾಣವೇ? ಕಾರ್ಪೊರೇಟ್ ಹಿತಗಳೇ ಮುಖ್ಯವಾದರೆ ಬೆಲೆಗಳನ್ನು ಏರಿಸಿ ಮತ್ತು ಅದಕ್ಕೆ ರಾಜಕೀಯ ಬೆಲೆ ತೆರಲು ಸಿದ್ಧವಾಗಿ! ಜನಗಳ ಕಲ್ಯಾಣವೇ ಮುಖ್ಯವಾದರೆ ತೆರಿಗೆಗಳನ್ನು ಪುನರ್‌ರಚಿಸಿ. ಜನಗಳ ಅಸಂತೃಪ್ತಿ ಕೋಮುವಾದಿ ಶಕ್ತಿಗಳಿಗೆ ರಾಜಕೀಯ ಮತ್ತು ಚುನಾವಣಾ ಪ್ರಯೋಜನ ಒದಗಿಸದಂತೆ ತಡೆಯಬೇಕಾದರೆ ಈ ಬಗ್ಗೆ ಸ್ಪಷ್ಟತೆ ಅಗತ್ಯ ಎನ್ನುತ್ತಾರೆ ಸೀತಾರಾಂ ಯೆಚೂರಿ



ಬಿಜೆಪಿ ಗೆಲುವಿಗೆ ಯಾರು ಹೊಣೆ ?

2009 ರಲ್ಲಿ ಹೀಗಾಗದಂತೆ ತಡೆಯುವುದು ಹೇಗೆ?

ಕರ್ನಾಟಕದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ನ ಸೋಲು 2004ರ ಚುನಾವಣೆಗಳ ನಂತರ ಅದರ ಮತ್ತು ಅದರ ಯುಪಿಎ ಸಹಭಾಗಿಗಳ 13ನೇ ಸೋಲು. ನಿಜ, ವಾಜಪೇಯಿಯವರು ಪ್ರಧಾನಿಗಳಿದ್ದಾಗ ಬಿಜೆಪಿ ಮತ್ತು ಎನ್‌ಡಿಎ ಸತತವಾಗಿ 14ಸೋಲುಗಳನ್ನು ಉಂಡವು. ಆದರೆ ಇದರಿಂದಲೇ ಸಮಾಧಾನ ಪಡುವಂತಿಲ್ಲ. ಏಕೆಂದರೆ ಅದರ ಅವುಗಳ ಬೆನ್ನ ಹಿಂದೆಯೇ 2004ರ ಸಾರ್ವತ್ರಿಕ ಚುನಾವಣೆಗಳಲ್ಲಿಯೂ ಅವರು ಸೋತರು. 2009ರ ಸಾರ್ವತ್ರಿಕ ಚುನಾವಣೆಗಳಲ್ಲಿ ಜಾತ್ಯಾತೀತ ಶಕ್ತಿಗಳಿಗೂ ಹೀಗಾಗದಂತೆ ತಡೆಯಲು ಸಾಧ್ಯವಿದೆಯೇ? ಸಾಧ್ಯವಿದೆ ಎನ್ನುತ್ತಾರೆ ಸೀತಾರಾಂ ಯೆಚೂರಿ. ರಾಜಕೀಯ ಟಿಪ್ಪಣಿಕಾರರು ಕರ್ನಾಟಕದಲ್ಲಿ ಬಿಜೆಪಿಯ ವಿಜಯದ ಶವಪರೀಕ್ಷೆ ನಡೆಸಿಯೇ ನಡೆಸಿದ್ದಾರೆ. ಆದರೆ ಬಿಜೆಪಿಯ ಈ ಗೆಲವು ಇದ್ದಕ್ಕಿದ್ದಂತೆ ಬಂದದ್ದು ಎಂದು ಹೇಳುವಂತಿಲ್ಲ. 1994ರಿಂದಲೆ ಅದು ತನ್ನ ಮತಗಳ ಪ್ರಮಾಣವನ್ನು ಹೆಚ್ಚಿಸಿಕೊಂಡೇ ಬಂದಿದೆ-1994ರಲ್ಲಿ 17ಶೇ., 1999ರಲ್ಲಿ 20.69ಶೇ., 2004ರಲ್ಲಿ 28.33ಶೇ. ಮತ್ತು ಈಗ 2008ರಲ್ಲಿ ಸುಮಾರು 34ಶೇ. ಈ ಸತತ ಏರಿಕೆಗೆ ಕಾರಣವಾಗಿರುವ ಅಂಶಗಳು ಹಲವು. ಚಿಕ್ಕಮಗಳೂರಿನ ಬಾಬಾಬುಡಾನ್ ಗಿರಿಯಲ್ಲಿನ ದತ್ತಪೀಠದ ಸುತ್ತ ವಿವಾದ ಎಬ್ಬಿಸಿ ಕೋಮುಧೃವೀಕರಣವನ್ನು ತೀಕ್ಷ್ಣಗೊಳಿಸಲಾಯಿತು. ಇದನ್ನು ಬಿಜೆಪಿ 'ದಕ್ಷಿಣದ ಅಯೋಧ್ಯೆ' ಎಂದು ವರ್ಣಿಸಿತ್ತು. ಹುಬ್ಬಳ್ಳಿಯ ಈದ್‌ಗಾ ಮೈದಾನದ ಬಗ್ಗೆ, ಗೋಲ್ವಾಲ್ಕರ್ ಶತಾಬ್ದಿ ಸಂದರ್ಭದಲ್ಲಿ ರಾಜ್ಯಾದ್ಯಂತ ಕೋಮು ಗಲಭೆಗಳ ಮೂಲಕ ಇದನ್ನು ಕ್ರೋಢೀಕರಿಸಲಾಯಿತು.





ಟ್ವೆಂಟಿ - ಟ್ವೆಂಟಿ

ಇತ್ತೀಚೆಗೆ ರಾಜ್ಯ ಕಂಡ ರಾಜಕೀಯ 20-20 ಆಟ ಬಿಜೆಪಿಗೆ ಈ ಚುನಾವಣೆಗಳಲ್ಲಿ ಪ್ರಯೋಜನ ಕೊಟ್ಟಿದೆ. ಕಾಂಗ್ರೆಸ್ ನೇತೃತ್ವದ ಜನತಾದಳ(ಜಾತ್ಯಾತೀತ) ಬೆಂಬಲಿತ 20ತಿಂಗಳ ಸರಕಾರದ ನಂತರ ಬಿಜೆಪಿ ಬೆಂಬಲಿತ ಜೆಡಿ(ಎಸ್) ನೇತೃತ್ವದ ಸರಕಾರ; ಅದರ ನಂತರ ಜೆಡಿ(ಎಸ್) ಬೆಂಬಲಿತ ಬಿಜೆಪಿ ನೇತೃತ್ವದ ಸರಕಾರ ಬರುವುದಿತ್ತು. ಈ ಕೊನೆಯ ಸುತ್ತು ಬರಲಿಲ್ಲ, ಅದಕ್ಕೆ ಕಾರಣ ಜೆಡಿ(ಎಸ್)ನ 'ವಿಶ್ವಾಸದ್ರೋಹ' ಎಂದು ಬಿಜೆಪಿ ವರ್ಣಿಸಿತು. ಇದೊಂದು ಸಹಾನುಭೂತಿಯ ಅಂಶವಾಗಿ ಪರಿಣಮಿಸಿತು. ಜತೆಗೆ ಇದು ಪ್ರಬಲ ಜಾತಿಗಳಾದ ಲಿಂಗಾಯಿತರು ಮತ್ತು ಒಕ್ಕಲಿಗರ ನಡುವಿನ ವಿಭಜನೆಯನ್ನು ತೀಕ್ಷ್ಣಗೊಳಿಸಿತು, ಈ 'ವಿಶ್ವಾಸದ್ರೋಹ'ದ ನಂತರ ಲಿಂಗಾಯತರು ಬಿಜೆಪಿ ಸುತ್ತ ಕ್ರೋಢೀಕರಣಗೊಂಡರು. ಜೆಡಿ(ಎಸ್)ನ ನಷ್ಟಗಳು ಬಿಜೆಪಿಯ ಲಾಭಗಳಾಗಿ ಪರಿಣಮಿಸಿದವು. ಜೆಡಿ(ಎಸ್) ದಕ್ಷಿಣದಲ್ಲಿ ಒಂದು ಸರಕಾರ ರಚನೆಯಲ್ಲಿ ಬಿಜೆಪಿಗೆ ಪ್ರವೇಶ ನೀಡಿದ ಅತ್ಯಂತ ಸಮಯಸಾಧಕ ವರ್ತನೆಗೆ ಬೆಲೆ ತೆರಬೇಕಾಗಿ ಬಂದಿದೆ.

ಕೆಲವರು ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವುದರಲ್ಲಿ ಎಡಪಕ್ಷಗಳ ಪಾತ್ರವೇನು ಎಂದು ಪ್ರಶ್ನಿಸುತ್ತಾರೆ. ಅಂತಹ ಮಹಾನುಭಾವರಿಗೆ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳ ಪರಿಸ್ಥಿತಿಯನ್ನು ನೆನಪಿಸಬೇಕಾಗುತ್ತದೆ. ಅಲ್ಲಿ ಬಿಜೆಪಿ ಒಂದೇ ಒಂದು ಶಾಸಕರೂ ಇಲ್ಲ. ಲೋಕಸಭಾ ಸದಸ್ಯತ್ವ ಕನಸಿನ ಮಾತು. ಕರ್ನಾಟಕದಲ್ಲಿ ಮಾತ್ರ ಸಿಪಿಐ(ಎಂ) ತನ್ನ ಏಕೈಕ ಸ್ಥಾನವನ್ನು ಕಳೆದುಕೊಂಡಿದ್ದು ನಿಜ. ಆದರೆ ಇದರಿಂದ ಬಿಜೆಪಿಗೆ ಲಾಭವಾಗಿಲ್ಲ.


ಸ್ಥಳೀಯ ಅಂಶಗಳಲ್ಲದೆ ಬಿಜೆಪಿ ಮತ್ತು ಕೋಮುವಾದಿ ಕೂಟವು ಜನರಲ್ಲಿರುವ ಅತೃಪ್ತಿಯನ್ನು ಬಳಸಿಕೊಂಡು ರಾಜಕೀಯ ಹಾಗೂ ಚುನಾವಣಾ ಲಾಭವನ್ನು ಗಳಿಸುತ್ತವೆ ಎಂಬುದನ್ನು ಗಮನಿಸಬೇಕು. ಕೊನೆಗಾಣದ ಕೃಷಿ ಬಿಕ್ಕಟ್ಟು, ಬೆಲೆ ಏರಿಕೆಯ ಹೊರೆ ಮೊದಲಾದ ಅಂಶಗಳು ಕೇಂದ್ರ ಮತ್ತು ರಾಜ್ಯದಲ್ಲಿನ ಸರಕಾರಗಳ ವಿರುದ್ಧ ಮತ ನೀಡುವುದರ ಮೂಲಕ ಜನರು ತಮ್ಮ ಅತೃಪ್ತಿಯನ್ನು ಸೂಚಿಸಿದ್ದಾರೆ.

ಸಿಎಂಪಿಯ ವಚನಗಳು

ಈ ಸಂಗತಿಗಳು ಒತ್ತಟ್ಟಿಗಿರಲಿ. 2004ರ ಸಾರ್ವತ್ರಿಕ ಚುನಾವಣೆಗಳ ನಂತರ ಇದು ಕಾಂಗ್ರೆಸ್ ಮತ್ತು ಯುಪಿಎ ಮಿತ್ರರ 13ನೇ ಚುನಾವಣಾ ಸೋಲು ಎಂಬುದನ್ನು ಗಮನಿಸಬೇಕು. ನಿಜ, ವಾಜಪೇಯಿ ಪ್ರಧಾನ ಮಂತ್ರಿಗಳಾಗಿದ್ದಾಗ ಬಿಜೆಪಿ ಕೂಡಾ ಸತತ 14 ರಾಜ್ಯಗಳ ಚುನಾವಣೆಗಳಲ್ಲಿ ಸೋತಿತ್ತು ಎಂದು ಸಮಾಧಾನ ಪಡಬೇಕಾಗಿಲ್ಲ. ನಂತರ ಅದು 2004ರ ಸಾರ್ವತ್ರಿಕ ಚುನಾವಣೆಗಳಲ್ಲೂ ಸೋತಿತು. 2009ರ ಸಾರ್ವತ್ರಿಕ ಚುನಾವಣೆಗಳಲ್ಲಿ ಜಾತ್ಯಾತೀತ ಶಕ್ತಿಗಳಗೂ ಹೀಗಾಗದಂತೆ ತಡೆಯಲು ಸಾಧ್ಯವಿದೆಯೇ?

ಹೌದು, ಇದು ಸಾಧ್ಯವಿದೆ- ಆದರೆ ಒಂದು ಪರ್ಯಾಯ ಧೋರಣೆಯ ದಿಕ್ಕನ್ನು ಅನುಸರಿಸಿದರೆ, ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ದ ಭಾವನೆಯನ್ನು ಮತ್ತೆ ಜಾಗೃತಗೊಳಿಸಿದರೆ ಮಾತ್ರ ಇದು ಸಾಧ್ಯ.

ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ಸ್ವರೂಪವನ್ನು ಬಲಪಡಿಸಬೇಕಾದರೆ ಕೇಂದ್ರದಲ್ಲಿ ಕೋಮುವಾದಿ ಶಕ್ತಿಗಳು ಅಧಿಕಾರ ಗಿಟ್ಟಿಸದಂತೆ ತಡೆಯುವ ಪ್ರಮುಖ ಗುರಿಯಲ್ಲದೆ ಸಿಎಂಪಿ ಇನ್ನೊಂದು ಗುರಿಯನ್ನೂ ಮುಂದಿಟ್ಟಿತ್ತು; ಎಡಪಕ್ಷಗಳು ಕೂಡಾ ಒಟ್ಟಾರೆಯಾಗಿ ಇದಕ್ಕೆ ಅನುಮೋದನೆ ನೀಡಿದ್ದವು. ಈ ಗುರಿಯೆಂದರೆ ಆರ್ಥಿಕ ಸುಧಾರಣೆಯನ್ನು ಕೇವಲ ಕಾರ್ಪೊರೇಟ್ ಲಾಭಗಳ ದೃಷ್ಟಿಯಿಂದಷ್ಟೇ ಮಾಡದೆ, ಅದರ ಒತ್ತನ್ನು ಜನಸಾಮಾನ್ಯರ ಕಲ್ಯಾಣದತ್ತ ತಿರುಗಿಸುವುದು. ಈ ಕಾರಣದಿಂದಲೆ ಸಿಎಂಪಿ ಗ್ರಾಮೀಣ ಉದ್ಯೋಗ ಖಾತ್ರಿ, ಬುಡಕಟ್ಟು ಜನಗಳಿಗೆ ಅರಣ್ಯ ಹಕ್ಕುಗಳು, ಶಿಕ್ಷಣ ಮತ್ತು ಆರೋಗ್ಯದಲ್ಲಿ ಸಾರ್ವಜನಿಕ ಖರ್ಚಿನ ಪ್ರಮಾಣವನ್ನು ವಿಸ್ತರಿಸುವುದು, ಹೆಚ್ಚುತ್ತಿರುವ ಕೃಷಿ ಸಂಕಟವನ್ನು ಎದುರಿಸಲು ಕೃಷಿಯಲ್ಲಿ ಹೂಡಿಕೆಯನ್ನು ಹೆಚ್ಚಿಸುವುದು ಇತ್ಯಾದಿಗಳ ವಚನ ನೀಡಿತ್ತು. ಈ ಪರಿಕಲ್ಪನೆಯು ಜಾರಿಯತ್ತ ಪ್ರಾಮಾಣಿಕವಾಗಿ ಒತ್ತು ನೀಡಿದ್ದರೆ, ಜನಗಳಿಗೆ ಅದರಿಂದಾಗುವ ಪ್ರಯೋಜನಗಳು ರಾಜಕೀಯ ಪ್ರಭಾವ ಬೀರುತ್ತಿದ್ದವು.





ದುರದೃಷ್ಟವಶಾತ್ ಹಾಗಾಗಲಿಲ್ಲ, ಅವು ಯಾವ ರೀತಿಯಲ್ಲಿ ಯುಪಿಎ ಸರಕಾರದ ಕಂದಾಯ ಸಂಗ್ರಹಣೆಯನ್ನು ಅಪಾರ ಪ್ರಮಾಣದಲ್ಲಿ ಹೆಚ್ಚಿಸಬಹುದಾಗಿತ್ತೋ ಆ ರೀತಿಯಲ್ಲಿ ನಡೆಯಲಿಲ್ಲ. ಯುಪಿಎ ನ ಈ ಕೊನೆಯ ವರ್ಷದಲ್ಲಿ ಗ್ರಾಮೀಣ ಉದ್ಯೋಗ ಯೋಜನೆಯನ್ನು ದೇಶಾದ್ಯಂತ ವಿಸ್ತರಿಸುವುದಾಗಿ ಪ್ರಕಟಿಸಲಾಯಿತು. ಆದರೆ ಈಗಲೂ ಅದರ ಅನುಷ್ಠಾನ ಸರಿಯಾಗಿ ನಡೆಯುತ್ತಲೇ ಇಲ್ಲ ಎಂದೇ ಹೇಳಬೇಕಾಗುತ್ತದೆ. ಬುಡಕಟ್ಟು ಜನಗಳಿಗೆ ಅರಣ್ಯ ಹಕ್ಕುಗಳನ್ನು ಕುರಿತಂತೆ ನಿಯಮಗಳ ಅಧಿಸೂಚನೆ ಹೊರಡಿಸಲು ಪೂರಾ ನಾಲ್ಕು ವರ್ಷಗಳೇ ಹಿಡಿದವು. ಶಿಕ್ಷಣದ ಮೇಲಿನ ಖರ್ಚಿನ ಪ್ರಮಾಣ ಜಿಡಿಪಿಯ ಶೇ. 6 ಮತ್ತು ಆರೋಗ್ಯದ ಮೇಲಿನ ಖರ್ಚಿನ ಪ್ರಮಾಣ ಶೇ. ತಲುಪಬೇಕು ಎಂದು ಗುರಿ ಹಾಕಿಕೊಳ್ಳಲಾಗಿತ್ತು. ಆದರೆ ಅದಿನ್ನೂ ದೂರದಲ್ಲೇ ಇದೆ. ಆರ್ಥಿಕ ಸುಧಾರಣೆಯು ಒತ್ತು ಯಾವ ರೀತಿಯಾಗಿ ಬದಲಾಗಬೇಕು ಎಂದು ಸಿಎಂಪಿ ಕಂಡರಿಸಿತ್ತೋ ಆ ರೀತಿ ಆಗದಂತೆ ತಡೆಯುವ ಶಕ್ತಿಗಳು ಕೆಲಸ ಮಾಡುತ್ತಿವೆ ಎಂಬುದು ಸ್ಪಷ್ಟ. ರಸ್ತೆ, ಗ್ರಾಮೀಣ ಸಂಪರ್ಕ, ವಿಮಾನ ನಿಲ್ದಾಣ ಆಧುನೀಕರಣ ಇತ್ಯಾದಿ ಬೃಹತ್ ಮೂಲರಚನಾ ಪ್ರಾಜೆಕ್ಟ್‌ಗಳದ್ದೂ ಇದೇ ಕಥೆ. ಜನರ ಬದುಕಿಗೆ ನೇರವಾಗಿ ಸಂಬಂಧಪಟ್ಟ ಇಂತಹ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬಕ್ಕೆ ಯೋಜನಾ ಆಯೋಗ 'ವಿಧಾನಗಳ' ಬಗ್ಗೆ ಹಾಕುವ ಆಕ್ಷೇಪಗಳೆ ಕಾರಣವಿರಬಹುದೆ ಎಂಬ ಅನುಮಾನ ಬರುತ್ತದೆ(ಅಥವಾ ಇದು ಜನಗಳ ಹಿತಗಳನ್ನು ಬಲಿಗೊಟ್ಟು ಕಾರ್ಪೊರೇಟ್ ಹಿತಗಳನ್ನು ಸಾಧಿಸುವ ಒಂದು ವ್ಯವಸ್ಥೆಯೇ ಆಗಿರಬಹುದೇ?). ಇದರ ಒಟ್ಟು ಪರಿಣಾಮವೆಂದರೆ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿ. ಬಿಜೆಪಿ ಮತ್ತು ಕೋಮುವಾದಿ ಕೂಟಕ್ಕೆ ಚುನಾವಣೆಗಳಲ್ಲಿ ಇದರ ಪ್ರಯೋಜನವಾಗುತ್ತದೆ.

ಮತ್ತದೇ ಮೂಲಭೂತ ಆಯ್ಕೆ

ಈ ಸಂದರ್ಭದಲ್ಲಿ ನಿರಂತರ ಬೆಲೆಯೇರಿಕೆಯ ಪ್ರಶ್ನೆಯನ್ನೆ ತಗೊಳ್ಳಿ. ಖಂಡಿತಾ ಕರ್ನಾಟಕ ಚುನಾವಣೆಗಳ ಫಲಿತಾಂಶಗಳಲ್ಲಿ ಇದೂ ಒಂದು ಮಹತ್ವದ ಪಾತ್ರ ವಹಿಸಿದೆ. ಹೇಗೆ ಹಣದುಬ್ಬರ ಕುರಿತಂತೆ ಸರಕಾರದ ವಿಶ್ಲೇಷಣೆಗಳು ತಪ್ಪಾಗಿವೆ ಮತ್ತು ಅದರಿಂದಾಗಿ ಅದು ಕೈಗೊಳ್ಳುವ ಕ್ರಮಗಳು ನಿರಪಯುಕ್ತವಾಗುತ್ತಿವೆ ಎಂಬುದನ್ನು ಎಡಪಕ್ಷಗಳು ಈಗಾಗಲೇ ವಿವರಿಸಿವೆ. ಇದೇ ರೀತಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು. ಸರಕಾರಕ್ಕೆ ಕಾಣುವ ಸುಲಭವಾದ ಕ್ರಮವೆಂದರೆ ಅಂತರ್ರಾಷ್ಟ್ರೀಯ ಬೆಲೆಗಳಿಗೆ ಅನುಗುಣವಾಗಿ ದೇಶದೊಳಗೂ ಅವುಗಳ ದರಗಳನ್ನು ಏರಿಸುವುದು. ಆದರೆ ಇದರಿಂದ ಹಣದುಬ್ಬರ ಮತ್ತಷ್ಟು ಏರುತ್ತದೆ. ಇದಕ್ಕೆ ಪರ್ಯಾಯ ಪರಿಹಾರ ಇದೆಯೇ? ಖಂಡಿತಾ ಇದೆ(ಇದೇ ಸಂಚಿಕೆಯಲ್ಲಿ ಬೇರೆಡೆ ಪ್ರಕಟವಾಗಿರುವ ವರದಿ ನೋಡಿ).

ಮತ್ತೆ ನಮ್ಮ ಮುಂದೆ ಬರುವುದು ಅದೇ ಮೂಲಭೂತ ಆಯ್ಕೆ - ಕಾರ್ಪೊರೇಟ್ ಹಿತವೇ ಅಥವ ಜನಗಳ ಕಲ್ಯಾಣವೇ? ಎಡಪಕ್ಷಗಳು ಸ್ಪಷ್ಟವಾದ ಪರಿಹಾರಗಳನ್ನು ಸೂಚಿಸಿವೆ. ಕಾರ್ಪೊರೇಟ್ ಹಿತಗಳೇ ಮುಖ್ಯವಾದರೆ ಬೆಲೆಗಳನ್ನು ಏರಿಸಿ ಮತ್ತು ಅದಕ್ಕೆ ರಾಜಕೀಯ ಬೆಲೆ ತೆರಲು ಸಿದ್ಧವಾಗಿ! ಜನಗಳ ಕಲ್ಯಾಣವೇ ಮುಖ್ಯವಾದರೆ ತೆರಿಗೆಗಳನ್ನು ಪುನರ್‌ರಚಿಸಿ. ಜನಗಳ ಅಸಂತೃಪ್ತಿ ಕೋಮುವಾದಿ ಶಕ್ತಿಗಳಿಗೆ ರಾಜಕೀಯ ಮತ್ತು ಚುನಾವಣಾ ಪ್ರಯೋಜನ ಒದಗಿಸದಂತೆ ತಡೆಯಬೇಕಾದರೆ ಈ ಬಗ್ಗೆ ಸ್ಪಷ್ಟತೆ ಅಗತ್ಯ.



ಚುನಾವಣೆಗಳು, ಚುನಾವಣಾ ಆಯೋಗ ಮತ್ತು ಪ್ರಜಾಪ್ರಭುತ್ವ

ಜಿ.ಎನ್.ನಾಗರಾಜ್

ಕರ್ನಾಟಕದಲ್ಲಿ ಆಗ ಚುನಾವಣೆಗಳು ನಡೆಯುತ್ತಿದೆಯೇ ಎಂಬ ಅನುಮಾನ ರಾಜ್ಯದಲ್ಲಿ ಓಡಾಡುತ್ತಿರುವ ಯಾರಿಗಾದರೂ ಮೂಡುವಂತಿತ್ತು. ರಾಜ್ಯದ ಉದ್ದಗಲಕ್ಕೂ ಭಿತ್ತಿಪತ್ರಗಳು, ಬಾವುಟಗಳು, ಬ್ಯಾನರುಗಳ ಭರಾಟೆಯಿರಲಿಲ್ಲ. ಗೋಡೆ ಬರಹಗಳು ಕಾಣುತ್ತಿಲ್ಲ. ಧ್ವನಿವರ್ಧಕಗಳು ಮೊಳಗಲಿಲ್ಲ. ವಾಹನಗಳು ಧೂಳೆಬ್ಬಿಸಲಿಲ್ಲ. ಕಿವಿಕಿವುಡಾಗಿಸುವ ಪಟಾಕಿಗಳು ಸದ್ದು ಮಾಡಲಿಲ್ಲ. ಸಾಮಾನ್ಯವಾಗಿ ಚುನಾವಣೆಯೆಂದರೆ ಯಾವ ದೃಶ್ಯ ಮತ್ತು ವಾತಾವರಣವನ್ನು ನಿರೀಕ್ಷಿಸುತ್ತೇವೆಯೋ ಅದು ಯಾರಿಗೂ ಕಾಣಲಿಲ್ಲ. ಚುನಾವಣಾ ಆಯೋಗ ತೆಗೆದುಕೊಂಡ ಕಟ್ಟುನಿಟ್ಟಾದ ಕ್ರಮಗಳಿಂದಾಗಿ ಇಂಥಹ ವಾತಾವರಣ ಸೃಷ್ಟಿಯಾಗಿರುವುದನ್ನು ಅನೇಕ ಮತದಾರರು, ಅದರಲ್ಲೂ ನಗರಗಳ ಮಧ್ಯಮವರ್ಗದವರು ಸ್ವಾಗತಿಸಿದರು.



ಚುನಾವಣೆಗಳಲ್ಲಿನ ಭ್ರಷ್ಟಾಚಾರದಿಂದ ಕರ್ನಾಟಕದಲ್ಲಿ ಜೆಡಿಎಸ್, ಬಿಜೆಪಿ ನಡುವಿನ ಜಗಳಗಳಿಂದ ಆಳುವ ರಾಜಕೀಯ ಪಕ್ಷಗಳ ಬಗ್ಗೆ ರೋಸಿ ಹೋಗಿರುವ ಜನತೆ ಚುನಾವಣೆಗಳಲ್ಲಿ ತೀವ್ರವಾದ ಸುಧಾರಣೆಗಳನ್ನು ಬಯಸುತ್ತಿದ್ದಾರೆ. ಚುನಾವಣಾ ಆಯೋಗದ ಕ್ರಮಗಳು ಜನರ ಈ ಬಯಕೆಗೆ ಪ್ರತಿಸ್ಪಂದನೆ ಎಂದು ಭಾವಿಸಲಾಗುತ್ತಿದೆ. ಆದರೆ, ಅದೇ ಸಮಯದಲ್ಲಿಯೇ ಚುನಾವಣೆಯ ವಾತಾವರಣ ಮೂಡದಿರುವುದು ಜನರನ್ನು ಮತಗಟ್ಟೆಗಳಿಗೆ ಎಳೆದು ತರಲಿಲ್ಲ ಹಾಗೂ ಚುನಾವಣೆಯ ಸ್ಪರ್ಧಿಗಳ ಬಗ್ಗೆ ಮತ್ತು ಅವರ ಪಕ್ಷಗಳು, ನೀತಿಗಳು, ಪ್ರಣಾಳಿಕೆಗಳು ಇವುಗಳ ಬಗ್ಗೆ ಅವಶ್ಯವಾದ ಮಾಹಿತಿಯನ್ನು ಮತದಾರರಿಗೆ ನೀಡಲು ಇದರಿಂದ ಅಡ್ಡಿಯಾಗಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾದವು.

ಚುನಾವಣೆಗಳು ಪ್ರಜೆಗಳ ಅಭಿಪ್ರಾಯವನ್ನು ಸಂಗ್ರಹಿಸುವ ಒಂದು ಪ್ರಮುಖ ಸಾಧನ. ಪ್ರಜೆಗಳ ಅಭಿಪ್ರಾಯವನ್ನು ಅತ್ಯಂತ ಹೆಚ್ಚು ನಿಖರವಾಗಿ ಮತ್ತು ವ್ಯಾಪಕವಾಗಿ ಸಂಗ್ರಹಿಸಲು ಸಾಧಕವಾಗುವಂತೆ ಚುನಾವಣಾ ಪ್ರಕ್ರಿಯೆಯನ್ನು ರೂಪಿಸಬೇಕು. ಅದರಲ್ಲಿ ಪ್ರಮುಖವಾದ ಭಾಗ ಪ್ರಜೆಗಳು ತಮ್ಮ ಅಭಿಪ್ರಾಯವನ್ನು ರೂಪಿಸಿಕೊಳ್ಳಲು ಸೂಕ್ತ ವಾತಾವರಣ ನಿರ್ಮಿಸುವುದು. ಆದರೆ ಅಂತಹ ಒಂದು ಪ್ರಕ್ರಿಯೆಗೆ ದೊಡ್ಡ ಆತಂಕವನ್ನು ಚುನಾವಣಾ ಆಯೋಗ ಸೃಷ್ಟಿಸಿದೆ. ಅದರಲ್ಲಿಯೂ ಸಣ್ಣ ಪಕ್ಷಗಳಿಗೆ, ಪಕ್ಷೇತರರಿಗೆ, ಜನರನ್ನು ತಲುಪಲು ಇರುವ ಪ್ರಧಾನ ಮಾರ್ಗಗಳನ್ನು ಮುಚ್ಚಲಾಗಿದೆ. ಆದರೆ, ಈಗಾಗಲೇ ಆಳಿದ, ಆ ಕಾರಣವಾಗಿ ಅತಿ ಹೆಚ್ಚು ಭ್ರಷ್ಟ ಹಣವನ್ನು ಸಂಗ್ರಹಿಸಿದ ಪಕ್ಷಗಳಿಗೆ ತಮ್ಮ ಅಭ್ಯರ್ಥಿ ಮತ್ತು ಪಕ್ಷದ ನೀತಿಗಳನ್ನು ಜನರ ಬಳಿಗೆ ತೆಗೆದುಕೊಂಡು ಹೋಗಲು ಇರುವ ಮಾರ್ಗಗಳ ಮೇಲೆ ಚುನಾವಣಾ ಆಯೋಗ ಯಾವುದೇ ನಿಯಂತ್ರಣ ಮಾಡಿಲ್ಲ ಅಥವಾ ಹೊಂದಿಲ್ಲ. ವ್ಯಾಪಕವಾಗಿ ಬಳಸಲಾಗುತ್ತಿರುವ ಪತ್ರಿಕೆ ಹಾಗೂ ಟಿವಿ ಜಾಹೀರಾತುಗಳು ಒಂದು ಮಾರ್ಗವಾದರೆ ಆಳುವ ಪಕ್ಷಗಳಿಗೆ ಮತ್ತು ಅವರ ನಾಯಕರುಗಳಿಗೆ ಪತ್ರಿಕೆ ಮತ್ತು ಮಾಧ್ಯಮಗಳು ದಿನವೆಲ್ಲ ನೀಡುವ ಪ್ರಚಾರ ಒಂದು ರೀತಿ ವೆಚ್ಚವಿಲ್ಲದ ಜಾಹೀರಾತುಗಳೇ ಆಗಿದೆ. ಹೀಗಾಗಿ ಆಳುವ ಪಕ್ಷಗಳು ಮತ್ತು ಸಣ್ಣ ಪಕ್ಷಗಳು, ಚಳುವಳಿಕಾರರು, ಸ್ವತಂತ್ರ ಅಭ್ಯರ್ಥಿಗಳ ನಡುವೆ ಅಸಮಾನ ಭೂಮಿಕೆ ಏರ್ಪಡುತ್ತದೆ. ಮತದಾರನಿಗೆ ಪತ್ರಿಕೆ ಮತ್ತು ಟಿವಿಗಳ ಮೂಲಕ ಯಾವ ಮಾಹಿತಿ ಜರಡಿ ಹಿಡಿಯಲ್ಪಟ್ಟು ತಲುಪುವುದೋ ಕೇವಲ ಅದರ ಆಧಾರದ ಮೇಲೆಯೇ ತೀರ್ಮಾನ ಕೈಗೊಳ್ಳುವ ನಿರ್ಬಂಧಕ್ಕೆ ಒಳಗಾಗುತ್ತಾನೆ. ಭ್ರಷ್ಟಾಚಾರವನ್ನು ನಿಯಂತ್ರಿಸುವ ಘನ ಉದ್ದೇಶದಿಂದ ರೂಪಿಸಲ್ಪಟ್ಟ ನಿಯಮಗಳು ಹೀಗೆ ಭ್ರಷ್ಟಾಚಾರಿಗಳಿಗೆ ಅತಿ ಹೆಚ್ಚು ಸಹಕಾರಿಯಾಗಿವೆ. ಅದೇ ಸಮಯದಲ್ಲಿ ಮೇರೆ ಮೀರಿ ಹರಿಯುತ್ತಿರುವ ಹಣದ ಹೊಳೆಯನ್ನು ಚುನಾವಣಾ ಆಯೋಗ ನಿಯಂತ್ರಿಸುವುದಕ್ಕೆ ಸಾಧ್ಯವಾಗಿಲ್ಲ ಎಂಬುದು ಸರ್ವವಿದಿತ. ಮತಗಳನ್ನು ಕೊಳ್ಳುವುದರ ಮೂಲಕ ಪ್ರಜಾಭಿಪ್ರಾಯವನ್ನು ವಿರೂಪಗೊಳಿಸುವ ಈ ಚುನಾವಣಾ ಭ್ರಷ್ಟಾಚಾರ ಚುನಾವಣಾ ಆಯೋಗದ ತೋರಿಕೆಯ ಕಟ್ಟುನಿಟ್ಟಿನ ಎಲ್ಲ ಕ್ರಮಗಳನ್ನು ಬೇಧಿಸಿ ಸರ್ವವ್ಯಾಪಿಯಾಗಿದೆ. ಪ್ರಜೆಗಳ ಅಭಿಪ್ರಾಯಗಳನ್ನು ರೂಪಿಸಲು ಮತದಾರರನ್ನು ಮತಗಟ್ಟೆಗೆ ಸೆಳೆಯಲು ಈ ಕ್ರಮಗಳು ಆತಂಕ ಒಡ್ಡಿವೆ. ಈ ಸಂಗತಿ ದೇಶದ ಪ್ರಜೆಗಳೆಲ್ಲರನ್ನು ರಾಜಕೀಯ ಪ್ರಜ್ಞಾವಂತರನ್ನು ಪ್ರಜಾಪ್ರಭುತ್ವ ಪ್ರೇಮಿಗಳನ್ನು ಚಿಂತನೆಗೆ ಹಚ್ಚಬೇಕಾಗಿದೆ. ಹಾಗಾದರೆ ಚುನಾವಣಾ ಭ್ರಷ್ಟಾಚಾರವನ್ನು ನಿಯಂತ್ರಿಸುವ ಮಾರ್ಗವೇ ಇಲ್ಲವೇ? ಪ್ರಜೆಗಳ ಅಭಿಪ್ರಾಯವನ್ನು ವ್ಯಾಪಕವಾಗಿ ಮತ್ತು ನಿಖರವಾಗಿ ಪ್ರತಿಬಿಂಬಿಸುವ ಚುನಾವಣಾ ವಿಧಾನಗಳೇನು? ಈ ದಿಸೆಯಲ್ಲಿ ಎರಡು ಶತಮಾನಗಳಿಗೂ ಹೆಚ್ಚಿನ ಮಾನವ ಸಮುದಾಯದ ಅನುಭವವೇನು? ವಿವಿಧ ರಾಷ್ಟ್ರಗಳಲ್ಲಿ ಇರುವ ಪದ್ಧತಿಗಳೇನು? ಇವುಗಳಿಂದ ಭಾರತ ಪಡೆದುಕೊಳ್ಳುವುದೇನಾದರೂ ಇದೆಯೇ? ಎಂಬ ಪ್ರಶ್ನೆಗಳು ನಮ್ಮೆಲ್ಲರನ್ನು ಕಾಡಬೇಕಾಗಿದೆ. ○

ಬಲಿಷ್ಟ ಜನಾಂದೋಲನದಿಂದಲೇ ಕೋಮುವಾದಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ

ರಾಜ್ಯದ ಒಟ್ಟು 224 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ 110 ಸ್ಥಾನಗಳನ್ನು ಗೆಲ್ಲುವ ಮೂಲಕ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಸರಳ ಬಹುಮತಕ್ಕೆ ಅಗತ್ಯವಿರುವ 113 ಸ್ಥಾನಗಳನ್ನು ಪಡೆಯಲು ಅದು ವಿಫಲವಾಗಿದ್ದರೂ ಆಯ್ಕೆಯಾಗಿರುವ ಪಕ್ಷೇತರರನ್ನು ತನ್ನತ್ತ ಸೆಳೆದು ಸರ್ಕಾರ ರಚಿಸಲು ಅಗತ್ಯ ಬಹುಮತವನ್ನು ದೊರಕಿಸಿಕೊಳ್ಳಲು ಬಿಜೆಪಿಗೆ ಸಾಧ್ಯವಾಗಿದೆ. ಆದರೆ ರಾಜ್ಯದಲ್ಲಿ ಈ ಸಲದ ಜನಾದೇಶವು ಬಿಜೆಪಿ ಪರವಾಗಿ ಇಲ್ಲ ಎಂಬುದು ಅದು ಪಡೆದುಕೊಂಡಿರುವ ಶೇಕಡವಾರು ಮತಗಳಿಂದ ಸ್ಪಷ್ಟವಾಗುತ್ತದೆ.

ಚುನಾವಣಾ ಪದ್ಧತಿ ದೋಷ

ಈ ಸಲ ರಾಜ್ಯದಲ್ಲಿ ಮತ ಚಲಾಯಿಸಿದ ಒಟ್ಟು ಮತದಾರರಲ್ಲಿ ಕೇವಲ ಶೇ. 33.9 ರಷ್ಟು ಮತದಾರರು ಮಾತ್ರ ಬಿಜೆಪಿಗೆ ಮತ ನೀಡಿದ್ದಾರೆ. ಅಂದರೆ ಶೇ. 66. ರಷ್ಟು ಮತದಾರರು ಬಿಜೆಪಿಗೆ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ ಎಂಬುದು ಗಮನಾರ್ಹ ವಿಷಯವಾಗಿದೆ.

2004 ರಲ್ಲಿ ಬಿಜೆಪಿ 198 ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸಿ ಶೇ.28.33 ಮತಗಳನ್ನು ಪಡೆದಿತ್ತು. ಈಸಲ ಎಲ್ಲ 224 ಸ್ಥಾನಗಳಿಗೆ ಸ್ಪರ್ಧೆಮಾಡಿ ಅದು ಶೇ. 5.6ರಷ್ಟು ಹೆಚ್ಚಿಗೆ ಮತಗಳನ್ನು ಪಡೆದಿದೆ. ಆದರೆ ಚಲಾಯಿಸಲ್ಪಟ್ಟ ಒಟ್ಟು ಮತಗಳಲ್ಲಿ ಕನಿಷ್ಠ ಶೇಕಡ 50 ರಷ್ಟು ಮತಗಳನ್ನು ಪಡೆಯಲು ವಿಫಲವಾಗಿರುವ ಒಂದು ಪಕ್ಷವು ಸುಮಾರು ಶೇ. 50 ರಷ್ಟು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗುತ್ತಿರುವುದಕ್ಕೆ ನಮ್ಮ ಚುನಾವಣಾ ಪದ್ಧತಿಯಲ್ಲಿ ಅಡಗಿರುವ ದೋಷವೇ ಕಾರಣವಾಗಿದೆ. ಪ್ರಮಾಣಾತ್ಮಕ ಪ್ರಾತಿನಿಧ್ಯ(Proportional representation) ಪದ್ಧತಿಯಲ್ಲಾದರೆ ಶೇ. 34 ರಷ್ಟು ಮತ ಪಡೆದ ಒಂದು ಪಕ್ಷಕ್ಕೆ ಶೇ.34 ರಷ್ಟು ಸ್ಥಾನಗಳ್ನು ಮಾತ್ರ ಪಡೆಯಲು ಸಾಧ್ಯವಾಗುತ್ತದೆ.

ಕರ್ನಾಟಕದ ಈ ಸಲದ ಚುನಾವಣಾ ಫಲಿತಾಂಶದಲ್ಲಿ ಶೇ. 66 ರಷ್ಟು ಮತದಾರರು ಬಿಜೆಪಿಗೆ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ. ಇದರಿಂದ ಕರ್ನಾಟಕದ ಜನತೆ ಒಂದು ಬಿಜೆಪಿಯೇತರ ಜಾತ್ಯಾತೀತ ಸರ್ಕಾರವನ್ನು ಬಯಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಬಿಜೆಪಿ ಶೇ. 33.9 ರಷ್ಟು ಮತಗಳನ್ನು ಪಡೆಯಲು ಸಹ ಎಲ್ಲ ಅಕ್ರಮ ವಿಧಾನಗಳನ್ನು ಅದು ಅನುಸರಿಸಿದೆ. ಕೋಮುಗಲಭೆಗಳ ಮೂಲಕ ಹಾಗೂ ಕೋಮು ದ್ವೇಷವನ್ನು ಹರಡುವ ಮೂಲಕ ಅದು ಹಿಂದು ಮತ ಬ್ಯಾಂಕ್‌ನ್ನು ವಿಸ್ತರಿಸಿ ಗಟ್ಟಿಗೊಳಿಸಿದೆ. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಮೊದಲೇ ಘೋಷಿಸುವ ಮೂಲಕ ಜಾತಿ ಆಧಾರದಲ್ಲಿ ಮತಗಳ ಧ್ರುವೀಕರಣವನ್ನು ಯಶಸ್ವಿಯಾಗಿ ಸಾಧಿಸಿದ್ದಾರೆ, ಗಣಿ ಹಾಗೂ ಭೂ ಮಾಫಿಯಾ ಮೂಲಗಳಿಂದ ಪಡೆದ ಕೋಟಿ ಗಟ್ಟಲೆ ರೂ. ಕಪ್ಪುಹಣವನ್ನು ಮತದಾರರಿಗೆ ಆಮಿಷವೊಡ್ಡಲು ಬಳಸಿದ್ದಾರೆ. ಸುಳ್ಳು ಗುರುತಿನ ಚೀಟಿಗಳನ್ನು ಮುದ್ರಿಸಿ ಕಳ್ಳ ಮತದಾನಕ್ಕೂ ಪ್ರಯತ್ನಪಟ್ಟಿದ್ದಾರೆ. ಇಂತಹ ಎಲ್ಲ ಅಕ್ರಮಗಳ ನಂತರವೂ ಬಿಜೆಪಿಗೆ ಕೇವಲ ಶೇ. 33.9 ರಷ್ಟು ಮತಗಳನ್ನು ಮಾತ್ರ ಪಡೆಯಲು ಸಾಧ್ಯವಾಗಿರುವುದು ಗಮನಾರ್ಹವಾಗಿದೆ.

"ಬಿಜೆಪಿಯನ್ನು ವಿರೋಧಿಸುವವರು ಜನಾಧೇಶವನ್ನು ಅಪಮಾನಿಸಿದಂತೆ" ಎಂದು ಯಡಿಯೂರಪ್ಪನವರು ಹೇಳಿದ್ದಾರೆ ಎಂದು ವರದಿಯಾಗಿದೆ. ಬಿಜೆಪಿಗೆ ಜನತೆ ಸ್ಪಷ್ಟ ಬಹುಮತ ನೀಡಿಲ್ಲ. ಕೇವಲ 33.9 ರಷ್ಟು ಮಾತ್ರ ಜನಬೆಂಬಲ ವ್ಯಕ್ತವಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಯಡಿಯೂರಪ್ಪನವರು ಹೆಜ್ಜೆ ಇಡಬೇಕು.

ಗಟ್ಟಿಯಾದ ಗಣಿ ಮತ್ತು ಭೂ ಮಾಫಿಯಾ ಹಿಡಿತ

ಅಕ್ರಮ ಗಣಿಗಾರಿಕೆ ಮತ್ತು ಭೂ ಕಬಳಿಕೆಯ ಪ್ರಶ್ನೆ ಚುನಾವಣೆ ಘೋಷಣೆಯಾಗುವ ಮೊದಲು ಹಾಗೂ ಚುನಾವಣೆಯ ಸಮಯದಲ್ಲಿ ಸಾರ್ವಜನಿಕ ಚರ್ಚೆಯ ಒಂದು ಪ್ರಧಾನ ವಿಷಯವಾಗಿತ್ತು. ಇತರ ಎಲ್ಲ ಪಕ್ಷಗಳು ಬೆಳೆಯುತ್ತಿರುವ ಈ ಪಿಡುಗಿನ ಕುರಿತು ಆತಂಕ ವ್ಯಕ್ತಪಡಿಸಿದ್ದವು. ಆದರೆ ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಾಗಲಿ, ಫಲಿತಾಂಶ ಘೋಷಣೆ ಆದ ಬಳಿಕ ಯಡಿಯೂರಪ್ಪ ಪ್ರಕಟಿಸಿದ ತಮ್ಮ ಆದ್ಯತೆಗಳ ಯಾದಿಯಲ್ಲಾಗಲಿ, ಅಕ್ರಮ ಗಣಿಗಾರಿಕೆಯ ಬಗ್ಗೆ ಹಾಗೂ, ಭೂಕಬಳಿಕೆಯ ಪ್ರಸ್ತಾಪವೇ ಇರಲಿಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾಗುವುದರಿಂದ ಗಣಿ ಹಾಗೂ ಭೂ ಮಾಫಿಯಾಗಳ ಸರ್ಕಾರವೇ ಅಸ್ತಿತ್ವಕ್ಕೆ ಬಂದಂತಾಗಲಿದ್ದು ರಾಜ್ಯದ ಹಿತಕ್ಕೆ ಬಾರೀ ಧಕ್ಕೆಯಾಗುವ ಅಪಾಯವಿದೆ.



ಬಿಜೆಪಿ ಸ್ವಂತ ಬಲದೊಂದಿಗೆ ಅಧಿಕಾರಕ್ಕೆ ಬರುತ್ತಿರುವುದು ರಾಜ್ಯದ ನೈಜ ಅಭಿವೃದ್ಧಿ ಹಾಗೂ ಮತೀಯ ಸೌಹಾರ್ದತೆಯನ್ನು ಬಯಸುವ ಎಲ್ಲ ಪ್ರಗತಿಪರ ಶಕ್ತಿಗಳಿಗೆ ಒಂದು ದೊಡ್ಡ ಸವಾಲಾಗಿದೆ, ರಾಜ್ಯದ ಜನತೆಯ ಐಕ್ಯತೆ ಮತ್ತು ಸಾಮರಸ್ಯವನ್ನು ಕಾಪಾಡಲು ಎಲ್ಲ ಜಾತ್ಯಾತೀತ ಪ್ರಗತಿಪರ ಶಕ್ತಿಗಳು ಒಂದಾಗಿ ನಿಂತು ಹೋರಾಡಲು ಸಜ್ಜಾಗಬೇಕಾಗಿದೆ.


ಯುಪಿಎ ಸರ್ಕಾರದ ವಿಫಲತೆ

ದೇಶದ ಜನತೆಯನ್ನು ಬಾಧಿಸುತ್ತಿರುವ ಬೆಲೆಏರಿಕೆ, ರೇಷನ್ ಅವ್ಯವಸ್ಥೆ ಮೊದಲಾದ ಪ್ರಶ್ನೆಗಳನ್ನು ಇತ್ಯರ್ಥ ಪಡಿಸಲು ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ವಿಫಲತೆಯು ಸಹ ರಾಜ್ಯದ ಚುನಾವಣೆಗಳ ಮೇಲೆ ಪರಿಣಾಮ ಬೀರಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ಮನಮೋಹನ್ ಸಿಂಗ್ ಸರ್ಕಾರದ ವಿಫಲತೆಯ ಲಾಭ ಪಡೆಯಲು ಬಿಜೆಪಿಗೆ ಅನುಕೂಲವಾಗುತ್ತಿರುವುದು ಕರ್ನಾಟಕದ ಚುನಾವಣೆಯಲ್ಲಿ ಮಾತ್ರವಲ್ಲ, ಇತ್ತೀಚೆಗೆ ದೇಶದ ವಿವಿಧೆಡೆ ನಡೆದ ಉಪ ಚುನಾವಣೆಗಳಲ್ಲಿಯೂ ಕಂಡು ಬಂದಿದೆ. ಕೇಂದ್ರದ ಯುಪಿಎ ಸರ್ಕಾರ ಈ ಬೆಳವಣಿಗೆಗಳನ್ನು 'ಗೋಡೆಯ ಮೇಲಿನ ಬರಹ'ವಾಗಿ ಕಾಣಬೇಕಾಗಿದೆ.

ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪ್ರಶ್ನೆಗಳಿಗಾಗಿ ಬಲಿಷ್ಟವಾದ ಜನಾಂದೋಲವನ್ನು ನಡೆಸುವುದೊಂದೇ ದಾರಿಯಾಗಿದೆ ಎಂದು ಅಭಿಪ್ರಾಯ ಪಡುವ ಸಿಪಿಐ(ಎಂ) ಇಂತಹ ಸಂಧಿಗ್ಧ ಸಮಯದಲ್ಲಿ ರಾಜ್ಯ ವಿಧಾನ ಸಭೆಗೆ ದುಡಿಯುವ ಜನರ ಧ್ವನಿಯಾಗಿ ಎಡಪಕ್ಷಗಳ ಒಬ್ಬ ಪ್ರತಿನಿಧಿಯನ್ನೂ ಗೆಲ್ಲಿಸಲು ಸಾಧ್ಯವಾಗದಿರುವುದು ವಿಷಾದದ ಸಂಗತಿಯಾಗಿದೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಮೇ 26 ರಂದು ಸಭೆ ಸೇರಿ ರಾಜ್ಯ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಕುರಿತು ವಿಮರ್ಶೆ ಮಾಡಿ ಈ ಕೆಳಗಿನ ಹೇಳಿಕೆಯನ್ನು ನೀಡಿದೆ.





ಅಂಥ ವ್ಯತ್ಯಾಸವೇನಾಗಲಿಲ್ಲ. ಎರಡನೆಯ ಕೂಸೂ ಹೆಣ್ಣಾಯ್ತು. ಮನೆಯಲ್ಲಿ ಗೊಣಗಾಟ ಸುರುವಾಯ್ತು. ಮೂರನೆಯ ಕೂಸಿನ ಜನ್ಮದ ಸಮಯದಲ್ಲಿ ಸ್ವತ: ಕಮಲಿಗೆ ಕಾಲ ಕೆಳಗಿನ ನೆಲ ಕುಸಿಯುತ್ತಿರುವಂತೆ, ಮನೆಗೆ ಮನೆಯೇ ಸ್ಮಶಾನ ಮೌನದ ಕರಿ ಕಂಬಳಿ ಹೊದ್ದಿತ್ತು.

ಬೆಳಕಾದ ಬೆಂಕಿ ಬೀಜ...

ದೂರದರ್ಶನದಿಂದ ಫೋನಿತ್ತು. ಮಹಿಳೆಯರ ಸಮಸ್ಯೆಯ ಸುತ್ತಮುತ್ತ ಒಂದು ಸಂವಾದ. ಕಾವ್ಯಳ ಒತ್ತಾಯ. "ನೀವು, ಮೀನಕ್ಕ ಬರ್ರಿ "ಹುಂ ಅಂದೆವು. ಎಲ್ಲಿಂದ ಸುರು ಮಾಡಿ ಎಲ್ಲಿ ಮುಗಿಸುವುದು? ಅರ್ಧ ತಾಸಿನೊಳಗೆ ಹೆಣ್ಣುಮಕ್ಕಳ ಬದುಕು ಗಾಥೆ ಅರುಹಲು ಸಾಧ್ಯವೇ? ಅವಳ ಕಣ್ಣೀರ ಹನಿ ಬಗೆಯಲು ಸಾಧ್ಯವೇ? ಮೌನದ ಪೊರೆ ಬಿಚ್ಚಿ ಮಾತಾಗಿಸಲು ಧೀರತೆಯ ಹಾದಿ ಅರಿಯಲು, ಸಮಸ್ಯೆಗಳ ಎದೆ ಮೆಟ್ಟಿ, ಸವಾಲುಗಳ ಸ್ವೀಕರಿಸಿ ಮುನ್ನಡೆದವರ ಅಸಂಖ್ಯ ಕತೆಗಳೇ ಇವೆ. ಎಲೆ ಮರೆಯ ಕಾಯಂತೆ. ಕತೆ ಕೇಳುತ ಕೇಳುತ ನಿಮ್ಮ ಕಣ್ಣೀರು ಬತ್ತಬಹುದು. ಒಂದು ಪುಟ್ಟ ಬೆಂಕಿ ಬೀಜ ಟಿಸಿಲೊಡೆಯಬಹುದು ಎದೆ ತುಂಬಿ ಬರಬಹುದು.

ಏಳು ವರ್ಷಗಳ ಹಿಂದೆ. ನಾವು ಗೆಳತಿಯರು ನಾಲ್ಕು ದಿನಗಳ ಕಾಲ ಚಿಂಚೋಳಿ ತಾಲ್ಲೂಕಿನ ಕೊಂಚಾದರಂ ತಾಂಡಾಗಳಲ್ಲಿ ಅಲೆಯುತ್ತಿದ್ದೆವು. ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಸಮೀಕ್ಷೆಯೂ ನಡೆಸುತ್ತಿದ್ದೆವು. ಅದೊಂದು ಅದ್ಭುತ ಅನುಭೂತಿಗೆ ಒಡ್ಡಿಕೊಂಡ ಕಾಲ. ಕಿತ್ತು ತಿನ್ನುವ ಬಡತನ ಸರಕಾರದ ನೆರವಿಲ್ಲ. ಮನೆ ತುಂಬ ಮಕ್ಕಳು, ಹೆಣ್ಣುಮಕ್ಕಳೇ ಜಾಸ್ತಿ. ಹೆಣಗೂಸುಗಳ ಮಾರಾಟದ ಜಾಲ ಹಬ್ಬಿತ್ತು. ಹೆಣ್ಣು ಬೇಡವೆಂಬ ತಿರಸ್ಕಾರ ಡಾಳಾಗಿತ್ತು. ಲಂಬಾಣಿ ಹೆಣ್ಣು ಮಕ್ಕಳು ಕಡುಕಷ್ಟಜೀವಿಗಳು. ಮನೆಯ ನೊಗಕ್ಕೆ ಇವರದೇ ಹೆಗಲು. ಆದರೂ ಹೆಣ್ಣುಬೇಡ. ಈ ತಿರಸ್ಕಾರ, ಧೀಕಾರ ಎಷ್ಟು ಆಳವಾಗಿತ್ತೆಂದರೆ, ಕಮಲಿಬಾಯಿಯ ಕತೆ ಕೇಳಿದ ಮೇಲೆ..... ನಮ್ಮ ಅರಿವಿಗೆ ಬಂದಿದ್ದು, ಎದೆ ಒಡೆದು ಹೋಗುವಂತಹ ಆಳ.


'ಅದೊಂದು ದೊಡ್ಡ ಕತಿ'

ಅವಳು ಅಂಗನವಾಡಿ ಕಾರ್ಯಕರ್ತೆ. ನಾವು ಅವಳ ಮನೆಯಲ್ಲಿ ಕಾಲಿಟ್ಟಾಗ ತುಂಬು ಹರೆಯದ ಇಬ್ಬರು ಹುಡುಗಿಯರು ನಗುತ ಬರ ಮಾಡಿಕೊಂಡರು. ಇನ್ನಿಬ್ಬರು ಚಿಕ್ಕವರು. ಕಮಲಿಬಾಯಿಗೆ ನಮ್ಮ ಬರುವು ಹಿಗ್ಗಿನದಾಗಿತ್ತು. ಒಗ್ಗರಣೆ ಸುಸುಲಾ, ಚಹಾ ಸಿದ್ಧವಾಗಿತ್ತು. ಅವಳಿಗೆ ಗಂಡುಮಕ್ಕಳಿರಲಿಲ್ಲ, ನಾಲ್ಕು ಹುಡುಗಿಯರು ಹುಟ್ಟಿದ ಮೇಲೆ ಮಕ್ಕಳಾಗದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಳು..... "ನಿಮ್ಮ ಮನ್ಯಾಗ ಗಂಡು ಕೂಸು ಬೇಕು ಅನ್ನಲಿಲ್ಲೇನು?" ನಾವು ಪ್ರಶ್ನಿಸಿದೆವು.

"ಅಯ್ಯೋ ಅದೊಂದು ದೊಡ್ಡ ಕತಿ ಅದಾರಿ................." ಕಮಲಿಬಾಯಿ ಹತ್ತು ವರ್ಷಗಳ ಹಿಂದಿನ ದಿನಗಳಲ್ಲಿ ನಡೆದ ಘಟನೆಗಳನ್ನು ನೆನಪಿಸಿಕೊಳ್ಳುತ ತುಂಬ ಭಾವುಕಳಾಗತೊಡಗಿದಳು.

ಕಮಲಿಬಾಯಿ ಈ ತಾಂಡಾಕ್ಕೆ ಲಗ್ನ ಆಗಿ ಬಂದ ಮೇಲೆ ಎಲ್ಲವೂ ಸುಖವಾಗಿತ್ತು. 10ನೇ ತರಗತಿ ಓದಿದ ಕಮಲಿಗೆ ಕಾಡಿನ ಕೆಲಸವೂ ಬರುತ್ತಿತ್ತು. ಗಂಡನೂ ಹೊಲದ ಕೆಲಸ ಮಾಡುತ ಕಾಡಿನ ಹಣ್ಣು, ಬೀಜ, ಜೇನು ಸಂಗ್ರಹಿಸುತ್ತಿದ್ದ, ಮಾರುತ್ತಿದ್ದ. ಮೊದಲ ಕೂಸು ಹೆಣ್ಣು ಹುಟ್ಟಿತು. ಅಂಥ ವ್ಯತ್ಯಾಸವೇನಾಗಲಿಲ್ಲ. ಎರಡನೆಯ ಕೂಸೂ ಹೆಣ್ಣಾಯ್ತು. ಮನೆಯಲ್ಲಿ ಗೊಣಗಾಟ ಸುರುವಾಯ್ತು. ಮೂರನೆಯ ಕೂಸಿನ ಜನ್ಮದ ಸಮಯದಲ್ಲಿ ಸ್ವತ: ಕಮಲಿಗೆ ಕಾಲ ಕೆಳಗಿನ ನೆಲ ಕುಸಿಯುತ್ತಿರುವಂತೆ, ಮನೆಗೆ ಮನೆಯೇ ಸ್ಮಶಾನ ಮೌನದ ಕರಿ ಕಂಬಳಿ ಹೊದ್ದಿತ್ತು. ಮನೆ ಹೊರಗಿನ ತಟ್ಟಿ ಗುಡಿಸಲಿನಿಂದ ಸೂಲಗಿತ್ತಿ ಮತ್ತದೇ ಸುದ್ದಿ ಬಿತ್ತರಿಸಿದಳು. "ಹೆಣ್ಣಾಯ್ತು" ಹುಬ್ಬು ಗಂಟಿಟ್ಟು ಹಲ್ಲು ಮಸೆಯುತ ಠಳಾಯಿಸುತ್ತಿದ್ದವಳ ಗಂಡ ಬಿರುಗಾಳಿಯಂತೆ ನುಗ್ಗಿದ. ಇನ್ನೂ ಹಸಿ ರಕ್ತದ ಮೈ ಆರಿರದ ಹೆಂಗೂಸು ಅಪರಿಚಿತ ಲೋಕದ ವೈಚಿತ್ರ್ಯಕ್ಕೆ ಗಾಬರಿಗೊಂಡು ಅಳುತ್ತಿತ್ತು. ಒಳ ಧಾವಿಸಿದ ಗಂಡ ಥಟ್ಟನೆ ಕೂಸಿನ ಕುತ್ತಿಗೆಗೆ ಕೈ ಹಾಕಿದ. "ಇದು ನನ ಜಿಂದ ಗಾಣೆಸುಂಗ್ತದ. ಶನಿ ಅದಾ ಇದಕ್ಕ ಸಾಯಿಸ್ಬೇಕು....." ಅಂತ ಚೀರಾಡುತ ಇನ್ನೇನು ಕೂಸಿನ ಕುತ್ತಿಗೆ ಒತ್ತಲು ಮುಂದಾಗಬೇಕು. ಅಷ್ಟರಲ್ಲಿ ತಲ್ಲಣಗೊಂಡ ಕಮಲಿ ಒಮ್ಮೆಲೆ ಹಾರಿ ಅವನ ಕೈಯಿಂದ ಕೂಸನ್ನು ಕಿತ್ತುಕೊಂಡು "ಇದಕ್ಕ ನಾ ಹಡದಿನಿ.... ನಂಗ ಬೇಕು. ಕೊಲ್ಲಲಾಕ ನೀ ಯಾರು?" ಎಂದು ಚೀರಾಡುತ ಮಗುವನ್ನು ಎದೆಗೊತ್ತಿಕೊಂಡು ಕದನಕ್ಕೆ ನಿಂತಳು. ತಲೆ ಚಚ್ಚಿಕೊಂಡು ಹಾರಾಡುತ ಗಂಡ ಹೊರಹೋದ.

"ಎದಕ ಬೇಕ್ರಿ ಹಡದ ಅಪ್ಪ, ಕಟ್ಕೊಂಡಿದ ಗಂಡ ಕಡಿಗಿ ಹಚ್ಚಲಿಲ್ಲ, ಇನ್ನ ಹುಟ್ಟಿದ ಮಗ ಕಡಿಗಿ ಹಚ್ತಾನಂತ ಹ್ಯಾಂಗ ನಂಬಬೇಕು? ನಾವು ದುಡದ್ರ ನಮಗೆ ಕೈಲಾಸ..... ಮಕ್ಕಳಿಗೆ ಶ್ಯಾಣೇ ಮಾಡದಟೇ ನಮ್ಮ ಕೆಲಸ. ನೋಡಾದು ಬಿಡಾದು ಅವ್ರಿಗಿ ಬಿಟ್ಟಿದ್ದು, ರೋಗ ಮುಪ್ಪು, ಸಾವು ಯಾರಿಗಿ ಬಿಟ್ಟದ? ಶಕ್ತಿ ಇರಾತನ ದುಡಿದ್ರಾಯ್ತು..."



'ಸಿಟ್ಟಿನಾಗ ಹಂಗ ಮಾಡದೆ'

ಮರುದಿನ ಮುಂಜಾನೆ, ಕಮಲಿಯ ತಲೆ ಹತ್ತಿರ ಕೂತ ಅವಳ ಗಂಡ, ಮೆತ್ತಗೆ ಸಂತೈಸುತ "ಕಮಲಿ, ನಮಗ ಗಂಡು ಕೂಸು ಬೇಕು. ಈ ಹೆಣ್ಣ ತಗೊಂಡು ಏನ್ ಮಾಡಾರಿ? ನಿನ್ನೆ ಸಿಟ್ಟನಾಗ ಹಾಂಗ ಮಾಡದೆ. ಕೊಲ್ಲಾದು ನಂಗನೂ ಮನಸಿಲ್ಲ. ನಾವು ಬಡವ್ರು. ನಮಗ ಈಸ್ ಮಕ್ಕಳಿಗೆ ಅನ್ನ ಹಾಕಾದಾಗಾದಿಲ್ಲ. ಅದ್ಯಾರೋ ನಮ್ಮ ಕೂಸಗೋಳಿಗಿ ಒಯ್ದು ಬ್ಯಾರೇ ದೇಶದಾಗ ಚಲೋ ಸಾಲಿ ಕಲಸ್ತಾರಂತ. ಚೆಂದ ನೋಡ್ಕೋತಾರಂತ. ಅವ್ರಿಗಿ ಕೊಡಾಣ...." ಪ್ರಸ್ತಾವನೆ ಪ್ರಕಟಿಸಿದ್ದೇ ತಡ ಕಮಲಿಗೆ ಕಾಲ ಹೆಬ್ಬೆರಳಿಂದ ಅಳ್ಳೆತ್ತಿವರೆಗೂ ಬೆಂಕಿ ಹೊತ್ತಿದಂತ ಸಿಟ್ಟು ಬಂದು, " ಯಾಕ ಹಿಂಗ ಮಾತಾಡ್ತಿ? ಮಕ್ಕಳಿಗಿ ಸಾಕಾದು ಆಗಲ್ಲಂದ್ರ ಮಕ್ಕಳಾಗಾದು ಬಂದ್ ಮಾಡಾಣಾ. ಮಂದಿಗಿ ಯಾಕ ನನ ಕೂಸೂ ಕೊಡ್ಲಿ? ನಿನ್ ಕೈಲಿ ಆಗಿಲ್ಲಂದ್ರ ಬಿಡು...." ತಿರುಗಿ ಸ್ಪಷ್ಟವಾಗಿ ಉತ್ತರಿಸಿದಳು.

'ನೇಣರೆ ಹಾಕ್ಕೋ....'

'ನೀ ನಿಂದೇ ಜಿದ್ದ ಮಾಡದೂರ ನಾ ಬದಕಂಗಿಲ್ಲ.... ನೇಣ ಹಾಕ್ಕೊಂಡು ಸತ್ತ ಹೋಗ್ತೀನಿ..." ಗಂಡ ಇನ್ನೊಂದು ಬಲವಾದ ಅಸ್ತ್ರ ಬೀಸಿದ. ಕಮಲಿ ಇಕ್ಕಟ್ಟಿನಲ್ಲಿ ನರಳಿದಳು. ಪರಿಪರಿಯಾಗಿ ಗಂಡನ ಮನ ಒಲಿಸಲು ಹೆಣಗಿದಳು. ಊಹುಂ ಫಲಿಸಲಿಲ್ಲ. ಕಡೆಗೆ ಕಮಲಿ "ನಾನೇನಿನ ಮನ್ಯಾಗ ಇರಾಂಗಿಲ್ಲ. ನೀ ಇದ್ದರೆ ಇರು. ನೇಣರೇ ಹಾಕ್ಕೊ. ನನ್ನ ಕೂಸಿಗಿ ನಾ ಯಾರಿಗಿ ಕುಡಾದಿಲ್ಲ....." ಅಂದವಳೇ ಹಸಿ ಬಾಣಂತಿ ಮೂರು ಕೂಸುಗಳನ್ನು ತಬ್ಬಿಕೊಂಡು ಹೊಸ್ತಿಲು ದಾಟಿಯೇಬಿಟ್ಟಳು. ಅತ್ತ ಗಂಡ ನೇಣಿಗೇರಲು ಸಿದ್ಧತೆ ನಡೆಸಿದ. ಗುಲ್ಲಾಗಿ ನೆರೆ ಹೊರೆಯವರು ಎದ್ದುಬಂದರು. ನೇಣಿನ ಹಗ್ಗ ಕಸಿದುಕೊಂಡರು. ಪಂಚಾಯ್ತಿ ಸೇರಿಸಿದರು. ಕಡೆಗೆ ತೀರ್ಪು ಹೊರಡಿಸಿದರು. ಕಮಲಿಗೆ ಇನ್ನೊಂದು ಅವಕಾಶ. ಮುಂದಿನ ಮಗು ಗಂಡಾದ್ರೆ ಸರಿ. ಹೆಣ್ಣಾದ್ರೆ ಗಂಡ ಹೇಳಿದಂತೆ ಕೇಳಬೇಕು. ಇಲ್ಲದಿದ್ರೆ ಮನೆ ಬಿಟ್ಟು ಹೋಗಬೇಕು. ಸರಿ. ಮರುವರ್ಷ ಕಮಲಿ ಇನ್ನೊಂದು ಮಗುವಿಗೆ ಜನ್ಮ ಕೊಟ್ಟಳು. ಅದೂ ಹೆಣ್ಣೇ! ಕಮಲಿ ಮತ್ತು ಕೂಸಿನ ಗತಿಯೇನಾಯ್ತು. ಮನೆ ಬಿಟ್ಟು ಹೊರಟಳು. 'ಅಂಗನವಾಡಿ ಕೆಲಸಕ್ಕೆ ಹಾಕಿದ ಅರ್ಜಿ ಫಲ ಕೊಟ್ಟಿತ್ತು. ದೂರದ ಕೊಟ್ಟಿಗೆಯಲ್ಲಿ ವಾಸ. ವರ್ಷಗಳು ಉರುಳತೊಡಗಿದವು. ಗಂಡನಿಗೆ ಒಂಟಿ ಬದುಕು ಬೇಸರ ಬರತೊಡಗಿತು. ಮೆಲ್ಲಗೆ ಕಮಲಿ ಮನೆಯತ್ತ ಹೆಜ್ಜೆ ಹಾಕತೊಡಗಿದ. "ಏಟಾದ್ರೂ ಗಂಡ, ಇಟ್ಕೋ ಬರಲಿ..." ಅಂತೆಲ್ಲ ಬುದ್ಧಿವಾದ ಜನರಿಂದ. ಚಿಂತಿಸುತ್ತಿದ್ದ ಕಮಲಿ ಅದೊಂದು ದಿನ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಳು. ಸುದ್ದಿ ತಿಳಿದ ಗಂಡ ನೆಲ ಮುಗಿಲು ಒಂದು ಮಾಡಿ ಕೂಗಾಡಿದ "ಗಂಡು ಕೂಸು ಬೇಕು" ಎಂದು ಬೊಬ್ಬಿಟ್ಟ. ಕಮಲಿ ಜಪ್ಪನ್ನಲಿಲ್ಲ. ಮಕ್ಕಳನ್ನು ಮುದ್ದಾಗಿ ಬೆಳೆಸಿದಳು. ಶಾಲೆಗೆ ಕಳಿಸಿದಳು. ಅಂಗನವಾಡಿ ಕೆಲಸದ ತರುವಾಯ ಕಾಡಿನ ಕಾಯಕಕ್ಕೂ ಹೋಗತೊಡಗಿದಳು.

'ಎದಕ ಬೇಕ್ರಿ?'

"ಕಮಲಿಬಾಯಿ, ಗಂಡ ಕೂಸಿಲ್ಲಂತ ಚಿಂತಿ ಆಗಲ್ಲೇನು?" ನಾವು ಕೇಳಿದ್ದಕ್ಕೆ, "ಎದಕ ಬೇಕ್ರಿ ಹಡದ ಅಪ್ಪ, ಕಟ್ಕೊಂಡಿದ ಗಂಡ ಕಡಿಗಿ ಹಚ್ಚಲಿಲ್ಲ, ಇನ್ನ ಹುಟ್ಟಿದ ಮಗ ಕಡಿಗಿ ಹಚ್ತಾನಂತ ಹ್ಯಾಂಗ ನಂಬಬೇಕು? ನಾವು ದುಡದ್ರ ನಮಗೆ ಕೈಲಾಸ..... ಮಕ್ಕಳಿಗೆ ಶ್ಯಾಣೇ ಮಾಡದಟೇ ನಮ್ಮ ಕೆಲಸ. ನೋಡಾದು ಬಿಡಾದು ಅವ್ರಿಗಿ ಬಿಟ್ಟಿದ್ದು. ರೋಗ ಮುಪ್ಪು, ಸಾವು ಯಾರಿಗಿ ಬಿಟ್ಟದ? ಶಕ್ತಿ ಇರಾತನ ದುಡಿದ್ರಾಯ್ತು...."

ಕಮಲಿಬಾಯಿ ಎಲ್ಲಿಯೂ ಸಮಾನತೆಯ ಭಾಷಣ ಕೇಳಿರಲಿಲ್ಲ. ಅವಳ ಸಹಜ ಜೀವಪರ ಮತ್ತು ಸಮಾನತೆಯ ನಂಬಿಕೆ ಅಚಲವಾಗಿತ್ತು. ಕಮಲಿ ಜೀವನವೆಂಬ ಸಮುದ್ರದಲೆಗಳ ಬೆನ್ನೇರಿ, ಈಸಿ ಜೈಸಿದಳು. ಸ್ವಾಭಿಮಾನ ಮತ್ತು ಛಲದ ಬದುಕನ್ನು ಎಚ್ಚರಿಕೆಯಿಂದ ಕಟ್ಟಿದಳು. ತಾಯಿಯ ತ್ಯಾಗ ಅಸ್ಮಿತತೆ ಅರಿತ ಮಕ್ಕಳು ಗಂಭೀರ ಮತ್ತು ಧೀಮಂತಿಕೆಯ ನಡೆ ರೂಡಿಸಿಕೊಂಡಿದ್ದರು. ನಾವು ಬರುವಾಗ ಕಮಲಿಬಾಯಿ ಗಂಡ ಸಿಕ್ಕಿದ "ನಮಸ್ಕಾರರ್ರಿ ರಾಯರೇ" ಎಂದು ಕೈಮುಗಿದು, ಕಮಲಿ ಬಾಗಿಲ ಚೌಕಟ್ಟಿಗೆ ಕೈ ಇಟ್ಟು ನಿಂತಿದ್ದಳು. ಅವಳ ಕಣ್ಣಲಿ ದೃಢವಾದ ಅಭಿಮಾನ ಕಾಲೂರಿತ್ತು. ಕ್ರಮೇಣ ಕಮಲಿ ಮುಗಿಲೆತ್ತರಕೆ ಬೆಳೆದಂತೆ ಭಾಸವಾಗತೊಡಗಿತು...

"ನಾಚಬೇಡಿ ಹೆಣ್ತನಕೆ, ತಲೆಯೆತ್ತಿ ನಿಲ್ಲಿರಿ"
ಹಾಡಿನ ಸಾಲು ನೆನಪಿನಂಗಳಕೆ ಬಂದಿತು.

ಕವನ

ದಾಂಧಲೆ

ರಕ್ಕಸರು ಬರುತಿಹರು
ರಾಜ್ಯವನು ಆಳಲು
ರಕ್ಷಿಸಲು ಎದ್ದೇಳಿ
ಶಾಂತಿ ಇಂದ ಬಾಳಲು

ಮತಾಂಧರು ತರುತಿಹರು
ಮತ ಮೌಢ್ಯವ ಬಿತ್ತಲು
ಭೂತಕಾಲದ ಧೂರ್ತ
ವರ್ಣಾಶ್ರಮ ಹೇರಲು

ದುಡಿವ ಜನರ ಬಿಡರು ಕೂಡಿ
ಒಂದಾಗಿ ಬಾಳಲು
ದುಡಿಯದೆ ಹೊಡೆದು ಕುಡಿಕೆ ಕೋಟಿ
ಕುಬೇರರಾಗಲು

ಕೋಮು ದಳ್ಳುರಿ ದ್ವೇಷ
ವಿಷವನು ಕಕ್ಕುತ
ರಾಮನ ಹೆಸರನುಸುರಿ ಜನರ
ರಕ್ತವನು ನೆಕ್ಕುತ

ಪ್ರೀತಿ ಎಂಬುದರಿಯದವರು
ತಗಾದೆ ತೆಗೆವ ಡಾಂಭಿಕರು
ಬೀಗುಮಾನದಿಂದ ಬುರುಡೆ
ತುತ್ತೂರಿ ಊದುವರು

ಮೂಕನಾಗ ಬೇಡ ಜೋಕೆ
ನೂಕು ಆಚೆ ಮೂರ್ಖರನು
ಸಾಕು ಮಾಡಲೇಳು ಧೋಕ
ಕಾಪಾಡಲು ಲೋಕವನು

-ನರಸಿಂಹಪ್ಪ
ಸಿಂಧನೂರು

ಕನ್ನಡಿ



ಕೆ.ಎಸ್.ವಿಮಲ

ಅಸಭ್ಯತೆಯನ್ನು ನಿಯಂತ್ರಿಸಲೊಂದು ಕಾನೂನು ?

ಜಾಹಿರಾತುಗಳಲ್ಲಿ, ಸಾರ್ವಜನಿಕ ಜೀವನದಲ್ಲಿ ಅಶ್ಲೀಲತೆ, ಅಸಭ್ಯತೆಯನ್ನು ನಿಯಂತ್ರಿಸಲು ಕಾನೂನುಗಳೇನೋ ಇವೆ. ಆದರೆ ಅದನ್ನು ಜಾರಿ ಮಾಡುವವರು ಯಾರು?

ಮಹಿಳೆಯರನ್ನು ವ್ಯಕ್ತಿಗಳನ್ನಾಗಿಯೇ ನೋಡದಿರುವ ಒಂದು ಭೋಗ ವಸ್ತುವೆಂದೇ ಭಾವಿಸುವ ಪ್ರವೃತ್ತಿಗಳ ಕುರಿತು ನಾವು ಸದಾ ಮಾತನಾಡುತ್ತೇವೆ. ನಾಗರೀಕತೆಯ ತುತ್ತತುದಿಯ ಹಂತವೆಂದು ಕೊಳ್ಳಬಹುದಾದ ಈ ನವ ಶತಮಾನದಲ್ಲೂ ಅದೇ ಪ್ರವೃತ್ತಿ ಮುಂದುವರೆಯುತ್ತಿದೆ ಮತ್ತು ಹೆಚ್ಚುತ್ತಿದೆ ಎಂಬುದೇ ನಮ್ಮ ಖೇದ. ಈ ಪ್ರವೃತ್ತಿ ಹೆಚ್ಚುತ್ತಿರುವುದಕ್ಕೆ ಕಾರಣಗಳು ನೂರಾರು. ಈ ಸಮಾಜದಲ್ಲಿ ಅಂತರ್ಮಿಳಿತವಾದ ಹಲವಾರು ಅಂಶಗಳು ತಮ್ಮದೇ ಪ್ರಭಾವವನ್ನು ಬೀರಿವೆ. ಬೀರುತ್ತಿವೆ. ಇದನ್ನು ಗುರುತಿಸಿಯೇ ಭಾರತೀಯ ದಂಡ ಸಂಹಿತೆಯ ಹಲವು ಕಲಮುಗಳಲ್ಲಿ ಈ ಕುರಿತಾದ ಪ್ರಸ್ತಾಪವನ್ನು ನೋಡುತ್ತೇವೆ. ದಂಡ ಸಂಹಿತೆಯ 292, 293, 294 ನೇ ಕಲಮುಗಳು ಅಶ್ಲೀಲತೆಯ ಕುರಿತು, ಕಲಮು 292 ಅಶ್ಲೀಲ ಪ್ರಕಟಣೆಗಳ ಮಾರಾಟ 293 ನಿರ್ದಿಷ್ಟವಾಗಿ ಯುವ ಜನತೆಗೆ ಅಶ್ಲೀಲತೆಯನ್ನು ಬಿಂಬಿಸುವ ಪ್ರಕಟಣೆಗಳ ಮಾರಾಟ, 294 ಅಶ್ಲೀಲ ಹಾಡುಗಳು, ಅಭಿನಯಗಳನ್ನು ನಿಯಂತ್ರಿಸುವ ಕುರಿತು ಮಾತನಾಡುತ್ತವೆ. ಇಷ್ಟೆಲ್ಲ ಕಲಮುಗಳು ಸಮಾಜಕ್ಕೆ ತನ್ನ ರೀತಿ, ನೀತಿ, ನಡವಳಿಕೆಗಳಿಗೆ ಒಂದು ಚೆಕ್ ಹಾಕಿಕೊಳ್ಳುವ ಅಗತ್ಯವನ್ನು ನಿರ್ದಿಷ್ಟವಾಗಿಯೇ ಹೇಳುತ್ತವೆ.

ಮಾರಕವಾಗುವ ಪ್ರವೃತ್ತಿಗಳು

ಆದರೂ ಜಾಹಿರಾತುಗಳು ಮತ್ತು ಇತರ ಪ್ರಚಾರ ಸಾಮಗ್ರಿ ಪ್ರಕಟಣೆಗಳಲ್ಲಿ ಮಹಿಳೆಯರನ್ನು ಅಗತ್ಯಕ್ಕಿಂತ ಹೆಚ್ಚು ಅಸಭ್ಯವಾಗಿ ಚಿತ್ರಿಸುವ ಪ್ರವೃತ್ತಿ ಬೆಳೆಯುತ್ತಿದೆ. ಇದು ಮಹಿಳೆಯರ ಸ್ಥಾನಮಾನವನ್ನು ಇನ್ನೂ ಕೀಳಾಗಿಸುವ ಜೊತೆಯೇ ಇಡೀ ಸಮಾಜದ ಆರೋಗ್ಯಕ್ಕೆ ಮಾರಕವಾಗಬಹುದಾದ ಪ್ರವೃತ್ತಿ ಎಂಬುದನ್ನು ಗುರುತಿಸಿ 1986ರಲ್ಲಿ ಮಹಿಳೆಯರನ್ನು ಅಸಭ್ಯವಾಗಿ ಚಿತ್ರಿಸುವುದನ್ನು ನಿಷೇಧಿಸುವ ಕಾನೂನು- 1986 ಜಾರಿಗೆ ಬಂತು.

ಕಾನೂನು ನಿಷೇಧಿಸಿದೆ.ಆದರೆ?

ಈ ಕಾನೂನು ಬಹಳ ಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಯಾವುದೇ ಜಾಹಿರಾತು, ಬರಹ, ವರ್ಣಚಿತ್ರ, ಇತ್ಯಾದಿಗಳ ಮೂಲಕ ಮಹಿಳೆಯರ ದೇಹವನ್ನು ಅಸಭ್ಯವಾಗಿ ಚಿತ್ರಿಸುವುದನ್ನು ನಿಷೇಧಿಸುತ್ತದೆ. ಈ ಕಾನೂನಿನ ರಚನೆಯು ಅಗತ್ಯವನ್ನು ಒತ್ತಿ ಹೇಳುತ್ತಲೇ ಕರಡು ಮಸೂದೆ ಇಂತಹ ಒಂದು ಕಾನೂನಿನ ಅಗತ್ಯವನ್ನು ಬಹಳವಾಗಿ ಸಮರ್ಥಿಸಿಕೊಂಡಿತು. ಹಾಗೆ ಸಮರ್ಥಿಸಿಕೊಳ್ಳುವಾಗ ಇತರ ಎಲ್ಲ ಮಾಧ್ಯಮಗಳ ಬಗ್ಗೆ ಮಾತನಾಡುತ್ತಲೇ ನಿರ್ದಿಷ್ಟವಾಗಿ ಜಾಹಿರಾತುಗಳನ್ನು ಉಲ್ಲೇಖಿಸಿದೆ. 1986ರಲ್ಲಿಯೇ ಇಂತಹ ಒಂದು ಕಾನೂನು ಜಾರಿಗೆ ಬಂದಿದೆಯಾದರೂ ಉದಾರೀಕರಣದ ಈ ಯುಗದಲ್ಲಿ ಸಮಾಜದ ಸ್ವಾಸ್ಥ್ಯಕ್ಕಿಂತ ಸಂಪತ್ತಿನ ಗಳಿಕೆಯೇ ಪ್ರಮುಖವಾಗಿ ಈ ಕಾನೂನು ತನ್ನ ಬೆಲೆಯನ್ನೇ ಕಳೆದುಕೊಂಡಿದೆ. ಆದರೂ ಪ್ರಜೆಗಳೆನಿಸಿಕೊಂಡವರು ಕಾನೂನಿನ ಪರಿಮಿತಿಯಲ್ಲಿಯೇ ಈ ರೀತಿಯ ಪ್ರವೃತ್ತಿಗಳನ್ನು ಪ್ರಶ್ನಿಸುವ ಅವಕಾಶ ಅಧಿಕಾರ ಎರಡನ್ನು ಬಳಸಲು ಮುಂದಾದರೂ ಒಂದಿಷ್ಟು ಬದಲಾವಣೆ ಕಂಡೀತು.

ಕಾನೂನು ಏನು ಹೇಳುತ್ತದೆ

ಜಾಹಿರಾತುಗಳು ಎಂದರೆ ಸೂಚನಾ ಪತ್ರ, ಸುತ್ತೋಲೆ, ಲೇಬಲ್, ಸುತ್ತುವ ಕಾಗದ, ಮತ್ತಿತರ ಯಾವುದೇ ಪರಿಕರಗಳು.

'ಹಂಚಿಕೆ' ಎಂದರೆ ಮಾದರಿ ಮಾರಾಟ, ಉಚಿತವಾಗಿ ಹಂಚುವುದೂ ಸೇರಿದಂತೆ


ಮಹಿಳೆಯ 'ಅಸಭ್ಯ ಪ್ರದರ್ಶನ' ಎಂದರೆ ಯಾವುದೇ ರೀತಿಯಲ್ಲಿ ಮಹಿಳೆಯರ ಸ್ಥಾನಮಾನಕ್ಕೆ ಚ್ಯುತಿ ಬರುವಂತಹ, ಸಾಮಾಜಿಕ ಸ್ವಾಸ್ಥ್ಯಕ್ಕೆ ತೊಂದರೆಯಾಗುವಂತಹ, ಕೀಳು ಅಭಿರುಚಿ ಬೆಳೆಸುವಂತಹ ಮತ್ತಿತರವಾಗಿ ಮಹಿಳೆಯರ ಕುರಿತು ಕೀಳಾಗಿ ಚಿತ್ರಿಸುವ ರೀತಿಯಲ್ಲಿ ಮಹಿಳೆಯರ ಅಂಗಾಂಗ ಪ್ರದರ್ಶನ ಭಾವ, ಭಂಗಿಯ ತೋರಿಕೆಗಳು

'ಲೇಬಲ್' ಎಂದರೆ - ಕೈಬರಹದ, ಸೂಚಿಸಿದ, ದೃಢೀಕರಿಸಿದ, ಮುದ್ರಿಸಿದ, ಚಿತ್ರಿಸಿದ, ಅಂಟಿಸಿದ ಅಥವಾ ಮೇಲಿನಿಂದಲೇ ಕಾಣುವ ಯಾವುದೇ ಪೊಟ್ಟಣಗಳು ಆಗಬಹುದು.

'ಪೊಟ್ಟಣ' ಎಂದರೆ - ಪೆಟ್ಟಿಗೆ, ಕಾರ್ಟನ್, ಏನೂ ಆಗಬಹುದು.

ಇಂತಹ ಯಾವುದೇ ಪ್ರಕಟಣೆಗಳು ಸಾಮಾಜಿಕ ಒಳಿತಿಗಾಗಿ ತಂದಿದ್ದಾಗಿದ್ದರೆ ಅಥವಾ ಸಕ್ರಮವಾದ ಧಾರ್ಮಿಕ ಉದ್ದೇಶಗಳಾಗಿದ್ದರೆ, ಪುರಾತತ್ವ ಇಲಾಖೆಗೆ ಸಂಬಂಧಿಸಿದ ಯಾವುದೇ ಐತಿಹಾಸಿಕ ದಾಖಲೆಯಾಗಿದ್ದರೆ ಶಿಲ್ಪ ಕಲಾಕೃತಿಗಳು, ದೇವಾಲಯಗಳು, ಮೂರ್ತಿಗಳನ್ನು ಕೊಂಡೊಯ್ಯುವ ರಥಗಳು ಮುಂತಾಗಿ ಧಾರ್ಮಿಕ ಉದ್ದೇಶಗಳಿಗೆ ಬಳಕೆಯಾಗುವ ಸಾಧನಗಳು ಸಿನಿಮಾಟೊಗ್ರಫಿ ಕಾನೂನು 1952ರ ಎರಡನೇ ಭಾಗದ ಅಂಶಗಳಡಿ ಒಳಪಡುವ ಅಂಶಗಳು ಈ ನಿಷೇಧದ ವ್ಯಾಪ್ತಿಗೆ ಒಳಪಡುವುದಿಲ್ಲ.

ಈ ಕಾನೂನಿನಡಿಯಲ್ಲಿ ಸರ್ಕಾರದ ಆದೇಶದ ಮೇರೆಗೆ ನಿರ್ದೇಶಿಸಲ್ಪಟ್ಟ ಗೆಜೆಟೆಡ್ ಅಧಿಕಾರಿಗೆ ಆ ಪ್ರಕಟಣೆ, ಕರಪತ್ರ, ಪತ್ರಿಕೆ, ಚಿತ್ರ, ಜಾಹಿರಾತು ಮುಂತಾದ ಯಾವುದೇ ವಸ್ತುಗಳು ಈ ಕಾನೂನಿನ ಅಡಿಯಲ್ಲಿ ನಿಷೇಧಕ್ಕೊಳಪಡುವ ಅಂಶಗಳನ್ನು ಹೊಂದಿದ್ದಲ್ಲಿ ಅದನ್ನು ವಶಪಡಿಸಿಕೊಳ್ಳುವ ಅಧಿಕಾರವಿರುತ್ತದೆ.



ಇದೊಂದು ಪತ್ರಿಕೆಯ ಜಾಹೀರಾತು. ಇದೇನು? ಇದನ್ನು ಮೀರಿಸಿದ ಈ ಪತ್ರಿಕೆಯ ಜಾಹೀರಾತುಗಳು ರಾಜ್ಯದಲ್ಲಿ ರಾರಾಜಿಸುತ್ತಿವೆ. (ನೊಂದವರ ಪರ ದನಿ ಎತ್ತೀತೆ ಈ ಪತ್ರಿಕೆ?)

ಯಾವುದೇ ದಾಖಲೆ ಪತ್ರ, ರಿಜಿಸ್ಟರ್, ಪ್ರಕಟಣೆಗಳನ್ನು ಪರಿಶೀಲಿಸುವ ಅಧಿಕಾರವಿರುತ್ತದೆ.

ಯಾವುದೇ ಖಾಸಗಿ ವಾಸದ ಮನೆಯೊಳಗೆ ಪ್ರವೇಶ ಮಾಡುವಾಗ ವಾರಂಟ್ ಇಲ್ಲದೇ ಪ್ರವೇಶಿಸುವಂತಿಲ್ಲ.

ಅಧಿಕೃತ ಆದೇಶದನ್ವಯ ವಶಪಡಿಸಿಕೊಂಡ ಯಾವುದೇ ವಸ್ತುಗಳ ಕುರಿತಂತೆ ತಮ್ಮ ವಶದಲ್ಲಿಟ್ಟುಕೊಳ್ಳಲು ಅಗತ್ಯವಾದ ಅನುಮತಿ ಪಡೆಯಲು ತಕ್ಷಣ ಹತ್ತಿರದ ಮ್ಯಾಜಿಸ್ಟ್ರೇಟರ್‌ರವರಿಗೆ ಮಾಹಿತಿ ನೀಡಬೇಕು.

ಈ ಕಾನೂನಿನ ಉಲ್ಲಂಘನೆಗೆ ಮೊದಲ ಬಾರಿಯ ಅಪರಾಧಕ್ಕೆ ಎರಡು ವರ್ಷಗಳ ಸಜೆ ಮತ್ತು 2000ದವರೆಗಿನ ದಂಡ ವಿಧಿಸಬಹುದು. ಮುಂದುವರೆದ ಅಪರಾಧವಾದಲ್ಲಿ 6 ತಿಂಗಳಿಗೆ ಕಡಿಮೆ ಇಲ್ಲದ ಮತ್ತು 5 ವರ್ಷಗಳವರೆಗೆ ಮುಂದುವರೆಸಬಹುದಾದ ಸಜೆ ಮತ್ತು 10,000 ಕ್ಕೆ ಕಡಿಮೆ ಇಲ್ಲದ ದಂಡ ವಿಧಿಸಬಹುದಾಗಿದೆ. ದಂಡದ ಮೊತ್ತವನ್ನು 1 ಲಕ್ಷದವರೆಗೂ ವಿಧಿಸಬಹುದು.

ಈ ಕಾನೂನಿನಡಿಯಲ್ಲಿ ಅಪರಾಧವೆಂದು ಪರಿಗಣಿಸುವ ಕೃತ್ಯ ಯಾವುದೇ ಕಂಪನಿ/ಸಂಸ್ಥೆಗಳಿಂದ ನಡೆದಿದ್ದಲ್ಲಿ ಅಂತಹ ಒಂದು ಪ್ರಕಟಣೆಗೆ ಜವಾಬ್ದಾರರಾದ ವ್ಯಕ್ತಿಗಳನ್ನು ಗುರಿ ಮಾಡಬಹುದಾಗಿದೆ ಮತ್ತು ಆ ಕಂಪನಿಯನ್ನು ಜವಾಬ್ದಾರಿಯಾಗಿಸಬಹುದಾಗಿದೆ. ಹೀಗೆ ಹೊಣೆ ಹೊರಿಸಲ್ಪಟ್ಟ ವ್ಯಕ್ತಿ ಅಂತಹ ಒಂದು ಪ್ರಕಟಣೆ ತನ್ನ ಗಮನಕ್ಕೆ ಬಾರದೇ ಮುದ್ರಿಸಲ್ಪಟ್ಟಿದೆ ಎಂಬುದನ್ನು ಅಥವಾ ಅಂತಹ ಪ್ರಕಟಣೆಯನ್ನು ತಡೆಯಲು ತನ್ನಿಂದಾದ ಪ್ರಯತ್ನ ಮಾಡಿದ್ದೇನೆ ಎನ್ನುವುದನ್ನು ಸಾಬೀತುಪಡಿಸಿದರೆ ಶಿಕ್ಷಾರ್ಹರಾಗುವುದಿಲ್ಲ. ಕಂಪನಿಗಳ ಸಂದರ್ಭದಲ್ಲಿ ಕಂಪನಿಯ ಸಂಬಂಧಿಸಿದ ವ್ಯಕ್ತಿಗಳ ಗಮನದಲ್ಲಿದ್ದು, ಅನುಮತಿ ಪಡೆದು ಪ್ರಕಟಿಸಿದ್ದೆಂದು ಸಾಬೀತಾದಲ್ಲಿ ಕಾನೂನಿನನ್ವಯ ಶಿಕ್ಷಾರ್ಹರು.

ಇದೊಂದು ಜಾಮೀನು ಸಹಿತವಾದ ಅಪರಾಧವಾಗಿರುತ್ತದೆ.

ಕೇಂದ್ರ ಸರ್ಕಾರವು ಅಧಿಕೃತ ಸೂಚನೆಯ ಮೂಲಕ ನಿಯಮ ನಿಬಂಧನೆಗಳನ್ನು ಮಾಡಬಹುದು ಮತ್ತು ಹಾಗೆ ಮಾಡಿದ ನಿಯಮಗಳನ್ನು ಸಂಸತ್ತಿನಲ್ಲಿ ಮಂಡಿಸಿ ಅಂಗೀಕಾರ ಪಡೆಯಬೇಕು.

ಬಲವಾದ ಕಾನೂನು ಜಾರಿಯಿದೆ ಆದರೆ...

ಇಂತಹ ಒಂದು ಸಾಕಷ್ಟು ಬಲವಾಗಿರುವ ಕಾನೂನೊಂದು ಜಾರಿಯಲ್ಲಿದೆ. ಆದರೆ ನಮ್ಮ ಸುತ್ತೆಲ್ಲ ಕಾಣುವ ಜಾಹಿರಾತುಗಳು ಅದು ಪತ್ರಿಕೆಯಲ್ಲಿರಲಿ, ಸಂವಹನ ಮಾಧ್ಯಮವಿರಲಿ, ಗೋಡೆಗಳ ಫಲಕಗಳ ಮೂಲಕವಾಗಲಿ ಈ ಕಾನೂನಿನ ಕುರಿತು ಕಿಂಚಿತ್ತೂ ಗಮನವೇ ಇಲ್ಲದಂತೆ ರಾರಾಜಿಸುತ್ತಿವೆ. ಸರ್ಕಾರ ಅಥವಾ ಸರ್ಕಾರೇತರರ ಗಮನ ಕೂಡ ಗಂಭೀರವಾಗಿ ಅತ್ತ ಹರಿಯದ ಸ್ಥಿತಿಗೆ ಒಂದು ತಲುಪಿದ್ದೇವೆ. 80ರ ದಶಕದಲ್ಲಿ ರಸ್ತೆಗಳಲ್ಲಿ ಫಲಕ ಕೀಳುವ, ಪೋಸ್ಟರ್ ಹರಿಯುವ ದೊಡ್ಡ ಕಾರ್ಯಕ್ರಮವೇ ನಡೆಸುತ್ತಿದ್ದೆವು. ಈಗ ಯಾವುದನ್ನು ಎಲ್ಲಿಂದ ಹರಿಯುವುದು?

○

ವರುಷವೊಂದು ಕಳೆಯಿತು....

ಪ್ರಿಯ ಓದುಗರೇ,


ದುಡಿವ ಜನರ ಪ್ರಾಣ ಮಿತ್ರನ ಬಿಡುಗಡೆ ಸಮಾರಂಭ ನಡೆದು ಮೇ 27 ಕ್ಕೆ ಒಂದು ವರುಷ. ಅರೇ ಎಷ್ಟು ಬೇಗ. ಹೀಗೆ ಸರಿದುಹೋಯಿತು ಕಾಲ... ಮೇ 1 ರಿಂದಲೂ ಬಿಡುಗಡೆಯಾದ ಪ್ರಾಯೋಗಿಕ ಸಂಚಿಕೆಯಿಂದ ಇಲ್ಲಿಯವರೆಗೂ ಒಂದೊಂದು ಸಂಚಿಕೆಗಳನ್ನು ತಿರುವಿದರೆ ಈ ವರುಷ ಸವೆಸಿದ ಹಾದಿ ತೆಗೆದುಕೊಳ್ಳುತ್ತದೆ. ದೇಶದ - ರಾಜ್ಯದ, ಜಗದ ಪ್ರಮುಖ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ವಿದ್ಯಮಾನಗಳು ಅನಾವರಣಗೊಳ್ಳುತ್ತವೆ. ಪತ್ರಿಕೆ ನಾಡಿನ ಎಲ್ಲಾ ಪ್ರಗತಿಪರರ ಮನದ ಮೈಲುಗಲ್ಲು.

ಹೌದು! ಪತ್ರಿಕೆಯೇನೋ ನಿರಂತರ ಪ್ರಕಟವಾಗುತ್ತಿದೆ. ಆದರೆ ಹಲವಾರು ಸಮಸ್ಯೆಗಳು ನಡುವೆ ಪ್ರತಿ ತಿಂಗಳೋ ಅಥವಾ ಕೆಲವೊಮ್ಮೆ ಪ್ರತಿವಾರವೂ ಮುದ್ರಣದ ವೆಚ್ಚದ ಏರಿಕೆ, ಸಂಪನ್ಮೂಲ ಹೊಂದಿಸಲು ಸರ್ವ ಸಾಹಸ.

ಹೌದು, ನಮಗೆ ಕನಸುಗಳಿವೆ. ಪತ್ರಿಕೆ ಇನ್ನೂ ವೈವಿಧ್ಯಮಯವಾಗಬೇಕು, ವಿಶಿಷ್ಟವಾಗಿ ಹೆಚ್ಚು ಹೆಚ್ಚಾಗಿ ನಾಡಿನ ಜನರ ಕೈಗೆ ತಲುಪಬೇಕು. ಇದಕ್ಕೆ ನಿಮ್ಮ ಹಾರೈಕೆ ಇರಲಿ. ನಿಮ್ಮ ತನು-ಮನ-ಧನವಿರಲಿ. ಕಲೆತು ಹೆಜ್ಜೆ ಹಾಕುವ ಸಂಕಲ್ಪ ನಮ್ಮೆಲ್ಲರದು. ಸಾಮೂಹಿಕ ಪ್ರಯತ್ನಗಳೇ ನಮ್ಮ ಶಕ್ತಿ, ಅದು ಜನಶಕ್ತಿ.

ಸಂ.

ಇದು ಕನ್ನಡದ ಒಂದು ಮಹತ್ವದ ಕತಾ ಸಂಕಲನ. 'ದೇವರುಗಳ ರಾಜ್ಯದಲ್ಲಿ' ಅಂತ. ಬೋಳುವಾರು ಮಹಮದ್ ಕುಂಞಿ ಅವರದ್ದು. ಅದೇ ಹೆಸರಿನ ಕತೆಯಂತೂ ಒಂದು ವಿಶಿಷ್ಟ ಕಲಾಕೃತಿಯೇ ಸರಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ 'ಜನಪ್ರಿಯ ಪುಸ್ತಕ ಮಾಲೆ' ಯ ಕೃತಿಯಿಂದ ನಿಮಗಾಗಿ ಒಂದು ಕತೆ.



ದೇವರುಗಳ ರಾಜ್ಯದಲ್ಲಿ

ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿ ತಾಯಿಯನ್ನೂ ಸೃಷ್ಟಿಸಿದನು. ಆ ಬಳಿಕ ಬೆಳಕಾಗಲಿ ಎಂದನು; ಬೆಳಕಾಯಿತು. ಕತ್ತಲಾಗಲಿ ಎಂದನು; ಕತ್ತಲಾಯಿತು. ಬಹಳ ಸಂತೋಷಪಟ್ಟ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನೂ, ಅವನಿಗೆ ಸಿರಿವಂತಿಕೆ ಮತ್ತು ಬಡತನಗಳನ್ನೂ, ಸುಖ ಮತ್ತು ದುಃಖಗಳನ್ನೂ, ಆರೋಗ್ಯ ಮತ್ತು ರೋಗಗಳನ್ನೂ ಒಂದೊಂದಾಗಿ ಅನುಗ್ರಹಿಸಿದನು. ಕೊನೆಯಲ್ಲಿ ನೆಲದ ಮೇಲೆಲ್ಲಾ ದೇವಾಲಯಗಳನ್ನೂ, ಇಗರ್ಜಿಗಳನ್ನೂ, ಮಸೀದಿಗಳನ್ನೂ ಸೃಷ್ಟಿ ಮಾಡಿ ಮುಂದಿನದೆಲ್ಲವೂ ತನ್ನ ಅಣತಿಯಂತೆಯೇ ನಡೆಯುತ್ತಿರಲಿ ಎಂದು ಹೇಳಿ ವಿರಮಿಸಿಕೊಂಡನು.

ಎಷ್ಟೋ ಮಿಲಿಯ ವರ್ಷಗಳ ಬಳಿಕ ಈ ದೇವರ ನಾಡಿನಲ್ಲಿ ಒಂದು ಮರದ ಕಾರ್ಖಾನೆಯ ಆರಂಭವಾಯಿತು. ಕಾರ್ಖಾನೆಯ ಮಾಲೀಕನು ಬಹಳ ಪುಣ್ಯವಂತನಾಗಿದ್ದನು. ಅವನ ಕಾರ್ಖಾನೆಯಲ್ಲಿ ಸುಮಾರು ಇನ್ನೂರು ಜನರು ಕೆಲಸ ಮಾಡುತ್ತಿದ್ದರು. ಮಾಲೀಕನು ಆಗಾಗ ಅನ್ನ ಸಂತರ್ಪಣೆಗಳನ್ನೂ, ದೇವರ ಉತ್ಸವಗಳನ್ನೂ ಸಂಭ್ರಮದಿಂದ ಏರ್ಪಡಿಸುತ್ತಿದ್ದನು. ಈ ಪುಣ್ಯವಂತ ಮಾಲೀಕನ ಮರದ ಕಾರ್ಖಾನೆಯಲ್ಲಿ ಜೋಸೆಫ್ ಡಿ'ಕಾಸ್ಟ ಎಂಬ ಯುವಕನು ದಿನವೊಂದಕ್ಕೆ ನಾಲ್ಕು ರೂಪಾಯಿ ಕೂಲಿ ಸಂಪಾದಿಸುತ್ತಿದ್ದನು. ದೇವರ ಇಚ್ಛೆಯಂತೆ ಅವನು ಬಡವನೂ, ಆರೋಗ್ಯವಂತನೂ ಆಗಿದ್ದನು. ಅವನ ತಂದೆತಾಯಿಗಳು ಸ್ವರ್ಗದಲ್ಲಿದ್ದರು.

ದೇವರು ಹೇಳಿದನು; "ಅದು ಬೀಳಲಿ" ಎಂದು, ಮರದ ದೊಡ್ಡ ದಿಮ್ಮಿಯೊಂದು ಉರುಳಿಬಿತ್ತು. ಜೋಸೆಫ್ ಡಿ'ಕಾಸ್ಟನನ್ನು ಸರ್ಕಾರಿ ಆಸ್ಪತ್ರೆಗೆ ಹೊತ್ತುಕೊಂಡು ಹೋದರು. ಅವನು ಪ್ರಜ್ಞೆ ಕಳೆದುಕೊಂಡಿದ್ದನು. ದೇವರು ದಯಾಮಯನು; ಅವನಿಗೆ ಪ್ರಜ್ಞೆ ಮರಳಿತು. ತನ್ನ ಬಲಕಾಲನ್ನು ಮೊಣಕಾಲ ಬಳಿ ಕತ್ತರಿಸಿದ್ದಾರೆ ಎಂದು ಅರಿತುಕೊಂಡನು. ನೋವು ಮತ್ತು ದುಃಖದಿಂದ ಅಳುತ್ತಾ ಮಲಗಿದನು. ಮರದ ಕಾರ್ಖಾನೆಯವರು ಪರಿಹಾರವೆಂದು ಐನೂರು ರೂಪಾಯಿಗಳನ್ನು ಕೊಟ್ಟಿದ್ದರು. ನಾಲ್ಕು ತಿಂಗಳಲ್ಲಿ ಖರ್ಚಾಯಿತು; ಮರುದಿನ ಕುಂಟ ಜೋಸೆಫ್‌ನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿದರು.

ದೇವರ ಮಹಿಮೆ ಅಪಾರ; ಜೋಸೆಫ್ ಕುಂಟನಾಗಿದ್ದರೂ ಅವನಿಗೆ ಹಿಂದಿನಂತೆಯೇ ಹಸಿವೆಯಾಗುತ್ತಿತ್ತು. ಕೆಲಸ ಮಾಡಲು ಸಾಧ್ಯವಿಲ್ಲವಾದರೂ ಅವನು ಸಂಪಾದಿಸುವುದು ಅಗತ್ಯವಾಗಿತ್ತು. ಲೋಕದಲ್ಲಿ ಇಂಥವರಿಗಾಗಿಯೇ ಕೆಲವು ಅನುಕೂಲತೆಗಳನ್ನು ಉಂಟು ಮಾಡಲಾಗಿತ್ತು. ಭಿಕ್ಷೆ ಬೇಡಿಕೊಂಡು ಅವರು ಬದುಕುವಂತೆ ನೋಡಿಕೊಳ್ಳಲಾಗುತ್ತಿತ್ತು. ಆದಕ್ಕಾಗಿಯೇ ಸಹಸ್ರಾರು ಸಿರಿವಂತರನ್ನೂ, ಅವರ ಹೃದಯಗಳಲ್ಲಿ ಕರುಣೆಯನ್ನೂ ದೇವರು ಉಂಟು ಮಾಡಿದ್ದನು. ಸಾವಿರಾರು ಸಂಘ ಸಂಸ್ಥೆಗಳೂ, ಅನಾಥಾಲಯಗಳೂ ಭಿಕ್ಷುಕರನ್ನು ಸ್ವಾಗತಿಸುತ್ತಿದ್ದವು.

ಕುಂಟ ಜೋಸೆಫ್‌ನ ಹ[illegible]ದಲ್ಲಿ ನಾಚಿಕೆಯಿತ್ತು. ಆದ್ದರಿಂದ ಅವನಿಗೆ ಹುಟ್ಟೂರಿನಲ್ಲಿ ಭಿಕ್ಷೆ ಬೇಡಲು ಸಾಧ್ಯವಾಗಲಿಲ್ಲ. ಆದಕ್ಕಾಗಿ ಅವನು ದೊಡ್ಡ ಪಟ್ಟಣವೊಂದಕ್ಕೆ ಹೋಗುವ ಬಸ್ಸು ಹತ್ತಿದನು.

ಅಪರಿಚಿತ ಪಟ್ಟಣದ ದೊಡ್ಡ ಬಸ್ ಸ್ಟ್ಯಾಂಡಿನಲ್ಲಿಳಿದ ಜೋಸೆಫ್ ಮೊದಲು ಅದೇ ಸೂರ್ಯನನ್ನು ನೋಡಿದನು. ತನ್ನೂರಿನಲ್ಲೂ ಅವನು ಹೀಗೇಯೇ ಹೊಳೆಯುತ್ತಿದ್ದನು. ದೇವರು ದಯಾಮಯನು-ಸೂರ್ಯನಿಗಿಂತ ಸ್ವಲ್ಪ ಕೆಳಗೆ ಸೈಂಟ್ ಪೀಟರ್ ಇಗರ್ಜಿಯ ಗೋಪುರದ ತಲೆಯಲ್ಲಿ ಪವಿತ್ರವಾದ ಸಿಮೆಂಟಿನ ದೊಡ್ಡ ಶಿಲುಬೆಯನ್ನು ನೋಡಿದನು. ಸ್ವರ್ಗಲೋಕದಲ್ಲಿರುವ ತಂದೆಯನ್ನು ಅಭಿನಂದಿಸಿದ ಕುಂಟ ಜೋಸೆಫ್ ಇಗರ್ಜಿಯತ್ತ ಕಾಲೆಳೆದನು.

ಕೇವಲ ಆರು ತಿಂಗಳಲ್ಲಿ ಕುಂಟ ಜೋಸೆಫ್ ಹೊಸ ಬದುಕಿಗೆ ಒಗ್ಗಿಕೊಂಡನು. ದೇವರ ಆಜ್ಞೆಯಂತೆ ಕುಂಟನಾಗಿರುವ ತಾನು ಭಿಕ್ಷೆಬೇಡುವುದು ನಾಚಿಕೆಯ ಸಂಗತಿಯಲ್ಲ ಎಂದು ಮನದಟ್ಟು ಮಾಡಿಕೊಂಡನು. ಇಗರ್ಜಿಯ ಗೇಟಿನ ಬಳಿಯಲ್ಲಿ ಕಾಣಸುವ ಎಲ್ಲ ಮನುಷ್ಯರನ್ನೂ ತಡೆದು "ದೇವರ ಹೆಸರಿನಲ್ಲಿ ಕುಂಟನಿಗೆ ಹತ್ತು ಪೈಸೆ ದಾನ ಮಾಡಿರಿ" ಎಂದು ಅಧಿಕಾರದಿಂದಲೇ ಬೇಡತೊಡಗಿದನು. ಹಗಲು-ರಾತ್ರಿಗಳು ಕರಾರುವಕ್ಕಾಗಿ ಅದಲುಬದಲಾಗುತ್ತಿದ್ದವು. ಇಗರ್ಜಿಯ ಕಾವಲುಗಾರ 'ಜಾನ್' ಕುಂಟ ಜೋಸೆಫ್‌ನ ಗೆಳೆಯನಾಗಿ ಬಿಟ್ಟಿದ್ದನು. ಫಾದರ್ ಪಿರೇರರವರಿಗೆ ಹೇಳಿ ಕುಂಟನಿಗೆ ಇಗರ್ಜಿಯ ಗಂಟೆ ಗೋಪುರದ ಪಕ್ಕದಲ್ಲಿದ್ದ ಕಲ್ಲಿನ ಕಟ್ಟಡದಲ್ಲಿ ಮಲಗಲು ಜಾಗ ಕೊಡಿಸಿದ್ದನು. ಕಲ್ಲಿನ ಸಣ್ಣ ಕಟ್ಟಡದೊಳಗಿದ್ದ ಶವವಾಹಕ ಗಾಡಿಯನ್ನು ಮೂಲೆಗೆ ತಳ್ಳಿದರೆ ಕೋಣೆಯೊಳಗೆ ಸಾಕಷ್ಟು ಜಾಗವಿತ್ತು. ವೃತ್ತಿಯಲ್ಲಿ ಪಳಗಿದಂತೆ ಕುಂಟ ಜೋಸೆಫ್ ತನ್ನ ದಿನಚರಿಯಲ್ಲಿ ಕೆಲವೊಂದು ಲಾಭದಾಯಕ ನಿಯಮಗಳನ್ನು ಮಾಡಿಕೊಂಡನು. ಆದಿತ್ಯವಾರ ಮುಂಜಾನೆ ಮಾತ್ರ ಇಗರ್ಜಿಯ ಎದುರು ಬಟ್ಟೆ ಹಾಸಿ ಕುಳಿತುಕೊಳ್ಳುತ್ತಿದ್ದನು. ಉಳಿದ ದಿನಗಳಲ್ಲಿ ಮಧ್ಯಾಹ್ನದವರೆಗೆ ಬಸ್ ಸ್ಟ್ಯಾಂಡಿನಲ್ಲೂ, ಸಂಜೆಯಾದ ಬಳಿಕ ಸಿನಿಮಾ ಥಿಯೇಟರ್‌ಗಳ ಟಿಕೇಟು ಕೊಡುವ ಜಾಗದಲ್ಲೂ ನಿಂತು ಸಂಪಾದಿಸುತ್ತಿದ್ದನು.

ದೇವರ ರಾಜ್ಯದಲ್ಲಿ ಕಾಲಕಾಲಕ್ಕೆ ಮಳೆ, ಪ್ರವಾಹ, ಯುದ್ಧ, ಸಂಗೀತ ಇತ್ಯಾದಿಗಳು ನಡೆಯುತ್ತಲೇ ಇದ್ದವು. ದೇವರು ಎಲ್ಲವನ್ನೂ ನಿಯಂತ್ರಿಸುವವನಾಗಿದ್ದನು. ಸುಳ್ಳು, ಕಳವು, ಹಾದರ ಇತ್ಯಾದಿಗಳಿಗಾಗಿಯೇ ಅವನು ನೀತಿ ಶಾಸ್ತ್ರಗಳನ್ನು ರಚಿಸಿಕೊಟ್ಟಿದ್ದನು. ಭಿಕ್ಷುಕರನ್ನು ದೇವರು ಅತಿಯಾಗಿ ಪ್ರೀತಿಸುವುದರಿಂದಾಗಿ ಕುಂಟ ಜೋಸೆಫ್‌ನು ಸುಖವಾಗಿಯೇ ಇದ್ದನು; ಹೆಣಗಳನ್ನು ನೋಡುವವರೆಗೂ....

ದೇವರು ಹೇಳಿದನು-ಎರಡು ಮರಣಗಳಾಗಲಿ; ಇಬ್ಬರು ಸತ್ತು ಹೋದರು. ಒಂದು ದಿನ ಮುಂಜಾನೆ ಎರಡು ಅನಾಥ ಶವಗಳು ಆ ದೊಡ್ಡ ಪಟ್ಟಣದಲ್ಲಿ ಕಾಣಸಿಕೊಂಡವು. ಬಸ್‌ಸ್ಟ್ಯಾಂಡಿನ ಟಿಕೇಟು ಕೊಡುವ ಕಿಟಕಿಯ ಎದುರಿನ ಸಿಮೆಂಟ್ ಕಟ್ಟೆಯ ಮೇಲೆ ಒಂದು ಹೆಣವೂ, ಪಕ್ಕದ ಅಗಲ ರಸ್ತೆಯಲ್ಲಿರುವ 'ಬದರಿಯಾ ಕ್ಲಾತ್ ಸೆಂಟರ್'ನ ಜಗಲಿಯ ಮೇಲೆ ಮತ್ತೊಂದು ಹೆಣವೂ ಬಿದ್ದುಕೊಂಡಿರುವುದನ್ನು ಜನರು ನೋಡಿದರು.

ಕುಂಟ ಜೋಸೆಫನು ಮೊದಲು ಬಸ್‌ಸ್ಟ್ಯಾಂಡಿನ ಶವವನ್ನು ನೋಡಿದನು. ಶವ ತನ್ನ ಜಾತಿಯದ್ದು ಎಂದು ಅವನಿಗೆ ತಕ್ಷಣ ಗೊತ್ತಾಯಿತು. ಬೇರೆ ಜಾತಿಯವರು ಕುತ್ತಿಗೆಗೆ ಪವಿತ್ರವಾದ ಶಿಲುಬೆಯನ್ನು ಹಾಕಿಕೊಳ್ಳಬೇಕೆಂಬ ಒತ್ತಾಯವಿಲ್ಲ ವೆಂಬುದನ್ನು ಸಣ್ಣವ ನಿರುವಾಗಲೇ ಅರಿತಿದ್ದನು. ಅಂಗಾತ ಮಲಗಿದ್ದ ಶವದ ತಲೆಯ ಪಕ್ಕದಲ್ಲಿ ಪ್ಲಾಸ್ಟಿಕ್ ಚೀಲವೊಂದು ಕೂತಿತ್ತು. ಅದರ ಬಾಯಿಯಿಂದ ಅಲುಮಿನಿಯಂ ತಟ್ಟೆಯೊಂದು ಹೊರಗೆ ನೋಡುತ್ತಿತ್ತು. ನೆಲದ ಮೇಲೆ ಊರುಗೋಲು ಬಿದ್ದುಕೊಂಡಿತ್ತು. ಶವದ ಬಲಕಾಲಿನ ಅರ್ಧ ಕರಗಿದ ಹೆಬ್ಬೆರಳ ಮೇಲೆ ಐದು ಅಥವಾ ಆರು ಹಸಿರು ನೊಣಗಳು ಕೂತು ಏಳುವ ಆಟ ನಡೆಸಿದ್ದವು. ಕೈಗಳಲ್ಲಿ ಬೆರಳುಗಳೇ ಉಳಿದಿರಲಿಲ್ಲ. ಹೆಣದ ಸುತ್ತಲೂ ಕೋಟೆ ಕಟ್ಟಿದ ಜನರು ಸಿಗರೇಟು-ಬೀಡಿ ಸೇದುತ್ತಾ ಸಾವಿನ ಬಗ್ಗೆ, ಸಾವಿನ ನಂತರದ ಬದುಕಿನ ಬಗ್ಗೆ ತಮ್ಮ ತಮ್ಮ ಅನುಭವದ ಮಾತುಗಳನ್ನು ಹಂಚಿಕೊಳ್ಳುತ್ತಾ, ನಡುನಡುವೆ ತಾವು ಹೋಗಲಿರುವ ಬಸ್ಸು ಬಂತೇ ಎಂದು ಕತ್ತುಚಾಚುತ್ತಾ ಲೊಚಗುಟ್ಟುತ್ತಿದ್ದರು.

ಯೇಸು ದಯಾಮಯನು-ತನಗಿಂತಹ ಸಾವು ಬಾರದಿರಲಿ" ಎಂದು ಕುಂಟ ಜೋಸೆಫನು ಎದೆಯಲ್ಲಿದ್ದ ಶಿಲುಬೆ ತಡವಿಕೊಂಡು ಅನುಮಾನದಿಂದಲೇ ಪ್ರಾರ್ಥಿಸಿದನು. ಅಷ್ಟರಲ್ಲಿಯೇ ಮತ್ತೊಂದು ಹೆಣ ಬಸ್‌ಸ್ಟ್ಯಾಂಡಿನಲ್ಲಿ ಸುದ್ದಿಯಾಗಲಾರಂಭಿಸಿತ್ತು. ದೇವರ ಆಟಕ್ಕೆ ಭಯಪಡುತ್ತಾ ಕುಂಟ ಜೋಸೆಫನು ಹೊಸ ಹೆಣ ನೋಡಲು ಕಾಲೆಳೆದನು.

'ಬದರಿಯಾ ಕ್ಲಾತ್ ಸೆಂಟರ್' ನ ಎದುರಿನಲ್ಲಿ ಜಾತ್ರೆ ಸೇರಿತ್ತು. ಹೆಣದ ಹೊಟ್ಟೆ ನೋಡಿದ ತಕ್ಷಣ ಜೋಸೆಫ್‌ನು ತೀರ್ಪು ಕೊಟ್ಟನು-ಹಸಿವಿನಿಂದಾದ ಮರಣ. ಹೆಣದ ಎದುರು ನಿಂತಿದ್ದವರು ಒಳಗೆ ಕುಳಿತಿದ್ದ ಸಾಹುಕಾರರ ಗುಣಗಾನ ಮಾಡುತ್ತಿದ್ದರು. ಸಾಹುಕಾರರಿಗೆ ಹೆಣದ ಪರಿಚಯ ಇದೆ. ಕಳೆದ ಆರು ವರ್ಷಗಳಿಂದ ಮುದುಕ ಇದೇ ಜಗಲಿಯಲ್ಲಿ ರಾತ್ರಿ ಮಲಗುತ್ತಿದ್ದ. ಈ ಭಿಕ್ಷುಕ ಬಂದ ಬಳಿಕ ಸಾಹುಕಾರರು ಅಂಗಡಿ ಕಾವಲಿಗಿದ್ದ ಆಳನ್ನು ತೆಗೆದುಹಾಕಿದ್ದರು. ಹೆಣ ಜೀವಂತವಿದ್ದಾಗ ಹತ್ತು ದಿನ ಉಪವಾಸವಿದ್ದರೂ ಒಂದೇ ಒಂದು 'ಜುಮ್ಮಾ ನಮಾಜು' ತಪ್ಪಿಸಿಕೊಂಡವನಲ್ಲ. ರಂಜಾನ್ ತಿಂಗಳು ಮಾತ್ರವಲ್ಲದೆ ಬೇರೆ ಕೆಲವು ದಿನಗಳಲ್ಲೂ ಉಪವಾಸವಿರುತ್ತಿದ್ದ ಭಿಕ್ಷುಕರ ಜಾತಿಯಲ್ಲಿಯೇ ಇಷ್ಟು ಪುಣ್ಯವಂತರು ಇನ್ನು ಹುಟ್ಟಲಿಕ್ಕಿಲ್ಲ ಎಂದು ಸಾಹುಕಾರರೇ ಸರ್ಟಿಫಿಕೇಟು ನೀಡಿದ್ದಾರೆ. ಒಟ್ಟಿನಲ್ಲಿ ಇಂಥ ಸಾವಿಗೂ ಭಾಗ್ಯ ಬೇಕು...ಇತ್ಯಾದಿ.

ಸಾಹುಕಾರರು ಶ್ರೀಮಂತರಾದರೂ ಐದು ಬಾರಿ ನಮಾಜು ಮಾಡುವರು. ಅವರಿಗೆ ಪರಲೋಕದ ಬಗ್ಗೆ ಭಯವಿತ್ತು. ತನ್ನ ಸಂಪಾದನೆಯಲ್ಲಿ ಒಂದಂಶವನ್ನು ದಾನ ಧರ್ಮಗಳಿಗಾಗಿಯೇ ವಿನಿಯೋಗಿಸುತ್ತಿದ್ದರು. ಶವ ಸಂಸ್ಕಾರದ ಕೆಲಸವು ಪುಣ್ಯ ಕಾರ್ಯವೆಂಬುದು ಅವರಿಗೆ ತಿಳಿದಿತ್ತು. ಅವರೇ ಮುಂದೆ ನಿಂತು ಎಲ್ಲ ಏರ್ಪಾಡು ಮಾಡಿದರು. ಅವರು ಜಮಾತ್‌ನ ಅಧ್ಯಕ್ಷರೂ ಆಗಿರುವುದರಿಂದ ಮಸೀದಿಯಿಂದ ಶವ ಒಯ್ಯುವ ಮಂಚವನ್ನು ಕೂಡಲೇ ತರಿಸಿದರು. ಮೆಟ್ಟಲು ಬಳಿಯಲ್ಲಿ ಕಾಣಿಸಿಕೊಂಡ ಪೋಲೀಸಿನವನೊಂದಿಗೆ ಗುಸು ಗುಸು ಮಾತನಾಡಿ ಕಳುಹಿಸಿದರು. ನಾಮುಂದು-ತಾಮುಂದು ಎಂದು ಹೆಗಲು ಕೊಡಬಂದ ಪುಣ್ಯಾರ್ಥಿಗಳಿಗೆ ಸಾಹುಕಾರರೇ ಮಂಚವನ್ನು ಸಂತೋಷದಿಂದ ಎತ್ತಿಕೊಟ್ಟರು. ಆರು ಮೀಟರ್ ಬಿಳಿ ಬಟ್ಟೆಯನ್ನು ಸ್ವತಃ ತಮ್ಮ ಕೈಯ್ಯಾರೆ ಹರಿದು ಹುಡುಗನೊಬ್ಬನೊಡನೆ ಕೊಟ್ಟು ಕಳುಹಿಸಿದರು.

ಎದುರಿನ ಸರ್ಕಲ್‌ನಲ್ಲಿ ಹೆಣದ ಮೆರವಣಿಗೆ ಮರೆಯಾಗುವವರೆಗೂ ಕುಂಟ ಜೋಸೆಫ್‌ನು ಸಾಹುಕಾರರನ್ನು ಅಭಿಮಾನದಿಂದ ನೋಡುತ್ತಾ ನಿಂತಿದ್ದನು. ಬಳಿಕ ಏನನ್ನೋ ನಿರ್ಧರಿಸಿಕೊಂಡವನಂತೆ ಬಸ್ ಸ್ಟ್ಯಾಂಡಿನ ಹೆಣದ ಬಳಿಗೆ ಕೋಲೂರುತ್ತಾ ಕುಂಟಿದನು.

ಹೆಣ ಹಾಗೆಯೇ ಮಲಗಿತ್ತು. ನೊಣಗಳ ಸಂಖ್ಯೆ ನೂರಕ್ಕೂ ಜಾಸ್ತಿಯಾಗಿತ್ತು. ನೊಣಗಳ ಭಾರಕ್ಕೆ ಕಾಲಿನ ಮೃದು ಬೆರಳುಗಳು ಸಣ್ಣದಾಗುತ್ತಿದ್ದವು. ಕುಂಟ ಜೋಸೆಫ್‌ನು ತನ್ನ ಜೋಳಿಗೆಯಿಂದ ತನ್ನ ಹಾಸುಬಟ್ಟೆಯನ್ನು ಹೊರತೆಗೆದು ಹೆಣದ ಮುಖ ಮುಚ್ಚಿದನು. ಹೆಣದ ಎದೆಯಲ್ಲಿದ್ದ ಪವಿತ್ರ ಶಿಲುಬೆ ಈಗ ಕಾಣಿಸುತ್ತಿರಲಿಲ್ಲ. ಹೊಸ ಹೊಸ ಜನರು ಹೆಣದ ಬಳಿಗೆ ಬಂದು ನೊಣಗಳನ್ನು ಕಂಡು ಮರಳುತ್ತಿದ್ದರು. ಕುಂಟ ಜೋಸೆಫನು ಪಕ್ಕದಲ್ಲೇ ಇದ್ದ ಕಂಭಕ್ಕೆ ಒರಗಿ ನಿಂತನು. ಅವನಿಗೆ ಭಯವಾಗುತ್ತಿತ್ತು. ತನ್ನ ಸಾವು ಕೂಡಾ ಹೀಗೆಯೇ ಆಗಿ ಹೋದರೆ? ಎಂಬ ಪ್ರಶ್ನೆ ಪದೇ ಪದೇ ಎದೆಯನ್ನು ಹಿಂಡುತ್ತಿತ್ತು. ತನ್ನೆದೆಯ ಮೇಲೆ ಮಲಗಿದ್ದ ಪವಿತ್ರ ಶಿಲುಬೆಯನ್ನು ಬಲವಾಗಿ ಅದುಮಿ ಸ್ವರ್ಗಲೋಕದಲ್ಲಿರುವ ತಂದೆಯನ್ನು ಭಯದಿಂದಲೇ ಸ್ಮರಿಸಿಕೊಂಡನು. ಬದರಿಯಾ ಕ್ಲಾತ್ ಸೆಂಟರ್‌ನ ಪುಣ್ಯವಂತ ಹೆಣದ ಬಗ್ಗೆ ಮತ್ತು ಹೆಣ ಹೊರಿಸಿದ ಸಾಹುಕಾರರ ಬಗ್ಗೆ ಅಸೂಯೆಗೊಂಡನು. ಹಸಿರು ನೊಣವೊಂದು ಮೊಂಡಾದ ಬಲಕಾಲ ಮೇಲೆ ಕಚಗುಳಿಯಿಟ್ಟಿತು. ಕುಂಟ ಜೋಸೆಫನು ನವಿರಾಗಿ ನಡುಗಿದನು. ತನ್ನ ಖಾಯಂ ದಾನಿಗಳಲ್ಲಿ ಒಬ್ಬರಾಗಿರುವ 'ಲೋಬೋ' ರವರನ್ನು ಕರೆದುಕೊಂಡು ಬರಲು ಹೊರಟನು.

ದೇವರು ಪರಿಶುದ್ಧನಾಗಿದ್ದನು. ಅವನು ಪಾಪಿಗಳನ್ನು ಕ್ಷಮಿಸುತ್ತಿದ್ದನು. ಅವನು ಹೇಳಿದ್ದನು-"ಸತ್ತವರಿಗಾಗಿ ಅಳಬೇಡಿರಿ! ಬಡಕೊಳ್ಳಬೇಡಿರಿ. ಸತ್ತವನು ಮತ್ತೆ ಹಿಂತಿರುಗನು; ಅಳಬೇಡಿರಿ. ನನ್ನ ಆಜ್ಞೆಗಳನ್ನು ಮನಃಪೂರ್ವಕವಾಗಿ ನಡೆಸಿರಿ."

ಆದರೂ ಕುಂಟ ಜೋಸೆಫನು ಅಳುತ್ತಿದ್ದನು. ಏದುರಿಸು ಬಿಡುತ್ತಾ ಲೋಬೋರವರಿಗೆ ಹೆಣಗಳ ಕತೆ ಹೇಳುತ್ತಿದ್ದನು. ಬಸ್‌ಸ್ಟ್ಯಾಂಡಿನ ಹೆಣದ ಕುತ್ತಿಗೆಯಲ್ಲಿರುವ ಪವಿತ್ರ ಶಿಲುಬೆ ಮತ್ತು ಬದರಿಯಾ ಕ್ಲಾತ್ ಸೆಂಟರ್‌ನ ಸಾಹುಕಾರರು ತರಿಸಿದ ಶವದ ಮಂಚದ ಬಗ್ಗೆ ಹೇಳುವಾಗ ಬಿಕ್ಕಳಿಸುತ್ತಿದ್ದನು. ಇದು ನಮ್ಮ ಜಾತಿಯ ಮರ್ಯಾದೆಯ ಪ್ರಶ್ನೆ ಎಂಬುದನ್ನೂ ಸೂಚ್ಯವಾಗಿ ಹೇಳಿದನು.

ದೇವರ ರಾಜ್ಯದಲ್ಲಿ ಶರಾಬು ಅಂಗಡಿಯೊಂದನ್ನೂ ತೆರೆದು ಸುಖವಾಗಿದ್ದ ಲೋಬೋರವರು ಜೋಸೆಫನು ಹೇಳುವುದನ್ನೆಲ್ಲಾ

→

ಕೇಳುತ್ತಾ ಎತ್ತರದ ತಿರುಗು ಕುರ್ಚಿಯಲ್ಲಿ ಓಲಾಡುತ್ತಿದ್ದರು. ಹಿಂದಿನ ದಿನದಲ್ಲಿ ಬಹಳ ವ್ಯಾಪಾರವಾಗಿದ್ದುದರಿಂದ ಲೋಬೋರವರು ದೇವರ ಅನುಗ್ರಹಕ್ಕಾಗಿ ಪ್ರತಿಯೊಂದು ನೋಟು ಎಣಿಸುವಾಗಲೂ ಕೃತಜ್ಞತೆ ಅರ್ಪಿಸುತ್ತಿದ್ದರು. ನೋಟಿನ ಕಟ್ಟುಗಳಿಗೆ ಸರಿಯಾದ ಅಳತೆಯ ರಬ್ಬರ್ ಬ್ಯಾಂಡುಗಳು ಅವರಲ್ಲಿ ಧಾರಾಳವಾಗಿದ್ದವು. ನೋಟುಗಳ ಕಟ್ಟುಗಳನ್ನು ಮಟ್ಟ ಮಾಡಲು ಮೇಜಿಗೆ ಕುಟ್ಟುವಾಗ ಅವರಿಗೆ ಬಹಳ ಸಂತೋಷವಾಗುತ್ತಿತ್ತು. ಜೋಸೆಫ್‌ನ ಮಾತುಗಳು ಮುಗಿಯುವಷ್ಟರಲ್ಲಿ ಲೋಬೋರವರು ಎಲ್ಲ ನೋಟುಗಳನ್ನೂ ಎಣಿಸಿ ಬಿಟ್ಟಿದ್ದರು. ಬಳಿಕ ಅವರು ಚಿಲ್ಲರೆ ನಾಣ್ಯಗಳನ್ನು ಬೇರೆ ಬೇರೆಯಾಗಿ ಆರಿಸುತ್ತಾ ಮೇಜಿನ ಮೇಲೆ ಗೋಪುರ ನಿರ್ಮಿಸಲಾರಂಭಿಸಿದರು. ಕುಂಟ ಜೋಸಫನು ಮೇಜಿನ ಎದುರು ಬಹಳ ಹೊತ್ತು ನಿಂತಿದ್ದನು. ಅವನ ಎಡಕಾಲು ಮತ್ತು ಎರಡೂ ಕಂಕುಳುಗಳು ನೋಯಲಾರಂಭಿಸಿದವು. ಎಲ್ಲ ನಾಣ್ಯಗಳನ್ನೂ ಬಟ್ಟೆಯ ಚೀಲವೊಂದಕ್ಕೆ ಸುರಿದು ನಾಜೂಕಾಗಿ ಚೀಲದ ಬಾಯಿ ಬಿಗಿದ ಲೋಬೋರವರು ತಲೆಯೆತ್ತಿ ಕುಂಟ ಜೋಸೆಫನ ಮುಖ ನೋಡಿ ಮುಗುಳುನಕ್ಕರು; ಮತ್ತು ಹೇಳಿದರು, "ಹಣ ಹೊರುವುದು ನನ್ನ ಕೆಲಸವಲ್ಲ. ಅದಕ್ಕೆ ಸರ್ಕಾರದವರಿದ್ದಾರೆ. ಅವರು ಹಣ ಹೊತ್ತರೂ ಅದರ ಪುಣ್ಯದ ಭಾಗ ನನಗೆ ಸೇರಿಯೇ ಸೇರುತ್ತದೆ. ಯಾಕೆಂದರೆ ನಾನು ತಿಂಗಳಿಗೆ ಹದಿನೈದು ಸಾವಿರದಷ್ಟು ಟ್ಯಾಕ್ಸ್ ತುಂಬ್ತೇನೆ. ಎಷ್ಟು?"

ಕುಂಟ ಜೋಸೆಫನ ಕಣ್ಣುಗಳು ಬೆಂಕಿಯಂತಾದವು. ಲೋಬೋರವರನ್ನೇ ಒಂದು ಕ್ಷಣ ದುರುಗುಟ್ಟಿ ನೋಡಿದನು. ಲೋಬೋರವರ ತುಟಿಗಳಲ್ಲಿ ನಗುವಿನ ತುಣುಕುಗಳು ಹಾಗೆಯೇ ಉಳಿದಿದ್ದವು. ಊರುಗೋಲನ್ನು ಬಲವಾಗಿ ನೆಲಕ್ಕೆ ಊರುತ್ತಾ ಅಂಗಡಿಯ ಮೆಟ್ಟಲಿಳಿಯ ತೊಡಗಿದನು. ಕಾಲು ಇಗರ್ಜಿಯ ಕಡೆಗೆ ಹೆಜ್ಜೆ ಹಾಕಿತು.

ಎತ್ತರವಾದ ಇಗರ್ಜಿಯ ನೆತ್ತಿಯ ಮೇಲೆ ಪವಿತ್ರ ಶಿಲುಬೆಯು ಬಿಸಿಲಲ್ಲಿ ಫಳಫಳನೆ ಹೊಳೆಯುತ್ತಿತ್ತು. ಗಂಟೆ ಗೋಪುರದ ಅಡಿಯಲ್ಲಿ ಕಾವಲುಗಾರ 'ಜಾನ್' ಕುಳಿತು ಹೇಳುತ್ತಿದ್ದನು. "ಹುಟ್ಟಿದವರಿಗೆ ಮರಣವು ನಿಶ್ಚಿತವಾದದ್ದು ಒಬ್ಬ ಮನುಷ್ಯನಿಂದಲೇ ಪಾಪವೂ, ಪಾಪದಿಂದ ಮರಣವೂ ಈ ಲೋಕದೊಳಗೆ ಸೇರಿದವು. ಎಲ್ಲರೂ ಪಾಪವನ್ನು ಮಾಡಿದ್ದರಿಂದ ಮರಣವೂ ಎಲ್ಲರಲ್ಲಿ ವ್ಯಾಪಿಸಿದೆ. ನಮ್ಮ ಅಪರಾಧಗಳಿಗಾಗಿ ತಂದೆಯಾದ ಯೇಸುವನ್ನು ದೇವರು ಮರಣಕ್ಕೆ ಒಪ್ಪಿಸಿಕೊಟ್ಟು...." ಫಾದರ್ ಪಿರೇರಾರವರು ಯಾವುದೋ ಒಂದು ಸಭೆಯಲ್ಲಿ ಭಾಗವಹಿಸಲು ಹೋಗಿದ್ದರಿಂದ 'ಜಾನ್' ಗೆ ವಿಪರೀತ ಹುರುಪು ಬಂದಿತು. ಸುಮಾರು ಮೂವತ್ತು ವರ್ಷಗಳಿಂದ ಕಿವಿಯೊಳಗೆ ತುಂಬಿಕೊಂಡಿದ್ದ ದೇವರ ಮಾತುಗಳನ್ನು ಬಹಳ ಉತ್ಸಾಹದಿಂದಲೇ ಹೇಳುತ್ತಿದ್ದನು. ಕುಂಟ ಜೋಸೆಫನು ಕಂಭಕ್ಕೆ ಒರಗಿ ಕುಳಿತು ಶೂನ್ಯ ದಿಟ್ಟಿಸುತ್ತಿದ್ದನು. ಅವನ ಸದ್ಯದ ಸಮಸ್ಯೆ ತಂದೆಯ ಸಾವಿನದ್ದು ಆಗಿದ್ದಿರಲಿಲ್ಲ; ಬಸ್‌ಸ್ಟ್ಯಾಂಡಿನಲ್ಲಿ ಬಿದ್ದುಕೊಂಡಿರುವ-ಕುತ್ತಿಗೆಯಲ್ಲಿ ಶಿಲುಬೆಯಿರುವ ಹೆಣದ ಕಾಲು ತಿನ್ನುತ್ತಿರುವ ಹಸಿರು ನೊಣಗಳ ಬಗ್ಗೆ ಆಗಿತ್ತು.

ಇಗರ್ಜಿಯ ಗೋಡೆ ಗಡಿಯಾರ ಹನ್ನೆರಡು ಬಾರಿಸಲಾರಂಭಿಸಿದ ತಕ್ಷಣದಲ್ಲಿ ಗಡಬಡಿಸಿ ಎದ್ದ ಕಾವಲುಗಾರ ಜಾನ್ ಗಂಟೆ ಗೋಪುರದ ಹಗ್ಗಕ್ಕೆ ಜೋತುಬಿದ್ದನು. ಲಯಬದ್ಧವಾದ ಒಂದೊಂದೇ ಗಂಟೆಯ ಸದ್ದು ಗಂಟೆ ಗೋಪುರದ ತುದಿಯಿಂದ ಅಲೆಯಲೆಯಾಗಿ ಗಾಳಿಯಲ್ಲಿ ತೇಲತೊಡಗಿತು. ಕುಂಟ ಜೋಸೆಫನು ನಿಧಾನವಾಗಿ ಎದ್ದು ತಾನು ಮಲಗಲು ಬಳಸುತ್ತಿದ್ದ ಕಲ್ಲಿನ ಕಟ್ಟಡದ ಬಳಿಗೆ ಹೊರಟನು.

ಒಳಗೆ ಗೋಡೆಯ ಬದಿಗಿದ್ದ ಶವವಾಹಕ ಗಾಡಿಯು ಅಣಕಿಸಿ ನಕ್ಕಂತಾಯಿತು. ಕುಂಟ ಜೋಸೆಫನು ಹೆದರಿಕೆಯಿಂದಲೇ ಗಾಡಿಯನ್ನು ದಿಟ್ಟಿಸಿದನು. ಗಾಡಿಯು-ಹಿಂದೆ ಮುಂದೆ ಚಲಿಸುತ್ತಿರುವಂತೆ ಕಂಡಿತು. ಗಾಡಿಯ ಕಮಾನುಗಳಲ್ಲಿ ಒಣಗಿದ ಹೂವುಗಳು ಗಾಳಿಗೆ ಅಲ್ಲಾಡುತ್ತಿದ್ದವು. ಕಳೆದ ವಾರದಲ್ಲಿ ಎರಡು ಸಲ ಈ ಗಾಡಿ ಉಪಯೋಗಕ್ಕೆ ಬಿದ್ದಿತ್ತು. ಲೋಬೋರವರು ಮನಸ್ಸು ಮಾಡಿದ್ದರೆ ಇಂದು ಕೂಡ ಗಾಡಿಯ ಉಪಯೋಗವಾಗುತ್ತಿತ್ತು. ತನ್ನೊಬ್ಬನಿಂದ ಈ ಗಾಡಿಯನ್ನು ಎಳೆಯಲು ಸಾಧ್ಯವಾದೀತೆ? ಎಂಬ ಪ್ರಶ್ನೆ ಹುಟ್ಟಿತು. ಹಣವನ್ನು ತಂದು ಏನು ಮಾಡುವುದು? ಶವ ಪೆಟ್ಟಿಗೆಗೆ ಬಹಳ ಹಣ ಬೇಕಾದಿತು. ಫಾದರ್ ಇರುತ್ತಿದ್ದರೆ ಖಂಡಿತವಾಗಿ ಏನಾದರೊಂದು ಏರ್ಪಾಡು ಮಾಡುತ್ತಿದ್ದರು. ಜಾನ್ ಹೇಳಿದಂತೆಯೇ ಆದರೆ ಫಾದರ್ ಬರುವಾಗ ಸೂರ್ಯ ಮುಳುಗಿಬಿಡುತ್ತಾನೆ. ಬಸ್ ಸ್ಟ್ಯಾಂಡಿನ ಹೆಣ ಅಷ್ಟು ಹೊತ್ತು ಕಾಯುತ್ತಿರಲಾರದು. ಅಥವಾ ಈಗಾಗಲೇ ಮುನಿಸಿಪಾಲಿಟಿಯವರ ಗಾಡಿ ಬಂದಿರಲೂ ಸಾಕು. ತಾನು ಹೆಣದ ಮುಖಕ್ಕೆ ಹಾಸಿದ್ದ ಬಟ್ಟೆಯನ್ನೂ ಅವರು ಗಾಡಿಯಲ್ಲಿ ಹಾಕಿಯಾರು. ನಾಳೆಯಿಂದ ತಾನು ಕೆಲಸ ಆರಂಭಿಸಬೇಕಾದರೆ ಹೊಸ ಹಾಸುಬಟ್ಟೆಬೇಕು. ಮುನಿಸಿಪಾಲಿಟಿಯವರು ಹೆಣವನ್ನು ಏನು ಮಾಡುತ್ತಾರೆ? ಸುಡುತ್ತಾರೋ.... ಹೂಳುತ್ತಾರೋ? ಒಟ್ಟಿನಲ್ಲಿ ಅವರು ಶವ ಪೆಟ್ಟಿಗೆಯನ್ನಂತೂ ಕೊಳ್ಳಲಾರರು.

ಊರುಗೋಲುಗಳನ್ನು ಕಂಕುಳುಗಳಿಂದ ಕಿತ್ತು ಗೋಡೆಗಾಣಿಸಿ ಇಟ್ಟ ಜೋಸೆಫನು ಎರಡೂ ಕೈಗಳಿಂದ ಗಾಡಿಯನ್ನು ಬಲವಾಗಿ ಹಿಡಿದು ನಿಂತನು. ಒಂದೆರಡು ಹೆಜ್ಜೆ ಕುಂಟುತ್ತಾ ತಳ್ಳಿದನು. ಬಹಳ ದೂರ ತಳ್ಳುವುದು ತನ್ನಿಂದ ಸಾಧ್ಯವಿಲ್ಲವೆಂದು ಅನ್ನಿಸಿದಾಗ ಅಳು ಬಂದಿತು. ನಿಧಾನವಾಗಿ ಗಾಡಿಯನ್ನೇರಿದ ಕುಂಟ ಜೋಸೆಫನು ಮೊದಲು ಅಂಗಾತ ಮಲಗಿದನು. ಬಳಿಕ ಕವುಚಿ ಮಲಗಿ ಬಿಕ್ಕಿ ಬಿಕ್ಕಿ ಅಳತೊಡಗಿದನು.

ಊಟ ಮುಗಿಸಿಕೊಂಡು ಬಂದಿದ್ದ ಕಾವಲುಗಾರ ಜಾನ್‌ಶೆಡ್ಡಿನ ಬಾಗಿಲ ಬಳಿ ಬಂದವನು ಹಾವು ಕಂಡವನಂತೆ ಬೆಚ್ಚಿಬಿದ್ದನು. ಹುಚ್ಚನಂತೆ ವರ್ತಿಸುತ್ತಿದ್ದ ಕುಂಟ ಜೋಸೆಫನನ್ನು ಮಾತನಾಡಿಸಲು ಧೈರ್ಯವಾಗಲಿಲ್ಲ. ಜೋಸೆಫನು ಒಂದು ನಿಮಿಷ ಗಾಡಿಯ ಮೇಲೆ ಅಂಗಾತ ಮಲಗಿದರೆ ಬಳಿಕ ಎದ್ದು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದನು. ಪಕ್ಕನೆ ಎದ್ದು ಗೋಡೆ ಹಿಡಿದುಕೊಂಡು ಆಯಾಸವಾಗುವತನಕವೂ ಸುತ್ತು ಹಾಕುತ್ತಿದ್ದನು. ಮತ್ತೆ ಗಾಡಿಗೇರಿ ಕವುಚಿ ಬಿದ್ದು ಅಳುತ್ತಿದ್ದನು. ದೇವರ ಯಾವ ವಾಕ್ಯಗಳೂ ಜೋಸೆಫನನ್ನು ಸಮಾಧಾನಪಡಿಸಲಾರವು ಎಂಬುದು ಜಾನ್‌ಗೆ ಖಾತರಿಯಾಯಿತು. ಫಾದರ್‌ರವರನ್ನು ಕರೆದುಕೊಂಡು ಬರುವುದೇ ಒಳ್ಳೆಯದೆಂದು ಯೋಚಿಸಿ ಸಭೆ ನಡೆಯುವ ಜಾಗಕ್ಕೆ ಹೊರಟನು.

'ಜಾನ್' ಫಾದರ್‌ರವರನ್ನು ಕರೆದುಕೊಂಡು ಬರುವಷ್ಟರಲ್ಲಿ ಸೂರ್ಯ ಮುಳುಗಿ ಹೋಗಿದ್ದನು. ಕಲ್ಲಿನ ಕೋಣೆಯೊಳಗೆ ಕುಂಟ ಜೋಸೆಫ್ ಕಾಣಿಸಲಿಲ್ಲ. ಜಾನ್ ದೀಪ ತರಲು ಓಡಿದನು.

ಬೆಳಕಿನಲ್ಲಿ ಫಾದರ್ ಎಲ್ಲವನ್ನೂ ನೋಡಿದರು. ಕುಂಟ ಜೋಸೆಫನು ಏನನ್ನೂ ಉಳಿಸಿರಲಿಲ್ಲ. ಬಟ್ಟೆ-ತಟ್ಟೆ ಎಲ್ಲವನ್ನೂ ಕೊಂಡು ಹೋಗಿದ್ದನು. ಆದರೂ ಒಂದನ್ನು ಬಿಟ್ಟು ಹೋಗಿದ್ದನು. ಶವವಾಹಕ ಗಾಡಿಯ ಮೇಲೆ ಜೋಸೆಫನು ಹಾಕಿಕೊಳ್ಳುತ್ತಿದ್ದ ಶಿಲುಬೆ ಬಿದ್ದಿರುವುದನ್ನು ಜಾನ್ ಮತ್ತು ಫಾದರ್‌ರವರು ಏಕಕಾಲದಲ್ಲಿ ನೋಡಿದರು.

ದೇವರು ಸರ್ವಶಕ್ತನೂ ಕರುಣಾಮಯಿಯೂ ಆಗಿದ್ದಾನೆ. ಯಾಕೆಂದರೆ ಜಗಲಿಯ ಮೇಲೆ ಬಿದ್ದುಕೊಂಡಿದ್ದ ಹೆಣವನ್ನು ತಮ್ಮ ಸ್ವಂತ ಖರ್ಚಿನಲ್ಲಿ ದಫನ ಮಾಡಿದ ದಿನದಲ್ಲೇ ಸಾಹುಕಾರರ ಜವುಳಿ ಅಂಗಡಿಯಲ್ಲಿ ಅಚ್ಚರಿಯೆನ್ನಿಸುವಷ್ಟು ವ್ಯಾಪಾರ ನಡೆಯಿತು. ಅನಿರೀಕ್ಷಿತವಾಗಿ ಬಂದಿದ್ದ ಐದಾರು ಮದುವೆ ಪಾರ್ಟಿಗಳು ಸುಮಾರು ಎಂಟು ಸಾವಿರ ರೂಪಾಯಿಗಳಿಗೂ ಮಿಕ್ಕಿದ ವ್ಯಾಪಾರ ಮಾಡಿಹೋಗಿದ್ದರು. ಅಲ್ಲಾಹುವಿಗೆ ಕೃತಜ್ಞತೆಯನ್ನರ್ಪಿಸುತ್ತಾ ಅಂಗಡಿ ಬಾಗಿಲು ಹಾಕುವ ತಯಾರಿಯಲ್ಲಿದ್ದ ಸಾಹುಕಾರರು, ಅಂಗಡಿಯೊಳಗೆ ಒಮ್ಮಿಂದೊಮ್ಮಿಗೆ, ಕಾಣಿಸಿಕೊಂಡ ಕುಂಟ ಭಿಕ್ಷುಕನನ್ನು ಕಂಡು ಒಂದು ಕ್ಷಣ ನಡುಗಿಹೋಗಿದ್ದರು. ಸಾಹುಕಾರರು ಸರಿಯಾಗಿ ಚೇತರಿಸಿಕೊಳ್ಳುವ ಮೊದಲೇ ಕುಂಟ ಜೋಸೆಫನು ಅವರ ಹತ್ತಿರ ಸರಿದು ಅವರಿಗೆ ಮಾತ್ರ ಕೇಳಿಸುವಂತೆ ಪ್ರಶ್ನಿಸಿದನು. "ನನ್ನನ್ನು ನಿಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತೀರಾ"? ಸಾಹುಕಾರರ ರಕ್ತವೆಲ್ಲ ತಣ್ಣಗಾಗಿತ್ತು. ಅನಿರೀಕ್ಷಿತ ಪ್ರಶ್ನೆಯಿಂದ ತತ್ತರಿಸಿ ಹೋಗಿದ್ದರು. ಕುಂಟ ಜೋಸೆಫನು ಪುನಃ ಪ್ರಶ್ನಿಸಿದನು. "ಕ್ರೈಸ್ತನೊಬ್ಬನನ್ನು ನಿಮ್ಮ ಜಾತಿಗೆ ಸೇರಿಸಿಕೊಳ್ಳುತ್ತೀರಾ?"

ಅಂಗಡಿಯೊಳಗೆ ಗಿರಾಕಿಗಳಾರೂ ಇದ್ದಿರಲಿಲ್ಲ. ಕೆಲಸದ ಹುಡುಗರು ಬಟ್ಟೆಯ ಥಾನುಗಳನ್ನು ಮಡಚಿ ಕನ್ನಡಿ ಕಪಾಟುಗಳಲ್ಲಿ ಒಪ್ಪವಾಗಿ ಜೋಡಿಸುತ್ತಿದ್ದರು; ಅಂಗಡಿಯೊಳಗಡೆ ಭಿಕ್ಷುಕನ ಒಂಟಿ ಕಾಲನ್ನೂ, ಇನ್ನೂ ಜಗಳಾಡದೇ ಕಲ್ಲಿನಂತೆ ಕೂತಿರುವ ಸಾಹುಕಾರರನ್ನು ಅಚ್ಚರಿಯಿಂದ ವಾರೆಕಣ್ಣುಗಳಲ್ಲಿ ಹಿಡಿದಿಟ್ಟು ಕೊಂಡಿದ್ದರು.

ಸಾಹುಕಾರರು ಪ್ರಯಾಸದಿಂದ ಸಾವರಿಸಿಕೊಂಡರು, ಅವರ ಧಾರ್ಮಿಕ ಪ್ರಜ್ಞೆಯೊಂದಿಗೆ ವ್ಯಾವಹಾರಿಕ ಪ್ರಜ್ಞೆಯೂ ಜಾಗೃತವಾಯಿತು. ಕೇವಲ ಒಂದು ಹೆಣ ಹೊರಿಸಿದ ಕಾರಣಕ್ಕೆ ಅಲ್ಲಾಹು ಸುಮಾರು ಮೂರು ಸಾವಿರ ರೂಪಾಯಿಗಳ ಲಾಭ ಕೊಡಿಸಿದ್ದನು. ಇನ್ನು, ಒಬ್ಬನನ್ನು ಮತಾಂತರ ಮಾಡಿಸಿಬಿಟ್ಟರೆ ಖಂಡಿತವಾಗಿಯೂ ತನ್ನ ಪುಣ್ಯದ ಖಾತೆ ಭಾರವಾಗುತ್ತದೆ ಎಂದು ತಕ್ಷಣದಲ್ಲೇ ಲೆಕ್ಕಾಚಾರ ಹಾಕಿಬಿಟ್ಟರು.

ಪಕ್ಕದ ಕಿರುಕೋಣೆಯೊಳಗೆ ಕುಂಟ ಜೋಸೆಫನನ್ನು ಸೇರಿಸಿ ಬಾಗಿಲು ಹಾಕಿಕೊಂಡ ಸಾಹುಕಾರರು ಕುಂಟನನ್ನು ಹೇಳುವವರು-ಕೇಳುವವರು ಯಾರೂ ಇಲ್ಲವೆಂದು ಖಾತರಿಪಡಿಸಿಕೊಂಡರು. ನಾಲ್ಕೈದು ಕಡೆಗೆ ಫೋನು ಹಚ್ಚಿ ಕುಂಟನಿಗೆ ಅರ್ಥವಾಗದ ಭಾಷೆಯಲ್ಲಿ ಮಾತನಾಡಿಕೊಂಡರು. ಸಾಹುಕಾರರ ಉತ್ಸಾಹ ಕುಂಟನನ್ನು ದಂಗು ಬಡಿಸಿತ್ತು.

ರಾತ್ರಿ ಸಾಹುಕಾರರ ದೊಡ್ಡ ಮನೆಯಲ್ಲಿ ಕುಂಟ ಭಿಕ್ಷುಕನಿಗೆ ಮಾಂಸದ ಊಟ ಬಡಿಸಿದರು. ಚಾವಡಿಯೊಳಗೆ ಮಲಗಲು ಹೇಳಿದರು. ಚಾಪೆ, ದಿಂಬು ಮತ್ತು ಹೊಸ ಚಾದರವನ್ನೂ ಕೊಟ್ಟರು. ಆದರೂ ಜೋಸೆಫನಿಗೆ ರಾತ್ರಿ ನಿದ್ರೆ ಬರಲಿಲ್ಲ. ಆಗಾಗ ಬೋಳು ಎದೆಯನ್ನು ತಡವಿಕೊಂಡು ಬೆಚ್ಚಿಬೀಳುತ್ತಿದ್ದನು. ಸ್ವರ್ಗಲೋಕದಲ್ಲಿರುವ ತಂದೆಯನ್ನು ಕ್ಷಮೆ ಕೇಳುವುದು ಸರಿಯಾದೀತೆ? ಎಂದು ಗೊಂದಲಗೊಳ್ಳುತ್ತಿದ್ದನು. ಮುಂಜಾನೆ ನಾಲ್ಕರ ಸುಮಾರಿಗೆ ಸುಂದರ ಯುವಕನೊಬ್ಬ ಜೋಸೆಫನನ್ನು ಎಬ್ಬಿಸಿದನು. ಅವಸರದಲ್ಲಿಯೇ ಕಾಫಿ-ತಿಂಡಿ ಮುಗಿಯಿತು. ಹೊರಗೆ ಸಾಹುಕಾರರ ಕಾರು ಸಿದ್ಧವಾಗಿತ್ತು. ನಿದ್ರೆಯಲ್ಲಿ ನಡೆಯುವವನಂತೆ ಜೋಸೆಫನು ಕುಂಟುತ್ತಾ ಕಾರೊಳಗೆ ಕುಳಿತನು. ಕಾರು ರೈಲ್ವೆ ನಿಲ್ದಾಣದ ಹೊರಗೆ ನಿಂತಿತು. ಅಲ್ಲಾಹುವಿನ ಮಹಿಮೆ ಅಪಾರ; ರೈಲು ಸಮಯಕ್ಕೆ ಸರಿಯಾಗಿಯೇ ಹೊರಟಿತು.

ಈ ದೇವರ ರಾಜ್ಯದಲ್ಲಿ ಕೆಲವೊಂದು ಸಂಗತಿಗಳು ಬಹಳ ಗುಟ್ಟಿನಲ್ಲಿಯೇ ನಡೆಯಬೇಕಾಗುತ್ತದೆ. ಇಂತಹ ಗುಟ್ಟಿನ ಕೆಲಸಗಳಿಗೆ ದೇವರ ಅನುಮತಿಯೂ ಇರುತ್ತದೆ. ಎಲ್ಲಕ್ಕೂ ಕಾರಣಕರ್ತನಾದ ದೇವರ ಇಚ್ಛೆಯಂತೆ ಅಪರಿಚಿತ ಊರೊಂದರಲ್ಲಿ ಜೋಸೆಫ್ ಡಿಕಾಸ್ಟ ಎಂಬ ಭಿಕ್ಷುಕನು ರಹಮತ್ ಎಂಬ ಕುಂಟ ಭಿಕ್ಷುಕನಾಗಿ ಹೆಸರು ಬದಲಾಯಿಸಿಕೊಂಡನು.

ಆದರೂ ರಹಮತ್‌ನಿಗೆ ಹೊತ್ತು ಹೊತ್ತಿಗೂ ಹಸಿವೆಯಾಗುತ್ತಿತ್ತು. ಯಾಕೆಂದರೆ ದೇವರು ಒಬ್ಬನೇ ಆಗಿದ್ದಾನೆ. ಎಲ್ಲ ಮನುಷ್ಯರಿಗೂ ಅವನು ಹಸಿವೆಯನ್ನು ಸಮಾನವಾಗಿ ಹಂಚಿರುತ್ತಾನೆ. ದುಡಿದು ತಿನ್ನಲು ಸಾಧ್ಯವಾಗದ ಅಸಹಾಯಕರಿಗೆ ಭಿಕ್ಷೆ ನೀಡುವಂತೆ ಅವನು ಸಿರಿವಂತರಿಗೆ ಆಜ್ಞೆ ಮಾಡಿರುತ್ತಾನೆ. ಆದ್ದರಿಂದಲೇ ಭಿಕ್ಷುಕರೆಲ್ಲರೂ ದೇವರ ಬಗ್ಗೆ ಕೃತಜ್ಞರಾಗಿದ್ದಾರೆ. ರಹಮತ್‌ನೂ ದೇವರಿಗೆ ಕೃತಜ್ಞನಾಗಿದ್ದನು. ಅವನಿಗೆ ಎರಡು ವರ್ಷಗಳ ಕಾಲ ಊಟ-ಬಟ್ಟೆ ಎಲ್ಲವನ್ನೂ ಒದಗಿಸಿದ್ದನು. ದಿನಕ್ಕೆ ಐದು ಬಾರಿ ನಮಾಜು ಮತ್ತು ಓದುವಿಕೆಗೆ ಹೊರತಾಗಿ ಅವನು ಬೇರೇನೂ ಮಾಡಬೇಕಾಗಿರಲಿಲ್ಲ. ಅವನು ಕುಂಟನಾಗಿರುವುದರಿಂದಾಗಿ ಅವನಿಗೆ ಕುಳಿತುಕೊಂಡೇ ನಮಾಜು ಮಾಡಲು ದೇವರು ಅನುಮತಿ ಕೊಟ್ಟಿದ್ದನು. ದೇವರಿಂದಲೇ ಭೂಮಿಗಿಳಿದ ಪವಿತ್ರ ಗ್ರಂಥದ ಮೂಲಕ ರಹಮತ್ ನೂರಾರು ಹೊಸ ಸಂಗತಿಗಳನ್ನು ಕಲಿತುಕೊಂಡನು.

ಎರಡು ವರ್ಷಗಳ ಬಳಿಕ ರಹಮತ್‌ನನ್ನು ಹೋಗು ಎಂದರು. ದೇವರು ಬೇರೆಯವರಿಗೂ ಅವಕಾಶ ಕೊಡುವುದು ಅಗತ್ಯವಾಗಿತ್ತು; ಅವನಿಗೆ ಎಲ್ಲರೂ ಸಮಾನರಾಗಿದ್ದರು.

"ಅಲ್ಲಾಹು ನಿಮಗೆ ಭೂಮಿಯನ್ನು ಹಾಸಿಗೆಯನ್ನಾಗಿಯೂ, ಆಕಾಶವನ್ನೂ ಮೇಲ್ಚಾವಣಿಯನ್ನಾಗಿಯೂ ರಚಿಸಿಕೊಟ್ಟನು. ಅವನು ನಿಮಗಾಗಿ ಸುಂದರ ಸ್ವರ್ಗವನ್ನೂ ನಿರ್ಮಿಸಿರುತ್ತಾನೆ". ಉರಿಬಿಸಿಲಿನಲ್ಲಿ ರೈಲ್ವೆ ನಿಲ್ದಾಣದಿಂದ ಹೊರನುಸುಳಿಬಂದ ಕುಂಟ ರಹಮತ್‌ಗೆ ಎದುರಲ್ಲೇ ಎದ್ದು ನಿಂತಿದ್ದ ಹಲವು ಮಹಡಿಗಳ ಹೊಸ ಕಟ್ಟಡವೊಂದನ್ನು ಕಂಡಾಗ ಕಳೆದೆರಡು ವರ್ಷಗಳಲ್ಲಿ ತಾನು ಓದಿದ್ದ ಪವಿತ್ರ ಗ್ರಂಥದ ಸಾಲುಗಳು ನೆನಪಾದವು.

ಡಾಮರು ರಸ್ತೆಯು ಬೆಂಕಿಯಂತೆ ಸುಡುತ್ತಿತ್ತು. ನರಕದ ಬೆಂಕಿಯು ಇದಕ್ಕಿಂತಲೂ ಹೆಚ್ಚು ತೀಕ್ಷ್ಣವಾದ್ದು ಎಂದು ಅವನು ಓದಿದ್ದನು. ನೆತ್ತಿಯ ಮೇಲೆ ಸುಡುವ ಸೂರ್ಯನನ್ನು ಸೃಷ್ಟಿಸಿದ ದೇವರು ಕರುಣಾಮಯನೂ ಆಗಿರುವುದರಿಂದ ರಸ್ತೆಯ ಇಕ್ಕೆಲಗಳಲ್ಲಿ ಬೆಳೆದು ನಿಂತಿರುವ ಕಟ್ಟಡಗಳ ಕೆಳಗೆ ನೆರಳನ್ನೂ ಉಂಟು ಮಾಡಿದ್ದನು. ಕುಂಟ ರಹಮತ್‌ನು ನೆರಳುಗಳ ನಡುವೆಯೇ ನಡೆಯಬಹುದಾಗಿತ್ತು. ಆದರೆ ನೆರಳಿರುವ ಜಾಗಗಳಲ್ಲೆಲ್ಲಾ, ಅಸಂಖ್ಯ ಕಾರುಗಳು ನಿಂತಿದ್ದವು. ಬಣ್ಣ ಬಣ್ಣದ ಕಾರುಗಳು ನೆರಳಿನಲ್ಲಿ ಬಹಳ ಸುಂದರವಾಗಿ ಕಾಣಿಸುತ್ತಿದ್ದವು. ನಾಲ್ಕಾರು ವರ್ಷಗಳ ಕಾಲ ತಾನು ಓಡಿಯಾಡಿದ ರಸ್ತೆಯು ಕಳೆದ ಎರಡೇ ವರ್ಷಗಳಲ್ಲಿ ಗುರುತು ಸಿಗದಷ್ಟು ಬದಲಾವಣೆಗೊಂಡದ್ದರ ಬಗ್ಗೆ ಅಚ್ಚರಿಪಡುತ್ತಾ ರಹಮತ್‌ನು ಕಾಲೆಳೆಯುತ್ತಿದ್ದನು. ಪವಿತ್ರ ಶುಕ್ರವಾರದ ದಿನವಾದುದರಿಂದ ಅವನ ಹೆಜ್ಜೆಯು ಜುಮ್ಮಾ ಮಸೀದಿಯ ಕಡೆಗೆ ಮುಖ ಮಾಡಿತ್ತು. ಸಾಹುಕಾರರು ಖಂಡಿತವಾಗಿಯೂ ಜುಮ್ಮಾ ನಮಾಜಿಗೆ ಬರುತ್ತಾರೆಂದು ಅವನಿಗೆ ಭರವಸೆಯಿತ್ತು. ತನ್ನ ಮುಂದಿನ ಜೀವನಕ್ಕೆ ಸಾಹುಕಾರರು ಏನಾದರೊಂದು ದಾರಿ ತೋರಿಸುತ್ತಾರೆಂಬುದರಲ್ಲಿ ರಹಮತ್‌ನಿಗೆ ಸ್ವಲ್ಪವೂ ಅನುಮಾನವಿರಲಿಲ್ಲ. ತನ್ನನ್ನು ಎರಡು ವರ್ಷಗಳ ಕಾಲ ಸಹೋದರನಂತೆ ನೋಡಿಕೊಂಡಿದ್ದ ಗಡ್ಡದ ಮುದುಕ ಕೊಟ್ಟಿದ್ದ ಪತ್ರವು ಹೆಗಲ ಚೀಲದೊಳಗೆ ಭದ್ರವಾಗಿ ಇರುವುದರಿಂದ ಕುಂಟ ರಹಮತ್ ಕಂಕುಳುಗಳು ನೋವಾಗುವುದನ್ನು ಲಕ್ಷಿಸದೆ ವೇಗವಾಗಿ ಕಾಲೆಳೆಯತೊಡಗಿದನು.

ಮಸೀದಿಯ ಹೆಬ್ಬಾಗಿಲ ಬಳಿ ಸಾಲಾಗಿ ಕುಳಿತು ಸುಡುಬಿಸಿಲಲ್ಲಿ ದೇವರ ಸ್ತುತಿ ಮಾಡುತ್ತಾ ಕೈ ಚಾಚುವವರನ್ನು ಕಂಡನು. ಕುಂಟ ರಹಮತ್ ತೊಟ್ಟುಕೊಂಡಿದ್ದ ಬಿಳಿಯ ಅಂಗಿ ಮತ್ತು ಮುಂಡು ಬಹಳ ಶುಭ್ರವಾಗಿದ್ದವು. ಆದರೂ ಭಿಕ್ಷುಕರ ಸಾಲಿನ ಎದುರು ತಲೆಯೆತ್ತಿ ನಡೆಯುವುದು ಸಾಧ್ಯವಾಗಲಿಲ್ಲ.

ಜುಮ್ಮಾ ನಮಾಜಿಗೆಂದು ಜನರು ಸಾಲುಗಟ್ಟಿ ಬರುತ್ತಿದ್ದರು. ಸಾಹುಕಾರರು ತಮ್ಮ ಕಾರೊಳಗೆ ಕುಳಿತುಕೊಂಡು ಬಂದರು. ರಹಮತ್ ಆತುರದಿಂದ ಅವರೆದುರು ಹೋಗಿ ನಿಂತನು; ಅಸ್ಸಲಾಂ ಅಲೈಕುಂ

ಪುಟ 15ಕ್ಕೆ

ಜಗದಗಲ

ಶರತ್‌ಚಂದ್ರ

ನೇಪಾಳದಲ್ಲಿ ರಾಜಸತ್ತೆ ಅಂತ್ಯ

ನೇಪಾಳದ ಜನತೆ ಈ ವಾರ ಚಾರಿತ್ರಿಕ ಪರಿವರ್ತನೆಯೊಂದನ್ನು ಮಾಡಿದರು. ಹೊಸದಾಗಿ ಚುನಾಯಿತವಾದ ಸಂವೈಧಾನಿಕ ಸಭೆ ಜನರ ಆಶಯದಂತೆ ರಾಜಸತ್ತೆಯನ್ನು ಕೊನೆಗೊಳಿಸುವ ನಿರ್ಣಯ ಅಂಗೀಕರಿಸಿತು. ನೇಪಾಳವನ್ನು ಸೆಕ್ಯುಲರ್ ಆದ, ಎಲ್ಲರನ್ನೂ ಒಳಗೊಳ್ಳುವ ಪ್ರಜಾಸತ್ತಾತ್ಮಕ ರಿಪಬ್ಲಿಕ್ ಆಗಿ ಘೋಷಿಸಿತು. ಇದರೊಂದಿಗೆ (ಈಗಿನ ವ್ಯಾಪ್ತಿಯ) ನೇಪಾಳದಲ್ಲಿ ಸುಮಾರು 250 ವರ್ಷಗಳಿಂದ ಶಹ ರಾಜ ಮನೆತನದ ನಿರಂಕುಶ ಆಳ್ವಿಕೆ ಕೊನೆಗೊಂಡಿದೆ. ಅದರ ಮೊದಲು ನೇಪಾಳ ಹಲವು ತುಂಡರಸರ ಮಧ್ಯೆ ಹರಿದು ಹಂಚಿ ಹೋಗಿತ್ತು. ಈಗಿನಿಂದ ರಾಜ ಗ್ಯಾನೇಂದ್ರ ಸಾಮಾನ್ಯ ಪ್ರಜೆಯಾಗಿರುತ್ತಾನೆ. 15 ದಿನಗಳ ಒಳಗೆ ಅರಮನೆ ಖಾಲಿ ಮಾಡುವಂತೆ ಆತನಿಗೆ ಹೇಳಲಾಗಿದೆ. ಅರಮನೆಯನ್ನು ಸಾರ್ವಜನಿಕ ಮ್ಯೂಸಿಯಂ ಮಾಡಲಾಗುವುದು. ಇತ್ತೀಚಿನ ಅವಧಿಯಲ್ಲಿ ಪಾಳೆಯಗಾರಿ ಪದ್ದತಿಯ ರೂಪವಾದ ರಾಜಸತ್ತೆಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಪರಿವರ್ತನೆ ಅಪರೂಪ. ಇಲ್ಲಿ ಆಲಂಕರಿಕ ರಾಜನಾಗಿ ಮುಂದುವರೆಯುವ ಅಥವಾ ರಾಜನಿಗೆ ಆಲಂಕಾರಿಕ ಮುಖ್ಯಸ್ಥ (ಅಧ್ಯಕ್ಷ ಮುಂತಾದ) ಪದವಿ ಕೊಡುವ ಸಮಜಾಯಿಷಿ ಸಹ ಮಾಡಲಾಗಿಲ್ಲ ಎಂದು ಗಮನಿಸಬೇಕು.

18-19 ನೇ ಶತಮಾನದಲ್ಲಿ ಪಶ್ಚಿಮ ಯುರೋಪಿನ (ಪಾಳೆಯಗಾರಿ ಪದ್ಧತಿ ನಾಶ ಮಾಡಿದ) ಪ್ರಜಾಸತ್ತಾತ್ಮಕ ಕ್ರಾಂತಿಗಳಲ್ಲೂ ಹಲವು ದೇಶಗಳಲ್ಲಿ (ಉದಾ: ಬ್ರಿಟನ್, ನೆದರಲ್ಯಾಂಡ್ಸ್, ಬೆಲ್ಜಿಯಂ) ಆಲಂಕಾರಿಕ ರಾಜಸತ್ತೆ ಮುಂದುವರೆಸಿತ್ತು. ಭಾರತದಲ್ಲೂ ರಾಜಸತ್ತೆಯನ್ನು ಕೊನೆಗೊಳಿಸುವ ಪ್ರಕ್ರಿಯೆ ಇನ್ನೂ ಮುಗಿದಿಲ್ಲ. 70 ರ ದಶಕದ ರಾಜಧನ ಕೊನೆಗೊಳಿಸುವ ಆಜ್ಞೆ ಸಹ ಅರೆಮನಸ್ಸಿನದಾಗಿತ್ತು. ಆ ನಂತರವೂ ಹಲವು ಪ್ರಮುಖ ಆಸ್ತಿಗಳ ಬಗ್ಗೆ ವಿವಾದ ಮುಂದುವರೆದಿದೆ. ಮೈಸೂರು ರಾಜನ ಕೋರ್ಟು ವಿವಾದ ಒಂದು ಉದಾಹರಣೆ.



ಜನತೆಯ ಸಂಭ್ರಮ

ಜನಮನದಲ್ಲೂ ರಾಜಸತ್ತೆ ಪದ್ಧತಿ ಬಗ್ಗೆ ಭಯ-ಭಕ್ತಿ ಕೊನೆಗೊಳಿಸುವುದರಲ್ಲೂ, ಹೊಸ ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನು ಸ್ಪಷ್ಟವಾಗಿ ಬಲವಾಗಿ ರೂಪಿಸುವುದರಲ್ಲೂ ನೇಪಾಳದಂತಹ ಸಫಲತೆಯ ಉದಾಹರಣೆ ವಿರಳ. 60 ವರ್ಷಗಳ ನಂತರವೂ ಭಾರತದ ಹಲವು ಪ್ರದೇಶ ಮತ್ತು ಜನವಿಭಾಗಗಳಲ್ಲೂ ಇನ್ನೂ ಇದು ಆಗಿಲ್ಲ. ಪಾಳೆಯಗಾರಿ ಪದ್ದತಿಯ ಗೋಣು ಮುರಿಯಲು ಸಮಗ್ರ ಭೂಸುಧಾರಣೆಯಂತಹ ಪ್ರಮುಖ ಕ್ರಮಗಳ ಜಾರಿ ಇನ್ನೂ ಆಗಬೇಕಾಗಿದೆ. ಆ ಹಾದಿಯಲ್ಲಿ ನೇಪಾಳ ದಾಪುಗಾಲಿನ ಪಯಣ ಆರಂಭಿಸಿವೆ.

ಸಂವೈಧಾನಿಕ ಸಭೆ ರಾಜನ ಬದಲು ಅಧ್ಯಕ್ಷ... ಚುನಾಯಿಸುವುದು. ನಾಲ್ಕು ಉನ್ನತ ಪದವಿಗಳನ್ನು ಅತ್ಯಂತ ಹೆಚ್ಚು ಜನಬೆಂಬಲ ಗಳಿಸಿದ... ಹಂಚಿಕೊಳ್ಳುವ ಬಗ್ಗೆ ಆಗಲೇ ಒಪ್ಪಂದ ಆಗಿದೆ. ಅದರ ಪ್ರಕಾರ ನೇಪಾಳಿ ಕಾಂಗ್ರೆಸ್ ಗೆ ಅಧ್ಯಕ್ಷ ಪದವಿ, ಮಾವೋವಾದಿಗಳಿಗೆ ಪ್ರಧಾನಿ ಪದವಿ ಕೊಡಲಾಗಿದೆ. ಸಂವೈಧಾನಿಕ ಸಭೆಯ ಚೇರ್‌ಮನ್ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಸಿಪಿಎನ್ (ಯುಎಂಎಲ್) ಮತ್ತು ಮಾಧೇಸಿ ಫೋರಂ ಹಂಚಿಕೊಳ್ಳಲಿದೆ. ○

ಇತ್ತೀಚೆಗೆ ನೇಪಾಳಕ್ಕೆ ಭೇಡಿ ನೀಡಿದ ಸಿಪಿಐ(ಎಂ) ನೇತಾರ ಸೀತಾರಾಂ ಯೆಚೂರಿ ಜೊತೆ ಗಿರಿಜಾಪ್ರಸಾದ್ ಕೊಯಿರಾಲ(ಎಡಗಡೆ) ಚರ್ಚೆ- ಸಿಪಿಎನ್ (ಮಾವೋವಾದಿ) ಪಕ್ಷದ ಮುಖಂಡತ್ವ




ಒಬಾಮಾಗೆ ಕೆಲವು ಪ್ರಶ್ನೆಗಳು – ಫಿಡೆಲ್ ಕ್ಯಾಸ್ಟ್ರೋ

ಅಮೇರಿಕಾದ ಡೆಮೊಕ್ರಾಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಬಾರಾಕ್ ಒಬಾಮಾ ಕ್ಯೂಬಾದ ದಿಗ್ಬಂಧನ ಮುಂದುವರೆಸುವ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಫಿಡೆಲ್ ಕ್ಯಾಸ್ಟ್ರೊ ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ಪ್ರತಿಕ್ರಿಯೆಯ ಕೆಲವು ಭಾಗಗಳು :

ಕಳೆದ ಶುಕ್ರವಾರ ಕ್ಯೂಬನ್ ಅಮೆರಿಕನ್ ಫೌಂಡೇಶನ್ ನಲ್ಲಿ ಬಾರಾಕ್ ಒಬಾಮಾ ಮಾಡಿದ ಭಾಷಣ ಕೇಳಿದ ಮೇಲೆ ಮೌನವಾಗಿದ್ದರೆ ಅದು ನನ್ನ ಅಪ್ರಾಮಾಣಿಕತೆ ಆದೀತು. ಅವರ ಬಗ್ಗೆ ನನಗೆ ಆಕ್ರೋಶವಿಲ್ಲ. ಅವರು ಕ್ಯೂಬಾ ಮತ್ತು ಮಾನವತೆಯ ವಿರುದ್ಧದ ಅಪರಾಧಗಳಿಗೆ ಜವಾಬ್ದಾರ ಅಲ್ಲ. ಆದರೆ ಅವರನ್ನು ಸಮರ್ಥಿಸಿದರೆ ಅವರ ವಿರೋಧಿಗಳಿಗೆ ಕುಮ್ಮಕ್ಕು ಕೊಟ್ಟಂತೆ. ಆದ್ದರಿಂದ ಒಬಾಮಾರನ್ನು ಟೀಕೆ ಮಾಡಲು ನಾನು ಯಾವುದೇ ಮುಲಾಜು ಮಾಡುವುದಿಲ್ಲ.

ಒಬಾಮಾರ ಹೇಳಿಕೆ ಏನು ? '..ನನ್ನ ಜೀವನದುದ್ದಕ್ಕೂ ಕ್ಯೂಬಾದಲ್ಲಿ ಅನ್ಯಾಯ ಮತ್ತು ದಮನ ಇತ್ತು. ನನ್ನ ಜೀವಮಾನದಲ್ಲಿ ಕ್ಯೂಬಾದಲ್ಲಿ ಸ್ವಾತಂತ್ರ್ಯ ಇರಲಿಲ್ಲ. ಕ್ಯೂಬಾದ ಎರಡು ಪೀಳಿಗೆಗಳು ಪ್ರಜಾಪ್ರಭುತ್ವ ನೋಡಿಲ್ಲ. ನಾನು ಅನ್ಯಾಯದ ಪರವಾಗಿಲಾರೆ. ನಾನು ದಿಗ್ಬಂಧನ ಮುಂದುವರೆಸುತ್ತೇನೆ...'

ಸಾಮಾಜಿಕ ಮತ್ತು ಮಾನವೀಯ ದೃಷ್ಟಿಯಿಂದ ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿಗಳಲ್ಲಿ ಒಬಾಮಾ ಅತ್ಯಂತ ಪ್ರಗತಿಪರರು ಎಂಬ ಬಗ್ಗೆ ಅನುಮಾನವಿಲ್ಲ. ಅವರು ಕ್ಯೂಬನ್ ಕ್ರಾಂತಿ ಪ್ರಜಾಸತ್ತೆಗೆ ವಿರೋಧಿ ಆಗಿತ್ತು. ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳನ್ನು ಮನ್ನಿಸುವುದಿಲ್ಲ ಎನ್ನುತ್ತಾರೆ. ಇದು ಅಮೆರಿಕನ್ ಸರ್ಕಾರಗಳು ನಮ್ಮ ದೇಶದ ವಿರುದ್ಧ ಪದೇ ಪದೇ ಮಾಡಿದ ಅಪರಾಧಗಳನ್ನು ಸಮರ್ಥಿಸಿಕೊಳ್ಳಲು ಹೂಡಿದ ವಾದ. ದಿಗ್ಬಂಧನ ನರಮೇಧದ ಕೃತ್ಯವಲ್ಲದೆ ಬೇರೆ ಅಲ್ಲ. ಅದಕ್ಕೆ ಯಾವುದೇ ಸಮರ್ಥನೆ ಇಲ್ಲ. ಅಮೆರಿಕದ ಮಕ್ಕಳು ಇಂತಹ ನಾಚಿಕೆಗೇಡಿನ ಮೌಲ್ಯಗಳನ್ನು



ರೂಢಿಸಿಕೊಳ್ಳುವುದನ್ನು ನಾನು ನೋಡಲಾರೆ.

ಇಷ್ಟು ದೀರ್ಘ ಕಾಲ ಇಷ್ಟು ದಿಗ್ಬಂಧನಕ್ಕೊಳಗಾದ ಚಿಕ್ಕ ದೇಶ ಉಳಿಯಲು ಸಾಧ್ಯವಿರಲಿಲ್ಲ. ಇದು ಬರಿಯ ಮಹತ್ವಾಕಾಂಕ್ಷೆ, ಮೋಸ, ಜಂಭ, ಅಧಿಕಾರದ ದುರುಪಯೋಗದ ಆಧಾರದ ಮೇಲೆ ಸಾಧ್ಯ ಎಂದು ಹೇಳುವುದು ನಮ್ಮ ಜನತೆಯ ಬುದ್ಧಿವಂತಿಕೆಗೆ ಮಾಡುವ ಅವಮಾನ.

ನಾನು ಒಬಾಮಾರ ಬುದ್ಧಿವಂತಿಕೆ, ಚರ್ಚಾ ಜಾಣ್ಮೆ, ಕೆಲಸದ ನೈತಿಕತೆಯನ್ನು ಪ್ರಶ್ನಿಸುತ್ತಿಲ್ಲ. ಅವರು ಪ್ರತಿಭಾವಂತ ಮಾತುಗಾರ ಮತ್ತು ಚುನಾವಣಾ ಕಣದಲ್ಲಿ ಅವರ ವಿರೋಧಿಗಳಿಗಿಂತ ಮುಂದೆ ಇದ್ದಾರೆ. ಆದರೂ ನಾನು ಹಲವು ಸೂಕ್ಷ್ಮ ಪ್ರಶ್ನೆಗಳನ್ನು ಎತ್ತಬೇಕಾಗಿದೆ.

ಪ್ರಶ್ನೆಗಳು

ಯಾವುದೇ ನೆಪದಲ್ಲಿ, ಅಮೆರಿಕದ ಅಧ್ಯಕ್ಷ ಜಗತ್ತಿನ ಯಾವುದೇ ವ್ಯಕ್ತಿಯ ಕೊಲೆಗೆ ಆಜ್ಞೆ ಮಾಡುವುದು ಸರಿಯೆ? ಇತರ ಮಾನವರ ಚಿತ್ರಹಿಂಸೆಗೆ ಅಮೆರಿಕದ ಅಧ್ಯಕ್ಷ ಆಜ್ಞೆ ಮಾಡುವುದು ನೈತಿಕವಾಗಿ ಸರಿಯೇ? ಅತ್ಯಂತ ಪ್ರಬಲ ದೇಶ ಜಾಗತಿಕ ಶಾಂತಿಯ ಹೆಸರಲ್ಲಿ ಪ್ರಭುತ್ವದ ಭಯೋತ್ಪಾದನೆ ಬಳಸುವುದು ಸರಿಯೇ ?

ಒಂದು ದೇಶಕ್ಕೆ ಮಾತ್ರ ಶಿಕ್ಷೆ ನೀಡ ಬಯಸುವ ಕಾನೂನು ಬಳಸಿ ಕ್ಯೂಬಾವನ್ನು ಅಸ್ಥಿರಗೊಳಿಸುವುದು ಗೌರವಾರ್ಹವೇ? ಅದೂ ಅಂತಹ ಕಾನೂನು ನಿರಪರಾಧಿ ಲಕ್ಷಾಂತರ ಮಕ್ಕಳು ಮತ್ತು ತಾಯಂದಿರನ್ನು ಸಾಯಿಸುವ ಸಾಧ್ಯತೆ ಇದ್ದಾಗ. ಬಡ ದೇಶಗಳ ಅತ್ಯುತ್ತಮ ವೈಜ್ಞಾನಿಕ ಮತ್ತು ಭೌದ್ಧಿಕ ಪ್ರತಿಭೆಯನ್ನು ಕದಿಯುವುದು ಮತ್ತು ಪ್ರತಿಭಾ ಪಲಾಯನಕ್ಕೆ ಕುಮ್ಮಕ್ಕು ಕೊಡುವುದು ನೈತಿಕವಾಗಿ ಸಮರ್ಥನೀಯವೇ ?

ಅಪಾಯದ ಆತಂಕದ ಆಧಾರದ ಮೇಲೆ ಅಪ್ರಚೋದಿತ ದಾಳಿ ಮಾಡುವುದು ನ್ಯಾಯವೇ ? ನಮ್ಮ ಭೂಮಿಯನ್ನು ಹಲವು ಬಾರಿ ನಾಶ ಮಾಡಬಲ್ಲ ಮಾರಕಾಸ್ತ್ರಗಳ ಮೇಲೆ ಆಧಾರಿತ ಮಿಲಿಟರಿ-ಕೈಗಾರಿಕಾ ಸಂಕೀರ್ಣಕ್ಕೆ ಕೋಟ್ಯಾಂತರ ಡಾಲರುಗಳ ಹೂಡಿಕೆ ವ್ಯರ್ಥ ಮಾಡುವುದು ಅಗೌರವ ತರುವ ಹುಚ್ಚುತನವಲ್ಲವೇ ? ಅಮೆರಿಕ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳಿಗೆ ಗೌರವ ತೋರಿಸುವ ರೀತಿಯೇ ಇದು ?

ಕ್ಯೂಬಾದ ಮೇಲೆ ತೀರ್ಪು ಕೊಡುವ ಮೊದಲು ನೀವು ಬಹಳ ತಿಳಕೊಳ್ಳುವುದಿದೆ. ಬಹಳ ಕಡಿಮೆ ಸಂಪನ್ಮೂಲಗಳಿಂದ ಬಹಳ ಸಾಮಾಜಿಕ ಕಲ್ಯಾಣದ ಕಾರ್ಯ ಸಾಧಿಸಬಹುದು ಎಂದು ಕ್ಯೂಬಾ ತನ್ನ ಶಿಕ್ಷಣ, ಆರೋಗ್ಯ, ಕ್ರೀಡೆ, ಸಂಸ್ಕೃತಿ, ಮತ್ತು ವಿಜ್ಞಾನದ ಕಾರ್ಯಕ್ರಮಗಳಿಂದ ತೋರಿಸಿದೆ. ಇದನ್ನು ನಮ್ಮ ದೇಶದಲ್ಲಿ ಮಾತ್ರವಲ್ಲ ಹಲವು ಇತರ ಬಡ ದೇಶಗಳಲ್ಲೂ ಸಾಧಿಸಿ ತೋರಿಸಿದೆ. ಅದೂ ಒಬಾಮಾರ ಅತ್ಯಂತ ಪ್ರಬಲ ದೇಶದ ಆಕ್ರಮಣಗಳು, ಆರ್ಥಿಕ-ಮಿಲಿಟರಿ ದಿಗ್ಬಂಧನ ಎದುರಿಸಿ ಈ ಸಾಧನೆಗಳನ್ನು ಮಾಡಿದೆ. ಇತರ ದೇಶಗಳ ಜತೆ ಸಹಕಾರಕ್ಕೆ ಕ್ಯೂಬಾಕ್ಕೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಯಾವತ್ತೂ ಅಡ್ಡಿ ಬರಲಿಲ್ಲ. 'ಕತ್ರಿನಾ' ಚಂಡಮಾರುತ ನಿಮ್ಮ ದೇಶದ ನ್ಯೂ ಒರ್ಲಿನ್ಸ್ ಪ್ರಾಂತ್ಯಕ್ಕೆ ಬಡಿದಾಗ ನಾವು ನಮ್ಮ ನೆರವನ್ನು ಕೊಟ್ಟೆವು. ನಮ್ಮ ಕ್ರಾಂತಿ -- ಡಾಕ್ಟರುಗಳು, ಆರೋಗ್ಯ ತಾಂತ್ರಿಕ ಸಿಬ್ಬಂದಿ, ಶಿಕ್ಷಕರು ಮತ್ತು ನಾಗರಿಕರನ್ನು ದೊಡ್ಡ ಸಂಖ್ಯೆಯಲ್ಲಿ ಜಗತ್ತಿನ ಯಾವುದೇ ಮೂಲೆಗೆ ಹೋಗಲು ಅಣಿ... ನೆರೆಸಬಲ್ಲುದು. ಅವರ ಹಕ್ಕುಗಳನ್ನು ಅಥವಾ ಪ್ರಾಕೃತಿಕ ಸಂಪತ್ತು ಕದಿಯಲು ಅಲ್ಲ. ಯಾವುದೇ ರೀತಿಯ ಘನವಾದ ಮಾನವೀಯ ಸೇವೆ ಸಲ್ಲಿಸಲು.

ಜನತೆಯ ಧೃಢನಿಶ್ಚಯ ಮತ್ತು ನೆಚ್ಚಿಕೆ ಒಂದು ಅಪರಿಮಿತ ಸಂಪನ್ಮೂಲ. ಇದನ್ನು ಬ್ಯಾಂಕಿನ ಲಾಕರುಗಳಲ್ಲಿ ಹಿಡಿದಿಡಲು ಆಗುವುದಿಲ್ಲ. ಅದು ಒಂದು ಸಾಮ್ರಾಜ್ಯದ ಹೇಸಿಗೆಯ ಗೋಮುಖವ್ಯಾಘ್ರ ರಾಜಕೀಯದ ಕೆಸರಲ್ಲಿ ಹುಟ್ಟಲಾರದು. ○

ನೋಟ



ಸಾಮ್ರಾಜ್ಯಶಾಹಿಯ ಅಭೂತಪೂರ್ವ ಆಕ್ರಮಣ

ಡಾ. ಜಿ. ಭಾಸ್ಕರ ಮಯ್ಯ

ಅರವಿಂದ ಅವರು ಬರೆದ Globalisation an attack on Indian Soverignity ಯಲ್ಲಿ ಈ ಮಾತುಗಳನ್ನು ಬರೆಯುತ್ತಾರೆ:

'ಈ ಹದ್ದುಗಳು ಕೇವಲ ಜೀವಂತ ಜನರನ್ನಷ್ಟೇ ಶಿಕಾರಿ ಮಾಡುವುದಲ್ಲ; ಬದಲಿಗೆ ಸತ್ತವರನ್ನೂ ಶಿಕಾರಿಯಾಡುತ್ತವೆ. ಭಯಾನಕ ಬಡತನದಿಂದಾಗಿ ವ್ಯಾಪಕವಾಗಿ ರೋಗಗಳು ಹರಡಿವೆ ಮತ್ತು ಸಾವುಗಳು ಸಂಭವಿಸಿವೆ. ಇದು ದೊಡ್ಡ ದೊಡ್ಡ ಔಷಧಿ ಕಂಪೆನಿಗಳಿಗೆ, ಖಾಸಗಿ ಆರೋಗ್ಯ ವಿಮಾ ನಿಗಮಗಳಿಗೆ ಮತ್ತು ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಖಾಸಗಿ ಆಸ್ಪತ್ರೆಗಳಿಗೆ ಲಾಭ ದೋಚಲು ಬಂಡವಾಳವಾಗಿದೆ. ಫರ್ನಾಂಡೀಸ್‌ರಂತಹ ವ್ಯಕ್ತಿಗಳು ಕಾರ್ಗಿಲ್ ಯುದ್ಧದಲ್ಲಿ ಸತ್ತ ಸೈನಿಕರ ಹೆಣಗಳ ವ್ಯಾಪಾರವನ್ನೂ ಮಾಡಿದ್ದಾರೆ. ಮಾನವ ಭ್ರೂಣಗಳನ್ನು ಅಮೇರಿಕಾದ ಸ್ಟೆಮ್‌ಸೆಲ್ ಸಂಶೋಧನಾ ಸಂಸ್ಥೆಗಳಿಗೆ ಮಾರಲಾಗಿದೆ. ಮಾನವ ಶರೀರದ ಅಂಗಗಳ ವ್ಯಾಪಾರ ಮಾಡುವ ನರಪಿಶಾಚಿಗಳು ಭಾರತದ ಬಡವರ ಕಣ್ಣು, ಯಕೃತ್, ಮೂತ್ರಪಿಂಡ, ಜೀನ್ಸ್ ಮೊದಲಾದವುಗಳನ್ನೆಲ್ಲ ತೆಗೆದು ಅನ್ಯ ಸರಕುಗಳಂತೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರುತ್ತಿದ್ದಾರೆ. ದೇಶದ ಮಹಿಳೆಯರನ್ನು ವ್ಯಾಪಕವಾಗಿ ತಮ್ಮ ಶರೀರವನ್ನು ಮಾರಲು ಆಸೆ ತೋರಿಸಲಾಗುತ್ತಿದೆ. ಭಾರತದ ಮೇಲೆ ಸಾಮ್ರಾಜ್ಯಶಾಹಿಯ ಅಭೂತಪೂರ್ವ ಆಕ್ರಮಣವೆನ್ನುವುದು ಕೇವಲ ಅಪಮಾನಜನಕ ಮಾತ್ರವಲ್ಲ, ಬದಲಿಗೆ ಅಮಾನವೀಯ, ಬರ್ಬರ ಮತ್ತು ಕ್ರೂರವಾದ ಪ್ರಕ್ರಿಯೆಯಾಗಿದೆ.

ಜಾಗತೀಕರಣವು ಅರ್ಥವ್ಯವಸ್ಥೆಯನ್ನು ಪುನರ್‌ರಚಿಸಿದೆ. ಅದರಲ್ಲಿ ಮಾರುಕಟ್ಟೆಯು ವಿದೇಶೀ ವ್ಯಾಪಾರವನ್ನು ಆಧರಿಸಿದೆ. ವಿದೇಶಿ ಬಂಡವಾಳ ಹೂಡಿಕೆಯನ್ನು ಆಧರಿಸಿದೆ, ಇಲ್ಲಿ ಶೇರು ಮಾರುಕಟ್ಟೆಯ ಸೂಚಕಾಂಕಗಳು ಅಂತಾರಾಷ್ಟ್ರೀಯ ಜೂಜುಕೋರರಿಂದ ನಿರ್ಧರಿಸಲ್ಪಡುತ್ತವೆ. ಇಲ್ಲಿ ಸರಕುಗಳ (ಕೃಷಿಯೂ ಸೇರಿಕೊಂಡಂತೆ) ಬೆಲೆಗಳು ಅಂತಾರಾಷ್ಟ್ರೀಯ ಬೆಲೆಗಳ ಆಧಾರದಲ್ಲಿ ನಿರ್ಣಯಿಸಲ್ಪಡುತ್ತವೆ. ರೂಪಾಯಿಯ ಮೌಲ್ಯನಿರ್ಣಯ ಡಾಲರಿನ ಮೂಲಕ ಮತ್ತು ದೇಶದಲ್ಲಿ ಡಾಲರಿನ ಪ್ರವಾಹದ ಆಧಾರದಲ್ಲಿ ಆಗುತ್ತದೆ. ಎಲ್ಲಾ ಬ್ಯಾಂಕಿಂಗ್, ವಿಮೆ ಮತ್ತು ಉಳಿತಾಯ ಕ್ರಮಶಃ ವಿದೇಶಿ ನಿಯಂತ್ರಣದಲ್ಲಿದೆ.

ಅರವಿಂದ ಅವರು ತಮ್ಮ ಗ್ರಂಥದಲ್ಲಿ ಹೀಗೆನ್ನುತ್ತಾರೆ: 'ಜಾಗತೀಕರಣದ ವಿಚಾರದಲ್ಲಿ ಕಾಂಗ್ರೆಸ್(ಐ), ಬಿಜೆಪಿ, ಸಂಯುಕ್ತರಂಗ ಎಲ್ಲವೂ ಒಂದೇ ಬಗೆಯ ಸಮಾನ ನೀತಿಯನ್ನೇ ಅನುಸರಿಸಿವೆ. ಈ ಎಲ್ಲಾ ರಾಜಕೀಯ ಪಕ್ಷಗಳ ಸರಕಾರಗಳ ಧೋರಣೆ ಮತ್ತು ನೀತಿಗಳ ಬೆಂಬಲವಿಲ್ಲದೆ ಸಾಮ್ರಾಜ್ಯವಾದಿಗಳು ದೇಶದ ಅರ್ಥವ್ಯವಸ್ಥೆಯ ಮೇಲೆ ಈ ಬಗೆಯ ನಿಯಂತ್ರಣ ಸಾಧಿಸುವುದು ಸಾಧ್ಯವೇ ಇಲ್ಲ. ಇವು ಏಕೆ ಹೀಗೆ ಮಾಡುತ್ತವೆಂದರೆ ಅವುಗಳಿಗೆ ಕಮಿಶನ್ ಸಿಗುತ್ತದೆ. ಹೀಗೆ ಮಾಡಲು ಅವರ ಬಳಿ ಅಧಿಕಾರವಿದೆ. ಈ ಪಕ್ಷಗಳೇ, ಈ ಜನರೇ ನಮ್ಮ ದೇಶ ಮತ್ತು ನಮ್ಮ ಜನತೆಯ ಬಹುಪ್ರಮುಖ ವಿಶ್ವಾಸ ಘಾತುಕರು; ಶತ್ರು ಸಹಾಯಕರು. ಇವರ ಸಹಕಾರವಿಲ್ಲದೆ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಸಾಮ್ರಾಜ್ಯಶಾಹಿಗಳು ಈ ದೇಶದಲ್ಲಿ ಒಂದು ದಿನವೂ ನಿಲ್ಲಲಾರರು'.

ಕೈಗಾರಿಕಾ ಸಂಸ್ಥೆಗಳ ಲಾಭ ಹೆಚ್ಚುತ್ತಾ ಹೋದಂತೆ ಭಾರತದ ಕೃಷಿಯು ತೀವ್ರ ಸಂಕಟದ ಕಾಲಘಟ್ಟವನ್ನು ಕ್ರಮಿಸುತ್ತಿದೆ. ವಾಜಪೇಯಿ ಅವರು ಅಧಿಕಾರಕ್ಕೆ ಬಂದ ಮೇಲೆ ವಿಶ್ವಬ್ಯಾಂಕ್ ಜಾರಿ ಮಾಡಿದ ಕೆಲವೊಂದು ಆದೇಶಗಳನ್ನು ಗಮನಿಸಿ:

1. ಯಾವ ಫಸಲಿನಿಂದ ಹೆಚ್ಚಿನ ಲಾಭವಿಲ್ಲವೋ ಅದರ ಬೆಳೆಯನ್ನು ಕಡಿಮೆಗೊಳಿಸಬೇಕು. ರಫ್ತು ಯೋಗ್ಯ ಫಸಲನ್ನು ಹಾಗೂ ಕಚ್ಚಾಧಾನ್ಯಗಳನ್ನು ಹೆಚ್ಚು ಹೆಚ್ಚು ಉತ್ಪಾದಿಸಬೇಕು ಮತ್ತು ಆಮದು ಮಾಡಿಕೊಳ್ಳಬೇಕು.
2. ಭಾರತೀಯ ಕೃಷಿಯು ವಿದೇಶಿ ಕೃಷಿಯೊಂದಿಗೆ ಸ್ಪರ್ಧಿಸಬೇಕು.
3. ರಸಗೊಬ್ಬರ, ನೀರು, ಬೀಜ ಮತ್ತು ಸಾಲದ ಬಗೆಗಿನ ಸರಕಾರಿ ಬೆಂಬಲವನ್ನು ಕಡಿಮೆಗೊಳಿಸುತ್ತಾ ಬರಬೇಕು. ಮತ್ತು ಕ್ರಮೇಣ ಸಂಪೂರ್ಣವಾಗಿ ನಿಲ್ಲಿಸಬಿಡಬೇಕು.
4. ದೇಶೀ ಕೃಷಿ ರಫ್ತುಗಳ ಬಗೆಗೆ ಯಾವುದೇ ನಿರ್ಬಂಧಗಳಿರಬಾರದು.
5. ವಿದೇಶೀ ಕೃಷಿ ಆಮದುಗಳ ಮೇಲೆ ಯಾವುದೇ ತಡೆ ನಿರ್ಬಂಧ ವಿಧಿಸಕೂಡದು.
6. ಧಾನ್ಯ, ಗೋಧಿ ಮತ್ತು ಅಕ್ಕಿಯನ್ನು ಖರೀದಿಸುವ, ಸಾಗಿಸುವ, ಸಂರಕ್ಷಿಸುವ FCI 'ಭಾರತೀಯ ಖಾದ್ಯನಿಗಮ'ದ ಜವಾಬ್ದಾರಿಯನ್ನು ಕೊನೆಗೊಳಿಸಬೇಕು.

ಈ ಆದೇಶಗಳಿಗನುಸಾರವಾಗಿ ಸರಕಾರವು 2000ದಲ್ಲಿ ಬಹಳಷ್ಟು ಪ್ರಚಾರ ಪಡೆದ ಕೃಷಿ ನೀತಿಯನ್ನು ಘೋಷಿಸಿತು. 15 ಪುಟಗಳ ದಸ್ತಾವೇಜು ಇನ್ನೇನು ಸ್ವರ್ಗವನ್ನೇ ಭೂಮಿಗೆ ತಂದಿರಿಸುತ್ತದೆಯೆಂದು ಭರವಸೆ ನೀಡಲಾಯಿತು. ಆದರೆ, ವಾಸ್ತವಿಕತೆಯೇನೆಂದರೆ ಆ ದಸ್ತಾವೇಜು ಮಾನ್‌ಸಾಂಟೋದಂತಹ ಬಹುರಾಷ್ಟ್ರೀಯ ಕಂಪೆನಿಗಳ ಅಧಿಕೃತ ಒಡಂಬಡಿಕೆಯಾಗಿದೆ. ಅದರ ಪರಿಣಾಮಗಳು ಈಗ ಹೆಜ್ಜೆಹೆಜ್ಜೆಗೂ ಗೋಚರಿಸುತ್ತಿವೆ.

ಆರ್ಥಿಕ ಪರಾವಲಂಬನೆ ಮತ್ತು ರಾಜಕೀಯ ಗುಲಾಮಗಿರಿ ಒಂದೇ ನಾಣ್ಯದ ಎರಡು ಮುಖಗಳು. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಇಂದು ದೇಶದ ಕಾನೂನು ಸಾಮ್ರಾಜ್ಯಶಾಹಿಗಳ ಅವಶ್ಯಕತೆಗೆ ಅನುಸಾರವಾಗಿಯೇ ಬದಲಾಗುತ್ತಿವೆ.

1998ರಲ್ಲಿ ಕೇಂದ್ರೀಯ ಕಾನೂನುಗಳನ್ನು ಮತ್ತು ಅದರ ಪರಿಷ್ಕಾರಗಳನ್ನು ಸಮೀಕ್ಷಿಸುವ ಒಂದು ಆಯೋಗವನ್ನು ರಚಿಸಲಾಯಿತು. ಅದು ಕೇವಲ ಐದೇ ತಿಂಗಳಲ್ಲಿ ಬಹಳಷ್ಟು ಶಿಫಾರಸ್ಸನ್ನು ಮಾಡಿ ಮುಗಿಸಿತು. ಅದು 1300 ಕಾನೂನುಗಳನ್ನು ರದ್ದುಮಾಡಲು ಮತ್ತು 2500 ಕಾನೂನುಗಳನ್ನು ತಿದ್ದುಪಡಿ ಮಾಡಲು ಶಿಫಾರಸ್ಸು ಮಾಡಿತು. ಎಲ್ಲಿಯ ವರೆಗೆಂದರೆ ಸಂವಿಧಾನವನ್ನೂ ಸಮಗ್ರವಾಗಿ ತಿದ್ದುಪಡಿಮಾಡುವ ಅಗತ್ಯತೆಯನ್ನೂ ಒತ್ತಿ ಒತ್ತಿ ಹೇಳಲಾಯಿತು.

ಯು.ಪಿ.ಎ. ಸರಕಾರದಲ್ಲೂ ಸಾಮ್ರಾಜ್ಯವಾದಿಗಳ ಅದರಲ್ಲೂ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪವನ್ನು ಸ್ಪಷ್ಟವಾಗಿ ಗಮನಿಸಬಹುದಾಗಿದೆ. ಪೆಪ್ಸಿ-ಕೋಕ್‌ನಲ್ಲಿರುವ ಕೀಟನಾಶಕಗಳ ವಿಚಾರವನ್ನು ಈ ಹೆಚ್ಚಿನ ಯಾವುದೇ ರಾಜಕೀಯ ಪಕ್ಷಗಳೂ ವಿಮರ್ಶೆಗೆ ಒಳಪಡಿಸಲಿಲ್ಲ. ಸಣ್ಣ ಸಣ್ಣ ಕಾರಣಗಳಿಗೆ ಸದನದಿಂದ ವಾಕ್ ಔಟ್ ಮಾಡುವ ವಿರೋಧ ಪಕ್ಷಗಳು ಕೂಡಾ ತುಟಿ ಪಿಟಿಕ್ಕೆನ್ನಲಿಲ್ಲ. ಇನ್ನೊಂದು ಉದಾಹರಣೆಯನ್ನು ಗಮನಿಸುವ. ಮಣಿಶಂಕರ ಅಯ್ಯರ್ ಪೆಟ್ರೋಲಿಯಮ್ ಮಂತ್ರಿಯಾಗಿರುವಾಗ ಭಾರತ-ಇರಾನ್ ಗ್ಯಾಸ್ ಪೈಪ್ ಲೈನ್ ಬಗ್ಗೆ ಅವರು ಸ್ವಲ್ಪ ಹೆಚ್ಚಾಗಿಯೇ ಬದ್ಧರಾಗಿದ್ದರು. ಇದರ ಪರಿಣಾಮವಾಗಿ ಅವರ ಆ ಖಾತೆ ಹೊರಟುಹೋಯಿತು. ಅವರನ್ನು ಪಂಚಾಯತ್ ಮಂತ್ರಿಯನ್ನಾಗಿ ಮಾಡಲಾಯಿತು. ಅವರ ಸ್ಥಾನದಲ್ಲಿ ಅಮೇರಿಕಾಕ್ಕೆ ಪ್ರಿಯವಾದವರೆಂದೇ ಜನಜನಿತರಾದ ಮುರಲೀ ದೇವಡಾರನ್ನು ನೇಮಿಸಲಾಯಿತು.

2006 - 07ರಲ್ಲಿ ವಿತ್ತಮಂತ್ರಿಗಳು ಸಿಮೆಂಟ್ ದರವನ್ನು ಇಳಿಸಲು ಹಲವಾರು ಕ್ರಮಗಳನ್ನು ಕೈಗೊಂಡರು. ಅದನ್ನು ಒಪ್ಪಲು ಸಿಮೆಂಟು ಉದ್ಯಮಿಗಳು ತಯಾರಿರಲಿಲ್ಲ. ಅವರು ಅದನ್ನು ನಿರಾಕರಿಸಿದರು. ಅನಂತರ ವಾಣಿಜ್ಯಮಂತ್ರಿ ಕಮಲನಾಥ್ ಅವರು ಒಂದು ವರ್ಷದ ತನಕ ದರ ಇಳಿಸದಂತೆ ಮಾಡಲು ಒಂದು ಮಧ್ಯಮ ಮಾರ್ಗವನ್ನು ಹುಡುಕಬೇಕಾಯಿತು. ಭಾರತದ ಸಿಮೆಂಟ್ ಕೈಗಾರಿಕೆ ಅಂತಾರಾಷ್ಟ್ರೀಯ ನಿಗಮಗಳ ಕೈವಶವಾಗಿಯಾಗಿತ್ತು. ಹೋಲಿಯಮ್ ಕಂಪೆನಿಯು ಎಸಿಸಿ ಮತ್ತು ಅಂಬುಜಾ ಸಿಮೆಂಟಿನ ಮೇಲೆ ನಿಯಂತ್ರಣ ಹೊಂದಿಯಾಗಿತ್ತು. ಇದರ ಪರಿಣಾಮವಾಗಿ ಹಲವಾರು ವರ್ಷಗಳಿಂದ ನಷ್ಟ ಅನುಭವಿಸುತ್ತಿದ್ದ ಎಸಿಸಿ 2004 - 05ರಲ್ಲಿ 81% ಲಾಭ ಪಡೆಯಿತು.

ಉದಾರೀಕರಣ ಹಾಗೂ ಜಾಗತೀಕರಣದಿಂದ ಸ್ತ್ರೀಯರು, ದಲಿತರು, ಆದಿವಾಸಿಗಳು ತೀವ್ರವಾಗಿ ತೊಂದರೆಗೊಳಗಾಗಿದ್ದಾರೆ. ಶೋಷಿತರಲ್ಲಿ ಮಹಿಳೆಯರು ಹೆಚ್ಚು ಪೀಡಿತರು. ಶಿಕ್ಷಣಕ್ಷೇತ್ರವೂ ವ್ಯಾಪಾರೀ ಆಯಾಮವನ್ನು ಪಡೆದುಕೊಂಡಿರುವುದರಿಂದ ಶಿಕ್ಷಣವೂ ದುಬಾರಿಯಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳು ಪ್ರವಾಸೋದ್ಯಮದ ಹೆಸರಿನಲ್ಲಿ ವೇಶ್ಯಾವೃತ್ತಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಅದನ್ನೊಂದು ಉದ್ಯಮವನ್ನಾಗಿಸಿವೆ. ಜಾಗತೀಕರಣದಿಂದಾಗಿ ಹೆಚ್ಚಿನ ಸಾರ್ವಜನಿಕ ಉದ್ಯಮಗಳು ಖಾಸಗಿಯಾಗಿದ್ದು ಮಾತ್ರವಲ್ಲದೆ ಖಾಸಗಿ ಕ್ಷೇತ್ರವು ತೀವ್ರವಾಗಿ ಬೆಳೆಯುತ್ತಿದ್ದುದರಿಂದ 'ಮೀಸಲಾತಿ' ಸಂಪೂರ್ಣವಾಗಿ ಅರ್ಥ ಕಳೆದುಕೊಂಡಿದೆ. ಏಕೆಂದರೆ ಖಾಸಗಿ ಕ್ಷೇತ್ರಕ್ಕೆ 'ಮೀಸಲಾತಿ'ಯ ಯಾವುದೇ ಬದ್ಧತೆಯಿಲ್ಲ. ಇದು ದಲಿತರನ್ನು ಮತ್ತೂ ಹಿಂದಕ್ಕೆ ತಳ್ಳುತ್ತದೆ. ಇನ್ನೊಂದೆಡೆ ಬೆಳವಣಿಗೆಯ ಅಭಿವೃದ್ಧಿಯ ಹೆಸರಿನಲ್ಲಿ ಛತ್ತೀಸಗಢ, ಜಾರ್‌ಖಂಡ್, ಒರಿಸ್ಸಾ ಮುಂತಾದ ಆದಿವಾಸಿ ಕ್ಷೇತ್ರಗಳಿಂದ ಆದಿವಾಸಿಗಳು ಅತಿದೊಡ್ಡ ಪ್ರಮಾಣದಲ್ಲಿ ನೆಲೆಕಳೆದುಕೊಳ್ಳುತ್ತಿದ್ದಾರೆ. ಆ ಕ್ಷೇತ್ರಗಳಲ್ಲಿ ಮಿತ್ತಲ್, ಟಾಟಾ, ಎಸ್ಸಾರ್ ಕೈಗಾರಿಕಾ ಕಂಪನಿಗಳು ನಿರಂತರವಾಗಿ ಆದಿವಾಸಿಗಳ ಮಾರಣಹೋಮ ನಡೆಸುತ್ತಿವೆ.

ಈ ಸಂದರ್ಭದಲ್ಲಿ, ಕ್ರಾಂತಿಕಾರೀ ಹೋರಾಟಗಳು ಒಂದೆಡೆಯಲ್ಲಿ ಕಾವು ಕಳೆದುಕೊಳ್ಳುವಂತೆ ಮಾಡುವ ತಂತ್ರದ ಭಾಗವಾಗಿ ಸ್ವಯಂಸೇವಾ ಸಂಸ್ಥೆಗಳನ್ನು ನಾಯಿಕೊಡೆಗಳಂತೆ ಬೆಳೆಸಲಾಗುತ್ತಿದೆ. ಈ ಸಂಸ್ಥೆಗಳು ಸಾಮ್ರಾಜ್ಯಶಾಹಿಯ ಚಾಕರಿಯಲ್ಲೇ ತಮ್ಮ ಧನ್ಯತೆಯನ್ನು ಕಂಡುಕೊಳ್ಳುತ್ತಿರುವುದು ಬಹುದೊಡ್ಡ ದುರಂತ. ❍

ದೇವರುಗಳ ರಾಜ್ಯದಲ್ಲಿ........

ಪುಟ 13 ರಿಂದ

ಎಂದು ವಂದನೆಯನ್ನೂ ಮಾಡಿದನು. ಸಾಹುಕಾರರು ಅವಸರದಲ್ಲಿದ್ದರು; ಮಸೀದಿಯೊಳಗಿನಿಂದ ನಮಾಜಿನ ಕರೆಯು ಕೇಳಿಸಲಾರಂಭಿಸಿತ್ತು. ರಹಮತ್‌ನಿಗೆ ನಿರಾಶೆಯಾಯಿತು; ಅಚ್ಚರಿಯೂ ಆಯಿತು. ಸಾಹುಕಾರರು ತನ್ನ ಗುರುತು ಹಿಡಿದಿರಲಾರರು ಎಂದು ಅವನು ಸಮಾಧಾನಪಟ್ಟನು. ಮಸೀದಿಯೊಳಗೆ ಕಾಲೆಳೆದ ರಹಮತ್ ವಲು (ನಮಾಜಿಗೆ ಮುನ್ನ ನೀರಿನಿಂದ ಶುದ್ಧಿಯಾಗುವುದು) ಮಾಡಿಕೊಂಡನು; ನಮಾಜಿನ ಸಾಲು ಸೇರಿಕೊಂಡನು. ನಮಾಜು ಮುಗಿದ ಕೂಡಲೇ ದೇವರ ಮಕ್ಕಳೆಲ್ಲ ತಪ್ಪಿಸಿಕೊಳ್ಳುವವರಂತೆ ಹೊರನುಗ್ಗುತ್ತಿದ್ದರು. ಆದ್ದರಿಂದ ಕುಂಟ ರಹಮತ್‌ನು ಕೊನೆಯವನಾಗಿ ಬಂದನು. ಸಾಹುಕಾರರ ಕಾರು ಮಾಯವಾಗಿತ್ತು.

ರಹಮತ್‌ನ ಹೆಗಲ ಚೀಲದಲ್ಲಿ ಸಾಹುಕಾರರಿಗೆ ಕೊಡಬೇಕಾದ ಪತ್ರವಿದ್ದಿತು. ಅವನಿಗೆ ಸಾಹುಕಾರರ ಬಗ್ಗೆ ಬಹಳ ಭರವಸೆಯಿದ್ದಿತು. ಅವರಿವರಲ್ಲಿ ಸಾಹುಕಾರರ ಮನೆಯ ವಿಳಾಸವನ್ನು ವಿಚಾರಿಸಿಕೊಂಡು ಬಿಸಿಲಿನಲ್ಲಿ ಕುಂಟಲಾರಂಭಿಸಿದನು.

ಸಾಹುಕಾರರು ಉಂಡು ಮಲಗಿದ್ದರು. ಕುಂಟ ರಹಮತ್‌ನು ಮುಚ್ಚಿದ ಬಾಗಿಲ ಬಳಿ ಜಗಲಿಯ ಮೇಲೆ ಕುಳಿತನು.

ಪವಿತ್ರ ಶುಕ್ರವಾರದಂದು ಸಾಹುಕಾರರು ಐದು ಬಾರಿಯೂ ನಮಾಜು ಮಾಡುತ್ತಿದ್ದರು. ನಮಾಜಿನ ವೇಳೆಗೆ ಸರಿಯಾಗಿ ಅವರನ್ನು ಹೆಂಗಸರು ಎಚ್ಚರಗೊಳಿಸುತ್ತಿದ್ದರು. ಸಂಜೆಯಾಯಿತು ಸಾಹುಕಾರರು ಎಚ್ಚರಗೊಂಡರು. 'ವಲು' ಮಾಡಲು ತಂಬಿಗೆಯಲ್ಲಿ ನೀರನ್ನೆತ್ತಿಕೊಂಡು ಮುಂಬಾಗಿಲು ತೆರೆದು ಹೊಸ್ತಿಲು ದಾಟಿದರು. ಕುಂಟ ರಹಮತ್‌ನು ಎದ್ದು ನಿಂತು ವಂದಿಸಿದನು, ಸಾಹುಕಾರರಿಗೆ ಕುಂಟನ ಗುರುತು ಸಿಕ್ಕಿತು. ಅವನ ಮುಖ ಬಣ್ಣ ಕಳೆದುಕೊಳ್ಳುತ್ತಿರುವುದನ್ನು ಕುಂಟ ರಹಮತನು ಅಚ್ಚರಿಯಿಂದ ನೋಡಿದನು. ಒಂದು ನಿಮಿಷದ ಕಾಲ ಸಾಹುಕಾರರು ಹೊಸ್ತಿಲ ಮೇಲೆಯೇ ನಿಂತಿದ್ದರು. ಅವರು ನಿಧಾನವಾಗಿ ಬಾಗಿದರು. ತಂಬಿಗೆಯನ್ನು ಹೊಸ್ತಿಲ ಮೇಲೆ ಇಟ್ಟು ಒಳಗೆ ಹೋದರು. ಸ್ವಲ್ಪವೇ ಹೊತ್ತಿನಲ್ಲಿ ಒಳಗಿನಿಂದ ಒಬ್ಬ ಯುವಕನು ಹೊರಗೆ ಬಂದನು. ಅವನು ಕೆಲಸದ ಹುಡುಗನಂತೆ ಕಾಣುತ್ತಿದ್ದನು. ಅವನ ಬಲಕೈಯ್ಯ ಬೆರಳುಗಳ ನಡುವೆ ಹತ್ತು ರೂಪಾಯಿಯ ಎರಡು ನೋಟುಗಳಿದ್ದವು. ಅವನು ಕರುಣೆಯಿಂದ ಕುಂಟನನ್ನು ದಿಟ್ಟಿಸಿದನು. ಯುವಕನು ಮೂಕನಾಗಿದ್ದನು; ಅವನು ಕೈಗಳಿಂದಲೇ ಹೋಗು ಎನ್ನುವಂತೆ ಸಂಜ್ಞೆ ಮಾಡಿದನು. ನೋಟುಗಳನ್ನು ಜಗಲಿಯಲ್ಲಿರಿಸಿ ಬಾಗಿಲು ಎಳೆದುಕೊಂಡನು.

ದೇವರು ಪವಿತ್ರ ಗ್ರಂಥದಲ್ಲಿ ಬರೆದು ಇಟ್ಟಿದ್ದನು,

"ಅಲ್ಲಾಹು ನಿಮಗೆ ಭೂಮಿಯನ್ನು ಹಾಸಿಗೆಯನ್ನಾಗಿಯೂ, ಆಕಾಶವನ್ನು ಮೇಲ್ಛಾವಣಿಯನ್ನಾಗಿಯೂ ರಚಿಸಿಕೊಟ್ಟನು. ಅವನು ನಿಮಗಾಗಿ ಸುಂದರ ಸ್ವರ್ಗವನ್ನು ನಿರ್ಮಿಸಿರುತ್ತಾನೆ.... ಆಮೆನ್." ❍



'ಇಂದ್ರ' - ದರ್ಶನ್ ಅಭಿಮಾನಿಗಳಿಗೆ ಮಾತ್ರ!

ಸಾಕಷ್ಟು ಅಬ್ಬರದೊಂದಿಗೆ ತೆರೆಗೆ ಬಂದಿರುವ 'ಇಂದ್ರ' ಚಿತ್ರ ದರ್ಶನ್‌ರ ಇನ್ನೊಂದು ಚಿತ್ರವಷ್ಟೆ. ಕೈಯಲ್ಲಿ ಲಾಂಗು, ಮತ್ತು ಅದೇ ಹಳೆಯ ಸವಕಲು ಮ್ಯಾನರಿಸಂಗಳ ಮುಂದುವರಿಕೆಯೇ ಈ ಚಿತ್ರ. ಇದು ತಮಿಳಿನ 'ಅರಸು' ಎಂಬ ಚಿತ್ರದ ನಕಲು. ಹಾಗಾಗಿಯೇ ತೆಲುಗು - ತಮಿಳು ಚಿತ್ರಗಳ ಛಾಯೆಯೇ ಅವರಿಸಿಕೊಂಡಿರುವ ಈ ಚಿತ್ರದಲ್ಲಿ ಕನ್ನಡತನವನ್ನು ದುರ್ಬೀನ್ ಹಾಕಿಕೊಂಡು ಹುಡುಕಬೇಕು.

ಹೆಚ್.ವಾಸು ನಿರ್ದೇಶನದ ಸೇಡಿನ ಜಾಡು ಹಿಡಿದ ಸವಕಲಾದ ಕಥೆ, ಲಾಂಗು-ಮಚ್ಚುಗಳ ಘರ್ಜನೆ, ಪಾಳೇಗಾರಿ ಮೌಲ್ಯಗಳ ವಿಜೃಂಭಣೆಯ ಈ ಚಿತ್ರದಲ್ಲಿ ಹೆಚ್ಚಿನದೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಮೊದಲ ಬಾರಿಗೆ ದ್ವಿಪಾತ್ರದಲ್ಲಿ ಅಭಿನಯಿಸಿರುವ ದರ್ಶನ್ ಅವರ ಅಭಿಮಾನಿಗಳಿಗೆ ರಂಜಿಸಲು ಯತ್ನಿಸಿದ್ದಾರೆ.

ದೇವಸ್ಥಾನವೊಂದರಲ್ಲಿ ಗುಮಾಸ್ತನಾಗಿ ಕೆಲಸ ಮಾಡುವ ಇಂದ್ರ(ದರ್ಶನ್) ಸೀದಾ ಸಾದಾ ಹುಡುಗ. ಆದರೆ ಜೈಲಿನಿಂದ ಬಿಡುಗಡೆಗೊಂಡ ರೌಡಿಯೊಬ್ಬನನ್ನು ನಡುಬೀದಿಯಲ್ಲಿ ಕೊಚ್ಚಿಹಾಕುವ ಮುಖಾಂತರ ಅವನ ನಿಜ ರೂಪ ಅನಾವರಣಗೊಳ್ಳುತ್ತದೆ. ಕರಾವಳಿ ತೀರದಲ್ಲಿ ವಾಸಿಸುವ ಅವರ ಕುಟುಂಬ ಅಗರ್ಭ ಶ್ರೀಮಂತಿಕೆಯದು. ಇಂದ್ರನ ಅಣ್ಣ ರಾಯಣ್ಣ ಸಾವಿರಾರು ಜನರಿಗೆ ಉದ್ಯೋಗ ನೀಡಿ



ಅವರ ಮೆಚ್ಚುಗೆ ಮಾತ್ರನಾದವನು ಮತ್ತು ಸ್ಥಳೀಯವಾಗಿ ಪ್ರಬಲನಾದವನು. ಅಂದರೆ ಒಂದು ರೀತಿಯಲ್ಲಿ ಡಾನ್! ಅವನ ಎದುರಾಳಿಗಳ ಪೈಪೋಟಿಯಲ್ಲಿ ರಾಯಣ್ಣ ಮತ್ತು ಆತನ ಹೆಂಡತಿ ಹತ್ಯೆಯಾಗುತ್ತಾರೆ. ಆಗ ಇಂದ್ರ ಇದಕ್ಕೆ ಪ್ರತೀಕಾರ ತೀರಿಸಲು ಮುಂದಾಗಿ ಒಬ್ಬನನ್ನು ಹತ್ಯೆ ಮಾಡಿ ತಲೆ ಮರೆಸಿಕೊಂಡು ಮೈಸೂರಿನ ದೇವಸ್ಥಾನದಲ್ಲಿ ಕೆಲಸಕ್ಕೆ ಸೇರಿರುತ್ತಾನೆ. ಪ್ರತಿಕಾರದ ಬಾಕಿ ಇನ್ನೂ ಚುಕ್ತಾ ಆಗಿರುವುದಿಲ್ಲ. ನಡುಬೀದಿಯಲ್ಲಿ ಹತ್ಯೆಯಾಗುವ ರೌಡಿಯೂ ಇವನ ಹಿಟ್‌ಲಿಸ್ಟ್‌ನಲ್ಲಿದ್ದವನು.

ಅಂತಿಮವಾಗಿ ಇಂದ್ರ ತನ್ನ ವಿರೋಧಿಗಳೆಲ್ಲರನ್ನು ಸರ್ವನಾಶ ಮಾಡುತ್ತಾನೆ. ಇವೆಲ್ಲದರ ಮಧ್ಯೆ ಪುರೋಹಿತಳ ಮಗಳ ಪ್ರೇಮ ಪ್ರಸಂಗ, ವಿದೇಶದಲ್ಲಿ ಎರಡು 'ಡಿಂಗ್‌ಡಾಂಗ್ ಸಾಂಗ್' ಎಲ್ಲವೂ ಇದೆ.

ಕರಾವಳಿಯ ರಾಯಣ್ಣನ ಪಾತ್ರದಲ್ಲಿ ದರ್ಶನ್ ಗಮನ ಸೆಳೆಯುತ್ತಾರೆ. ತುಳು ಮಿಶ್ರಿತ ಕನ್ನಡದ ಸಂಭಾಷಣೆಯ ಧಾಟಿ ಮೆಚ್ಚುಗೆಯಾಗುತ್ತದೆ. ನಾಯಕಿಯಾಗಿ ನಮಿತಾಗೆ ಹೆಚ್ಚಿನ ಆದ್ಯತೆಯಿಲ್ಲ- ಅಭಿನಯವೂ ಅಷ್ಟಕ್ಕಷ್ಟೇ. ದೈಹಿಕವಾಗಿ ಮಾತ್ರ ಕನ್ನಡದ ರಕ್ಷಿತಾಳ ಪ್ರತಿರೂಪ ದಂತಿದ್ದಾಳೆ. ಇನ್ನು ಕಾಮಿಡಿ ಟ್ರಾಕ್‌ನಲ್ಲಿ ದೇವಸ್ಥಾನದಲ್ಲಿ ಘಂಟೆ ಬಾರಿಸುವವನಾಗಿ ಬುಲೆಟ್ ಪ್ರಕಾಶ್ ಹಾಸ್ಯ ದೇವರಿಗೇ ಪ್ರೀತಿಯಾಗಬೇಕು! ಅವಿನಾಶ್, ವಿನಯಪ್ರಸಾದ್, ತಮಿಳಿನ ಆನಂದರಾಜ್ ಮುಂತಾದವರಿದ್ದರಾದರೂ ಯಾರಿಗೂ ಹೆಚ್ಚಿನ ಅವಕಾಶವಿಲ್ಲ.

ಈಗ ಮಿಂಚುತ್ತಿರುವ ಸಂಗೀತ ನಿರ್ದೇಶಕ ಹರಿಕೃಷ್ಣರ ಸಂಗೀತ ಈ ಚಿತ್ರದಲ್ಲಿ ನಲುಗಿದೆ! ಇದು ದರ್ಶನ್ ಅಭಿಮಾನಿಗಳಿಗೋಸ್ಕರ, ಅಭಿಮಾನಿಗಳಿಗೆ ಮಾತ್ರವೇ ಈ ಚಿತ್ರ! ○

ಇದು ವಿಚಾರವಾದಿಗಳಿಗೆ ಸಂದ ಜಯ

ಶಬರಿಮಲೈ ಜ್ಯೋತಿ ಮಾನವ ನಿರ್ಮಿತ

ಪ್ರಸಿದ್ಧ ಶಬರಿಮಲೈ ದೇವಸ್ಥಾನದಲ್ಲಿ ಪ್ರತಿವರ್ಷ ಮಕರ ಸಂಕ್ರಾಂತಿಯಂದು ಭಕ್ತರಿಗೆ ಕಾಣಿಸಿಕೊಳ್ಳುವ 'ಮಕರ ಜ್ಯೋತಿ' ಅತೀಂದ್ರಿಯ ಬೆಳಕಲ್ಲ. ಅದು ಮಾನವ ನಿರ್ಮಿತ ಎಂದು ಅಯ್ಯಪ್ಪ ಸ್ವಾಮಿ ದೇವಸ್ಥಾನದ ವಕ್ತಾರ ರಾಹುಲ್ ಈಶ್ವರ್ ಮಂಗಳವಾರ ತಿಳಿಸಿದ್ದಾರೆ.

ಪೂರ್ವ ಪ್ರದೇಶದ ಪುನ್ನಂಬಳಮೇಡು ಬೆಟ್ಟದ ನಡುವೆ ಬುಡಕಟ್ಟು ಜನರು ಈ ಬೆಳಕನ್ನು ಹಚ್ಚುತ್ತಾರೆ. ಇದು ಪವಿತ್ರ ಜ್ಯೋತಿ. ಇದನ್ನು ಮೊದಲು ಪರಶುರಾಮ ಆಚರಿಸಿದ ಎಂಬ ದಂತಕತೆಯಿದೆ. ಈ ಸಂದರ್ಭದಲ್ಲಿ ನಕ್ಷತ್ರ ಕಾಣಿಸಿಕೊಳ್ಳುತ್ತದೆ. ಆಗ ಬೆಟ್ಟದಲ್ಲಿನ ಬುಡಕಟ್ಟು ಜನರು ಜ್ಯೋತಿಯನ್ನು ಉರಿಸುತ್ತಾರೆ. ಆದರೆ ಯಾರು ಉರಿಸುತ್ತಾರೆ ಎಂಬುದು ತಮಗೆ ಗೊತ್ತಿಲ್ಲ ಎಂದು ಈಶ್ವರ ಅವರು ವಿವರಿಸಿದ್ದಾರೆ.

ಶಬರಿಮಲೈ ದೇವಸ್ಥಾನವು ಅಸಂಖ್ಯ ಭಕ್ತರು ಭೇಟಿ ನೀಡುವ ಪ್ರಪಂಚದ ಐದು ಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದು. ಇದು ವಿವಾದಗಳು ಹಾಗೂ ತಪ್ಪು ಮಾಹಿತಿಗಳಿಂದ ಮುಕ್ತವಾಗಿರಬೇಕೆಂಬ ಉದ್ದೇಶದಿಂದ ಈ ಸ್ಪಷ್ಟನೆ ನೀಡುತ್ತಿರುವುದಾಗಿ ಅವರು ಹೇಳಿದ್ದಾರೆ.

ರಾಹುಲ್ ಈಶ್ವರ್ ಅವರು ಅಯ್ಯಪ್ಪ ಸ್ವಾಮಿ ದೇವಸ್ಥಾನದ ಪರಮೋಚ್ಛ ಅರ್ಚಕ ಕಂತಾರು ಮಹೇಶ್ವರಾರು ಅವರ ಮೊಮ್ಮಗನಾಗಿದ್ದಾರೆ.



ಜಂಟಿ ಕಾರ್ಯಾಚರಣೆ : ಅಂತೆಯೇ ಈ ಕುರಿತು ತಿರುವನಂತಪುರ ದೇವಸ್ಥಾನ ಸಮಿತಿಯ ಮೇಲ್ವಿಚಾರಕ ಹಾಗೂ ಮಾಜಿ ಅಧ್ಯಕ್ಷ ಜಿ.ರಾಮನ್ ನಾಯರ್ ಅವರು ಬಳಿ ಇದಕ್ಕೆ ಸೂಕ್ತ ವಿವರಣೆಯೂ ಇದೆ.

ಈ ಬೆಳಕು, ಕೇರಳ ರಾಜ್ಯ ವಿದ್ಯುತ್ ನಿಗಮ ಹಾಗೂ ಪೊಲೀಸರ ಪರಿಶ್ರಮದಿಂದ ಕಾಣಿಸಿಕೊಳ್ಳುತ್ತದೆ. ಈ ಹಿಂದೆ ವಿಚಾರವಾದಿಗಳು ಈ ಬೆಳಕಿನ ಮೂಲವನ್ನು ಪತ್ತೆಹಚ್ಚಿದಾಗ ಜನರು ಅವರನ್ನು ಹಿಗ್ಗಾಮುಗ್ಗ ಥಳಿಸಿದ್ದರು ಎಂಬುದನ್ನು ಅವರು ನೆನಪಿಸಿಕೊಳ್ಳುತ್ತಾರೆ.

15 ಜನರ ಸಮಿತಿಯೊಂದು 1981ರಲ್ಲಿ ಕೇರಳ ಯುಕ್ತಿವಿಧಿ ಸಂಘಂ ಎಂಬ ಹೆಸರಿನಲ್ಲಿ ಈ ದಿವ್ಯ ಜ್ಯೋತಿಯು ಹೇಗೆ ಹುಟ್ಟುತ್ತದೆ ಎಂಬುದನ್ನು ಬಯಲಿಗೆಳೆದಿದ್ದರು. ಸ್ಥಳದಲ್ಲಿದ್ದು ಛಾಯಾಚಿತ್ರ ತೆಗೆಯುವ ಮೂಲಕ ಪೊಲೀಸರು ಮತ್ತು ಕೇರಳ ವಿದ್ಯುತ್ ನಿಗಮದವರು ಪರಿಶ್ರಮಪಟ್ಟು ಈ ಬೆಳಕು ಹಚ್ಚುವ ಬಗೆಯನ್ನು ಜನರೆದುರು ಸಾಕ್ಷಿ ಸಮೇತ ತೆರೆದಿಟಟಿದ್ದರು. ಆದರೆ ಮುಂದಿನ ವರ್ಷ ಈ ವಿಚಾರವಾದಿಗಳು ಶಬರಿಮಲೈ ದೇವಸ್ಥಾನಕ್ಕೆ ಹೋದಾಗ ಜನರು ಇದನ್ನು ನಂಬದೆ ಅವರನ್ನು ಮನಬಂದಂತೆ ಥಳಿಸಿದ್ದರು ಎಂದು ಸಮಿತಿಯ ಸದಸ್ಯ ಎ.ವಿ.ಜೋಸ್ ಈಗ ಸ್ಮರಿಸಿಕೊಳ್ಳುತ್ತಾರೆ.

ಕೇರಳ ಪ್ರವಾಸೋದ್ಯಮ ಮಂಡಳಿಯ ಅಧ್ಯಕ್ಷ ಚೆರಿಯನ್ ಫಿಲಿಪ್ ಅವರ ಮಕರಜ್ಯೋತಿಯ ಸತ್ಯಾಸತ್ಯತೆ ಕುರಿತಂತೆ ನೀಡಿದ ಹೇಳಿಕೆ ಬಗ್ಗೆ ರಾಹುಲ್ ಈ ಸ್ಪಷ್ಟನೆ ನೀಡಿದ್ದಾರೆ.

○ (ಪ್ರಜಾವಾಣಿ)

ಸರಕಾರಿ ಸಹಾಯ

ಕೂಳಿರದ ಸೂರಿರದ ಮಂದಿಗಳೇ ತಾಳಿ
ಬದುಕಲಿಕೆ ದಾರಿಯನು ಹೇಳುವೆನು ಕೇಳಿ
ಹೇಳಿದರೆ ಗೋವುಗಳ ಸಾಕುವೆನು ಎಂದು
ಸರ್ಕಾರ ಕೋಟಿ ಹಣ ನೀಡುವುದು ತಂದು

ಹಾಲು

ಗೋವು ಮಾಂಸದಿ ಹುಟ್ಟಿ ಬಂದಿರುವ ಹಾಲು
ಈ ಜನಕೆ ನಿಷೇಧ ಯಾಕಿಲ್ಲ ಹೇಳು?
ಇದು ನೋಡಿ ಈ ಜನಕೆ ಜೀವದಾಧಾರ
ಹೀರುವರು ಹೀಗಾಗಿ ಹಸು ಮಾಂಸ ಸಾರ

- ವಿಡಂಬಾರಿ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor : S.Y.GURUSHANTH